ಸ್ಥಾಪನೆ : 1927

ನೊಂದಣಿ ಸಂ. : 1468
ದಿನಾಂಕ : 29.07.1927

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## 2024-25ನೇ ಸಾಲಿನ ವಾರ್ಷಿಕ ವರದಿ

## ಲೆಕ್ಕಪರಿಶೋಧನಾ ವರದಿ ಹಾಗೂ
## ಆಡಳಿತ ಮಂಡಳಿಯವರ ಸಮಾಧಾನ

96 ನೇ

## ವಾರ್ಷಿಕ ಸರ್ವ ಸದಸ್ಯರ ಸಭೆ

**07-09-2025, ಭಾನುವಾರ**

THE GRAIN MERCHANTS' CO-OPERATIVE BANK LTD.,

ESTD : 1927

ಪ್ರಧಾನ ಕಛೇರಿ ಹಾಗೂ ಶಾಖೆಗಳು :

ನಂ. 2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018
ದೂರವಾಣಿ : 26679041, 26677552, 26672928, 42047786, 7411414285
Email : gmc@gmcbho@yahoo.co.in Website : www.gmcbank.net

ನಂ. 247, 2ನೇ ಮಹಡಿ, 7ನೇ ಕ್ರಾಸ್, ಎ.ಪಿ.ಎಂ.ಸಿ. ಯಾರ್ಡ್, ಯಶವಂತಪುರ, ಬೆಂಗಳೂರು-560022
ದೂರವಾಣಿ : 23370902, 23375264

ನಂ. 231, ಮೊದಲನೇ ಮಹಡಿ, ದೊಡ್ಡಮಠ ಕಾಂಪ್ಲೆಕ್ಸ್, ಅಕ್ಕಿಪೇಟೆ ಮುಖ್ಯರಸ್ತೆ, ಬೆಂಗಳೂರು-560053
ದೂರವಾಣಿ : 22284297, 22877141

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018

## ಹಾಲಿ ಆಡಳಿತ ಮಂಡಳಿ
## ನಿರ್ದೇಶಕರು



ಶ್ರೀ ಕೆ.ಆರ್. ಆನಂದಬಾಬು
ಅಧ್ಯಕ್ಷರು



ಶ್ರೀ ಕೆ.ಆರ್. ಕೃಷ್ಣ
ಉಪಾಧ್ಯಕ್ಷರು



ಶ್ರೀ ಕೆ.ಸಿ. ರುದ್ರಮೂರ್ತಿ
ನಿರ್ದೇಶಕರು



ಶ್ರೀ ಎನ್. ದಯಾನಂದ
ನಿರ್ದೇಶಕರು



ಶ್ರೀ ಕೆ.ಎಂ. ಶ್ರೀನಿವಾಸಮೂರ್ತಿ
ನಿರ್ದೇಶಕರು



ಶ್ರೀ ಕಿರಣ್ ಚಂದ್ರಶೇಖರ್
ನಿರ್ದೇಶಕರು



ಶ್ರೀ ಬಿ.ಎಸ್. ಪ್ರಸನ್ನಬಾಬು
ನಿರ್ದೇಶಕರು



ಶ್ರೀ ಕೆ. ರಾಮಚಂದ್ರ
ನಿರ್ದೇಶಕರು



ಶ್ರೀ ಎನ್. ಮುರುಳಿಧರ್
ನಿರ್ದೇಶಕರು



ಶ್ರೀಮತಿ ಹೆಚ್.ಸಿ. ನಾಗರತ್ನ
ನಿರ್ದೇಶಕರು



ಶ್ರೀಮತಿ ಎನ್. ಮಾಲಿನಿ
ನಿರ್ದೇಶಕರು



ಶ್ರೀ ಎಂ. ದಿನೇಶ್
ನಿರ್ದೇಶಕರು



ಶ್ರೀ ಹೆಚ್.ಕೆ. ಚಂದ್ರಪ್ಪ
ನಿರ್ದೇಶಕರು



ಶ್ರೀ ಎನ್. ವೆಂಕಟಾಚಲಂ
ನಿರ್ದೇಶಕರು



ಶ್ರೀ ಎನ್. ಗಿರೀಶ್ ಬಾಬು
ನಿರ್ದೇಶಕರು



ಶ್ರೀಮತಿ ಉಮಾ ಆರ್.
ಪ್ರಭಾರ ಕಾರ್ಯದರ್ಶಿ

ಸ್ಥಾಪನೆಃ 1927 ನೋಂದಣಿ ಸಂ.ಃ 1468

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

ದೂಃ 26679041, 26677552, 26672928, 42047786, 7411414285

## 2024-25ನೇ ಸಾಲಿನ 96 ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಆರ್.ಆನಂದಬಾಬುರವರ ಅಧ್ಯಕ್ಷತೆಯಲ್ಲಿ 2024-25 ನೇ ಸಾಲಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕಃ 07.09.2025ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ರಲ್ಲಿ ಇರುವ ಬ್ಯಾಂಕಿನ ಪ್ರಧಾನ ಕಛೇರಿ ಆವರಣದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

## ಕಾರ್ಯಕ್ರಮ

| | ವಿಷಯಗಳು | ಪುಟ ಸಂಖ್ಯೆ |
|---|---|---|
| 01 | ಪ್ರಾರ್ಥನೆ | |
| 02 | ಅಧ್ಯಕ್ಷರಿಂದ ಸ್ವಾಗತ. | 3-4 |
| 03 | 2024-25ನೇ ಸಾಲಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು. | 1-2 |
| 04 | ಕಳೆದ ವಾರ್ಷಿಕ ಸರ್ವಸದಸ್ಯರ ಸಭೆಯ ನಂತರ ಮೃತರಾದ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ. | 17 |
| 05 | ದಿನಾಂಕ 22.09.2024ರಂದು ನಡೆದ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು. | 5-16 |
| 06 | 2024-25ನೇ ಸಾಲಿನ ಆಡಳಿತ ಮಂಡಳಿ ವರದಿ ಅಂಗೀಕರಿಸುವುದು. | 17-27 |
| 07 | 2024-25ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ-ನಷ್ಟ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಜಾಯಿಷಿಯನ್ನು ಅನುಮೋದಿಸುವುದು. | 28-64 |
| 08 | ಲೆಕ್ಕಪರಿಶೋಧಕರ ದೃಢೀಕರಣದಂತೆ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಮತ್ತು ನಿಧಿಗಳ ವಾಸ್ತವಿಕ ಬಳಕೆಯ ಅನುಮೋದನೆ. | 17-18 |
| 09 | 2024-25ನೇ ಸಾಲಿನ ನಿವ್ವಳ ಲಾಭದ ಹಂಚಿಕೆ. | 65 |
| 10 | 2024-25ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2025-26 ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿ ಮಂಜೂರಾತಿ ಪಡೆಯುವುದು. | 66 |
| 11 | ಬ್ಯಾಂಕಿನ ಉಪನಿಯಮಗಳ (ಬೈಲಾ) ತಿದ್ದುಪಡಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 65 |
| 12 | ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2020-21ನೇ ಸಾಲಿನ ಡಿವಿಡೆಂಡ್ ಮೊಬಲಗನ್ನು ಸರ್ವಸದಸ್ಯರ ಸಭೆ ಅನುಮತಿ ಪಡೆದು ಉಪನಿಯಮ ರೀತ್ಯ ಆಪದ್ಧನ ನಿಧಿ (Reserve Fund)ಗೆ ವರ್ಗಾಯಿಸುವ ಬಗ್ಗೆ. | 23 |
| 13 | ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಅಖೈರುಗೊಳಿಸುವ ಬಗ್ಗೆ. | 22 |
| 14 | ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಮೇರೆಗೆ M/s NNR & Co., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರನ್ನು 2025-26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ (2ನೇ ಅವಧಿಗೆ) ನೇಮಕ ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಅನುಮೋದಿಸುವ ಬಗ್ಗೆ. | 27 |
| 15 | ಇತರ ಬ್ಯಾಂಕುಗಳಿಂದ ಪಡೆಯಬಹುದಾದ 10 ಕೋಟಿ ರೂ.ಗಳ ಸಾಲದ ಪರಿಮಿತಿಯನ್ನು ಮಂಜೂರು ಮಾಡುವುದು. | |
| 16 | ಮುನ್ಸೂಚನೆಯ ಮೇರೆಗೆ ಬಂದ ಅರ್ಜಿಗಳು ಹಾಗೂ ಸಭಾಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಬಹುದಾದ ಇತರೇ ವಿಷಯಗಳು. | |
| 17 | ವಂದನಾರ್ಪಣೆ. | |

ದಿನಾಂಕ: 30.07.2025 ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸ್ಥಳಃ ಬೆಂಗಳೂರು ಆರ್. ಉಮಾ ಪ್ರಭಾರ ಕಾರ್ಯದರ್ಶಿ

# ಸೂಚನೆ

1 2024–25 ರ ಆಡಳಿತ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯ ವಿವರಗಳು ದಿನಾಂಕ 26.08.2025ರ ನಂತರ ಬ್ಯಾಂಕಿನ ವೆಬ್‌ಸೈಟ್ www.gmcbank.net ನಲ್ಲಿ ಪ್ರಕಟಿಸಲಾಗುವುದು ಹಾಗೂ ವರದಿ ಪುಸ್ತಕಗಳನ್ನು ಪ್ರಧಾನ ಕಛೇರಿ/ಶಾಖೆಗಳ ಕೆಲಸದ ವೇಳೆಯಲ್ಲಿ ಪಡೆಯಬೇಕಾಗಿ ಕೋರಿದೆ.

2. ಸರ್ವಸದಸ್ಯರ ಸಭೆಯ ವಿಷಯದ ಕುರಿತು ಚರ್ಚಿಸುವುದಿದ್ದಲ್ಲಿ/ಸ್ಪಷ್ಟೀಕರಣ/ಸಲಹೆ ಸೂಚನೆಗಳಿದ್ದಲ್ಲಿ ಐದು ದಿವಸ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕಿಗೆ ಸಲ್ಲಿಸಿದಲ್ಲಿ ಆದ್ಯತೆ ಮೇರೆ ಅಧ್ಯಕ್ಷರ ಅನುಮತಿ ಮೇರೆಗೆ ಸರ್ವಸದಸ್ಯರ ಸಭೆಯಲ್ಲಿ ಸಮಜಾಯಿಷಿ ನೀಡಿ, ದಾಖಲಿಸಲಾಗುವುದು.

3. ಕರ್ನಾಟಕ ಸಹಕಾರ ಸಂಘಗಳ ಕಾನೂನು 1959ರ ಕಲಂ 20(2) (ಎ ಋ) ಹಾಗೂ ಬ್ಯಾಂಕಿನ ಬೈಲಾ ಸಂಖ್ಯೆ 47(5) (ಡಿ) ಪ್ರಕಾರ ದಿನಾಂಕ 06.09.2024 ರ ನಂತರ ಬ್ಯಾಂಕಿನ ಸದಸ್ಯತ್ವವನ್ನು ಪಡೆದಿರುವಂತಹ ಸದಸ್ಯರುಗಳಿಗೆ ಬ್ಯಾಂಕಿನ ಈ ಸರ್ವಸದಸ್ಯರ ಸಭೆಯಲ್ಲಿ ಮತ ಚಲಾಯಿಸಲು ಹಕ್ಕಿರುವುದಿಲ್ಲ.

4. ಬ್ಯಾಂಕಿನ ಉಪವಿಧಿ ಸಂಖ್ಯೆ 19(3)ರ ನ್ವಯ ಬ್ಯಾಂಕಿನ ಯಾರೇ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಸರ್ವಸದಸ್ಯರ ಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗದಿದ್ದಲ್ಲಿ ಮತ್ತು ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಒಂದು ವರ್ಷದವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಹಾಗೂ ಕೆ.ವೈ.ಸಿ ಪಾಲನೆ ಕಡ್ಡಾಯವಾಗಿರುತ್ತದೆ.

5. ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು : ಸದಸ್ಯರು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.1,000/–, ಕನಿಷ್ಠ ಷೇರು ಮೊಬಲಗು ರೂ.1,000/– ಮತ್ತು ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಮೂರು ಬ್ಯಾಂಕಿಂಗ್ ವ್ಯವಹಾರ.

6. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ತಿದ್ದುಪಡಿಗೊಂಡು ಕಲಂ 26ಎ ರ ಅನ್ವಯ, ಬ್ಯಾಂಕಿನಲ್ಲಿ ಹತ್ತು ವರ್ಷ ಅವಧಿಗೂ ಮೀರಿ ಚಾಲ್ತಿಯಲ್ಲಿಲ್ಲದ ಉಳಿತಾಯ ಖಾತೆ, ಚಾಲ್ತಿ ಖಾತೆ, ಠೇವಣಿ ಬಾಕಿ ಹೊಂದಿರುವ ಯಾವುದೇ ಖಾತೆಗಳಲ್ಲಿ ಜಮಾ ಇರುವ ಮೊತ್ತವನ್ನು ಮತ್ತು ಅವಧಿ ಮುಗಿದು ಹತ್ತು ವರ್ಷಗಳಿಗೂ ಮೀರಿ ಸಂದಾಯವಾಗದ ಠೇವಣಿಗಳನ್ನು ರಿಸರ್ವ್ ಬ್ಯಾಂಕಿನಲ್ಲಿನ ಆಇಂಈಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿದೆ. ಕಾರಣ ತಾವು ಬ್ಯಾಂಕಿನಲ್ಲಿ ಹೊಂದಿರುವ ಠೇವಣಿಗಳನ್ನು ಅವಧಿ ಮುಗಿದ ಕೂಡಲೇ ನವೀಕರಿಸಿಕೊಳ್ಳಬೇಕು ಹಾಗೂ ಇತರ ಖಾತೆಗಳನ್ನು (ಉಳಿತಾಯ/ಚಾಲ್ತಿ ಇತ್ಯಾದಿ) ಚಲಾವಣೆಯಲ್ಲಿ ಇಟ್ಟುಕೊಳ್ಳಬೇಕು. ತಪ್ಪಿದಲ್ಲಿ ಅಂತಹ ಮೊತ್ತವನ್ನು ರಿಸರ್ವ್ ಬ್ಯಾಂಕಿನ ಆಇಂಈ ಖಾತೆಗೆ ವರ್ಗಾಯಿಸಲಾಗುವುದು.

7. ಭಾರತೀಯ ರಿಸರ್ವ್ ಬ್ಯಾಂಕಿನ ಮಾಹಿತಿಗಾಗಿ ಬ್ಯಾಂಕಿನ ಸದಸ್ಯರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಜೋರೋಆಸ್ಟ್ರಿಯನ್ ಮತ್ತು ಬೌಧ ಧರ್ಮಕ್ಕೆ ಸೇರಿದ್ದಲ್ಲಿ ದಾಖಲಾತಿಗಳೊಂದಿಗೆ ವಿವರಗಳನ್ನು ಕಡ್ಡಾಯವಾಗಿ ಬ್ಯಾಂಕಿಗೆ ಸಲ್ಲಿಸಲು ಕೋರಲಾಗಿದೆ.

8. ಬ್ಯಾಂಕಿನ ಪ್ರತಿ ಠೇವಣಿದಾರರ ರೂ.5.00 ಲಕ್ಷ ಮೊತ್ತದ ವರೆಗಿನ ಠೇವಣಿಗಳು "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್ ಆಫ್ ಇಂಡಿಯಾ, ಮುಂಬಯಿ" (DICGC, Mumbai) ರವರಿಂದ ವಿಮೆಗೊಳಪಟ್ಟಿವೆ. ನಷ್ಟದಿಂದಾಗಿ ಸಮಾಪನಾಗೊಂಡಲ್ಲಿ ಠೇವಣಿ ವಿಮಾ ಯೋಜನೆಯಿಂದ ಅಂತಹ ಬ್ಯಾಂಕಿನ ಪ್ರತಿ ಗ್ರಾಹಕನ ರೂ.5.00 ಲಕ್ಷಗಳ ವರೆಗಿನ ಠೇವಣಿಯು ವಿಮೆಗೊಳಪಟ್ಟಿರುತ್ತದೆ.

9. ರಿಸರ್ವ್ ಬ್ಯಾಂಕ್ ನೀಡಿರುವ "ನಿಮ್ಮ ಗ್ರಾಹಕರನ್ನು ತಿಳಿಯಿರಿ" (Know Your Customer) ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯ/ಗ್ರಾಹಕರಿಗೂ ಕಡ್ಡಾಯವಾಗಿರುತ್ತದೆ. ಈ ಬಗ್ಗೆ ಹಲವಾರು ವರ್ಷಗಳಿಂದ ಸರ್ವಸದಸ್ಯರ ಸಭೆಗಳ ಮೂಲಕ ತಿಳುವಳಿಕೆ ನೀಡುತ್ತಾ ಬರಲಾಗಿದೆ. ಆದಾಗ್ಯೂ ಹಲವಾರು ಸದಸ್ಯತ್ವ/ಖಾತೆಗಳ ಕೆ.ವೈ.ಸಿ ವಿವರಗಳು ಸಲ್ಲಿಕೆಯಾಗಿರುವುದಿಲ್ಲ. ಬ್ಯಾಂಕಿನ ಸದಸ್ಯ/ಗ್ರಾಹಕರು ತಮ್ಮ ಭಾವಚಿತ್ರವಿರುವ ವಿಳಾಸ ದೃಢೀಕರಣ, ಆಧಾರ್ ಕಾರ್ಡ್, PAN ಕಾರ್ಡ್, ಫೋಟೋ ವಗೈರೆ ದಾಖಲಾತಿಗಳ ಪ್ರತಿಗಳನ್ನು ಒದಗಿಸಿ ಬ್ಯಾಂಕಿನ ಸೇವೆಯಲ್ಲಿ ಆಗಬಹುದಾದ ತೊಂದರೆಗಳನ್ನು ನಿವಾರಿಸಲು ಸಹಕರಿಸಬೇಕಾಗಿ ವಿನಂತಿ.

10 ಬ್ಯಾಂಕ್ HDFC ಬ್ಯಾಂಕ್‌ನ ಸಹಯೋಗದೊಂದಿಗೆ "Rupay ATM Card" ಸೌಲಭ್ಯ ಒದಗಿಸಿದ್ದು ಸದಸ್ಯರುಗಳು ಹಾಗೂ ಗ್ರಾಹಕರುಗಳು ತಮ್ಮ ಉಳಿತಾಯ/ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ATM Card ಪಡೆದು ದೇಶಾದ್ಯಂತ ಯಾವುದೇ ಬ್ಯಾಂಕಿನ ATM ನಿಂದ ಹಣ ಪಡೆಯಲು ಅಥವಾ ಸಾಮಾನು ಖರೀದಿಸಲು ಈ ಕಾರ್ಡ್ ಬಳಸಬಹುದಾಗಿದೆ.

11. ಬ್ಯಾಂಕ್ IDBI ಬ್ಯಾಂಕ್‌ನ ಸಹಯೋಗದೊಂದಿಗೆ ಗ್ರಾಹಕರುಗಳಿಗೆ RTGS/NEFT ಸೌಲಭ್ಯ ಒದಗಿಸಿದೆ. ಈ ಸೌಲಭ್ಯದಿಂದ ಹಣ ವರ್ಗಾಯಿಸಿಕೊಳ್ಳಲು ಅಥವಾ ಯಾವುದೇ ಬ್ಯಾಂಕಿಗೆ ಹಣ ವರ್ಗಾವಣೆ ಮಾಡಬಹುದಾಗಿದ್ದು, ತಮ್ಮ ಅವಶ್ಯಕತೆಗೆ ಉಪಯೋಗಿಸಿಕೊಳ್ಳಲು ಮನವಿ ಮಾಡಿದೆ.

12. ಆದಾಯ ತೆರಿಗೆ ಕಾಯ್ದೆ ಅನ್ವಯ ಬ್ಯಾಂಕಿನ ಠೇವಣಿದಾರರು ತಮ್ಮ ಠೇವಣಿಗಳ ಮೇಲೆ ವರ್ಷಕ್ಕೆ ಸಾಮಾನ್ಯರು ರೂ.40,000/–, ಹಿರಿಯ ನಾಗರೀಕರು ರೂ.50,000/– ಗಳಿಗೂ ಹೆಚ್ಚಿನ ಬಡ್ಡಿಯನ್ನು ಪಡೆಯುತ್ತಿದ್ದಲ್ಲಿ, ಅಂತಹ ಒಟ್ಟು ಮೊತ್ತದ ಮೇಲೆ ತೆರಿಗೆಯನ್ನು ಮೂಲದಲ್ಲಿ ಕಡಿತ (TDS) ಗೊಳಿಸಬೇಕಾಗುತ್ತದೆ. ಠೇವಣಿದಾರರುಗಳು ಆದಾಯ ತೆರಿಗೆ ವಿನಾಯಿತಿ ಮಿತಿಯೊಳಗೆ ವಾರ್ಷಿಕ ಆದಾಯ ಹೊಂದಿದ್ದಲ್ಲಿ 15 G (ಸಾಮಾನ್ಯ ನಾಗರೀಕರು) ಹಾಗೂ 15 H (ಹಿರಿಯ ನಾಗರೀಕರು) ಫಾರಂಗಳನ್ನು ಸಲ್ಲಿಸಿ ತೆರಿಗೆ ಕಡಿತದಿಂದ (TDS) ವಿನಾಯಿತಿ ಪಡೆಯಬಹುದಾಗಿದೆ. ಇತ್ತೀಚಿನ ಆದಾಯ ತೆರಿಗೆ ಕಾಯ್ದೆಯನ್ವಯ ಬ್ಯಾಂಕ್ ಖಾತೆ ನಿರ್ವಹಣೆಗೆ ಪಾನ್ ಕಾರ್ಡ್‌ಗೆ ಆಧಾರ್ ಕಾರ್ಡ್ ಜೋಡಣೆ ಕಡ್ಡಾಯವಾಗಿದ್ದು, ಜೋಡಣೆಯಾಗಿಲ್ಲದಿದ್ದಲ್ಲಿ ಶೇ.20ರ ಟಿಡಿಎಸ್ ಕಡಿತಗೊಳ್ಳುವುದಲ್ಲದೇ ಬ್ಯಾಂಕ್ ವಹಿವಾಟಿಗೂ ತೊಡಕಾಗಲಿದೆ. ಈ ಬಗ್ಗೆ ಗ್ರಾಹಕರು ಎಚ್ಚರವಹಿಸಲು ಕೋರಿದೆ.

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## ಅಧ್ಯಕ್ಷರಿಂದ ಸ್ವಾಗತ ನುಡಿ

**ಆತ್ಮೀಯ ಸದಸ್ಯ ಬಂಧುಗಳೇ**

ಬ್ಯಾಂಕಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ತಮ್ಮೆಲ್ಲರನ್ನೂ ಆಡಳಿತ ಮಂಡಳಿ ಪರವಾಗಿ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

ದಿನಾಂಕ 02.02.2025 ರಂದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆ ನಡೆದಿದ್ದು ನೂತನ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿರುತ್ತದೆ. ಚುನಾವಣೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರಿಗೂ ನೂತನ ಆಡಳಿತ ಮಂಡಳಿಯ ವತಿಯಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನೂತನ ನಿರ್ದೇಶಕರನ್ನು ಈ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಹಿಂದಿನ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಆಡಳಿತ ಮಂಡಳಿಯು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದು, ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

2024–25ನೇ ವರ್ಷಾಂತ್ಯಕ್ಕೆ ರೂ.841.27 ಲಕ್ಷಗಳ ಷೇರು ಸಂಗ್ರಹಣೆ, ರೂ.6937.11 ಲಕ್ಷಗಳ ಆಪದ್ಧನ ಮತ್ತು ಇತರೆ ನಿಧಿಗಳ ಕ್ರೋಢೀಕರಣ, ಸದಸ್ಯರು/ಗ್ರಾಹಕರುಗಳಲ್ಲಿ ಮಿತವ್ಯಯ ಹಾಗೂ ಉಳಿತಾಯ ಮನೋಭಾವನೆ ಬೆಳೆಸುತ್ತಾ ರೂ.14061.72 ಲಕ್ಷಗಳ ಠೇವಣಿ ಸಂಗ್ರಹಣೆ, ಒಟ್ಟಾರೆ ರೂ.22713.99 ಲಕ್ಷಗಳ ದುಡಿಯುವ ಬಂಡವಾಳ ಕ್ರೋಢೀಕರಣ, ಸದಸ್ಯರುಗಳಿಗೆ ರೂ.9394.16 ಲಕ್ಷಗಳ ಸಾಲ ಸೌಲಭ್ಯ, ರೂ.10257.57 ಲಕ್ಷಗಳ ಹೂಡಿಕೆ, ರೂ.266.08 ಲಕ್ಷಗಳ ನಿವ್ವಳ ಲಾಭಗಳಿಕೆ ಮತ್ತು ಶೇಕಡ ಶೂನ್ಯ ನಿವ್ವಳ ಅನುತ್ಪಾದಕ ಸಾಲಗಳು ಹೀಗೆ ಬ್ಯಾಂಕ್ ತನ್ನ ವಹಿವಾಟಿನಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಇವೆಲ್ಲವುಗಳು ತಮ್ಮ ಸಹಕಾರದಿಂದ ಸಾಧ್ಯವಾಯಿತೆಂದು ತಿಳಿಸಲು ಇಚ್ಛಿಸುತ್ತೇನೆ.

2024–25ನೇ ಆರ್ಥಿಕ ಸಾಲಿನಲ್ಲಿ ಠೇವಣಿ ಹಾಗೂ ಸಾಲ ನೀಡುವಿಕೆಯಲ್ಲಿ ಕುಂಠಿತವಾಗಿದ್ದರಿಂದ ನಿವ್ವಳ ಲಾಭದಲ್ಲಿ ಇಳಿಕೆಯಾಗಿದೆ. ಈ ಆರ್ಥಿಕ ಸಾಲಿನಲ್ಲಿ ವಿವಿಧ ರೀತಿಯ ಸಾಲ ನೀಡುವಿಕೆಗೆ ಹಾಗೂ ಹೆಚ್ಚಿನ ಠೇವಣಿ ಸಂಗ್ರಹಣೆಗೆ ಹೆಚ್ಚಿನ ಒತ್ತು ನೀಡಿದ್ದು, 2025–26ನೇ ಸಾಲಿನಲ್ಲಿ ಠೇವಣಿ, ಸಾಲದ ನೀಡುವಿಕೆ ಹಾಗೂ ಲಾಭದ ಪ್ರಮಾಣವನ್ನು ಗಣನೀಯವಾಗಿ ಏರಿಕೆ ಮಾಡುವುದಾಗಿ ಮತ್ತು ಅನುತ್ಪಾದಕ ಪ್ರಮಾಣವನ್ನು ಕಡಿಮೆಗೊಳಿಸುವುದಾಗಿ ಈ ಸಂದರ್ಭದಲ್ಲಿ ಆಶ್ವಾಸನೆ ನೀಡುತ್ತಿದ್ದೇವೆ.

ಇತ್ತೀಚಿನ ಆರ್ಥಿಕ ಬದಲಾವಣೆಗಳ ಮಧ್ಯೆಯೂ ನಮ್ಮ ಬ್ಯಾಂಕಿನ ವಹಿವಾಟು ಮತ್ತು ಲಾಭ ಗಳಿಕೆ ಉತ್ತಮವಾಗಿ ಪ್ರಗತಿಯತ್ತ ಮುನ್ನಡೆಯುತ್ತಿದ್ದು, ಬ್ಯಾಂಕಿನ ಗ್ರಾಹಕರು, ಠೇವಣಿದಾರರು ತಮ್ಮ ವಹಿವಾಟನ್ನು ಬ್ಯಾಂಕಿನಲ್ಲಿ ನಡೆಸುವ ಮೂಲಕ ಬ್ಯಾಂಕಿನ ಮೇಲಿನ ವಿಶ್ವಾಸ ವೃದ್ಧಿಸಿ, ಪ್ರಗತಿಗೆ ಕಾರಣರಾಗುತ್ತಾ ಬಂದಿರುತ್ತಾರೆ. ಅವರ ಸಹಕಾರವನ್ನು ಎಂದಿಗೂ ಸ್ಮರಿಸುತ್ತೇವೆ. ಅಲ್ಲದೇ ಸದಸ್ಯರು ಬ್ಯಾಂಕಿನ ಕನಿಷ್ಠ ವಹಿವಾಟು ನಡೆಸುವುದು, ಸರ್ವಸದಸ್ಯರ ಸಭೆಗಳಲ್ಲಿ ಭಾಗವಹಿಸುವುದು ಸಹಕಾರಿ ಕಾಯ್ದೆಯನ್ವಯ ಕಡ್ಡಾಯವಾಗಿರುತ್ತದೆ. ಆದ್ದರಿಂದ ಬ್ಯಾಂಕಿನಿಂದ ನೀಡುವ ಸೌಲಭ್ಯಗಳನ್ನು ಪಡೆಯಲು ಕಡ್ಡಾಯವಾಗಿ ಖಾತೆಯನ್ನು ತೆರೆದು ವ್ಯವಹರಿಸಲು ವಿನಂತಿಸುತ್ತೇನೆ. ಈ ಮೂಲಕ ಬ್ಯಾಂಕ್ ಇನ್ನಷ್ಟು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

ಅನುತ್ಪಾದಕ ಪ್ರಮಾಣ ಮಿತಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚಿಗೆ ವಾಣಿಜ್ಯ ಬ್ಯಾಂಕುಗಳಂತೆ ಸಹಕಾರ ಬ್ಯಾಂಕುಗಳಲ್ಲಿಯೂ Technical Write-off, OTS, Compromise Settlement ಗಳಂತಹ ನಿಯಮಾವಳಿಗಳನ್ನು ಜಾರಿಗೊಳಿಸಿದ್ದು, ಈ ನಿಯಮಾವಳಿಗಳಡಿ ಅನುತ್ಪಾದಕ ಸುಸ್ತಿ ಪ್ರಮಾಣ ಮಿತಗೊಳಿಸಲು ಸಹಕಾರಿಯಾಗಿದ್ದು, ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದಾಗಿ ಕೆಲ ಹಳೆಯ ಸುಸ್ತಿಸಾಲಗಳನ್ನು ಚುಕ್ತಗೊಳಿಸಿದ್ದು, ಇನ್ನೂ ಕೆಲವು ಸಾಲಗಳು ವಸೂಲಾಗುವ ಸನಿಹದಲ್ಲಿರುವುದರಿಂದ ಬ್ಯಾಂಕ್ ಮುಂದಿನ ದಿನಗಳಲ್ಲಿ ಎಲ್ಲಾ ವಲಯಗಳಲ್ಲಿಯೂ ಪ್ರಗತಿ ಹೊಂದಲಿದ್ದು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲಿದ್ದೇವೆ.

ಸಾಲ ಬೆಳವಣಿಗೆ ಹೆಚ್ಚಿಸುವ ನಿಟ್ಟಿನಲ್ಲಿ ಬಡ್ಡಿ ದರಗಳ ಪರಿಷ್ಕರಣೆ, ಶೀಘ್ರ ಅರ್ಜಿ ವಿಲೇವಾರಿ ಕ್ರಮ ಅಳವಡಿಸಿಕೊಳ್ಳಲಾಗಿದೆ. ಬ್ಯಾಂಕಿನ ಇತಿಹಾಸ, ಷೇರು ಬಂಡವಾಳ, ನಿಧಿಗಳ ಕ್ರೋಢೀಕರಣ, ಲಾಭ ಗಳಿಕೆ ಸಾಮರ್ಥ್ಯ, ಉತ್ತಮ ಸಾಲ ನೀತಿ ಇತ್ಯಾದಿಗಳನ್ನು ಗಮನಿಸಿ ನಮ್ಮೊಂದಿಗೆ ಮುಂದುವರಿಯಲು ಮತ್ತು ತಮ್ಮ ಬಂಧು–ಮಿತ್ರರನ್ನು ಬ್ಯಾಂಕಿಗೆ ಪರಿಚಯಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಲು ವಿನಂತಿಸುತ್ತೇನೆ.

ಬ್ಯಾಂಕಿನಲ್ಲಿ ಎಲ್ಲಾ ಶಾಖೆಗಳು ಸಿಬಿಎಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೋರ್ ಬ್ಯಾಂಕಿಂಗ್ ಸಿಸ್ಟಂನ ನವನವೀನ ಯೋಜನೆಗಳಾದ ಮೊಬೈಲ್ ಬ್ಯಾಂಕಿಂಗ್, ಯುಪಿಐ, ಐಎಂಪಿಎಸ್, ಆರ್.ಟಿ.ಜಿ.ಎಸ್/ಎನ್‌ಇಎಫ್‌ಟಿ ಮುಂತಾದವುಗಳು ಜಾರಿಯಲ್ಲಿದ್ದು, ಸದಸ್ಯರು ಹಾಗೂ ಗ್ರಾಹಕರುಗಳು ಇದರ ಸದುಪಯೋಗ ಪಡಿಸಿಕೊಳ್ಳಲು ಕೋರುತ್ತಿದ್ದೇವೆ.

ಬ್ಯಾಂಕ್ ಆರ್ಥಿಕ ಸಾಲಿನ ದಿನಾಂಕ 31.03.2025ಕ್ಕೆ ಗಮನಾರ್ಹ ಪ್ರಗತಿ ಸಾಧಿಸಿ, ರೂ.2.66 ಕೋಟಿ ನಿವ್ವಳ ಲಾಭ ಗಳಿಸಿ, ಈ ಆರ್ಥಿಕ ಸಾಲು ಸೇರಿದಂತೆ ಕಳೆದ ನಾಲ್ಕಾರು ವರ್ಷಗಳಿಂದ ಲೆಕ್ಕಪರಿಶೋಧನಾ ವರ್ಗೀಕರಣ “ಎ” ದರ್ಜೆಗೆ ಮುಂದುವರೆದು Financially Sound & Well Managed Bank (FSWM) ಮಾನದಂಡದಡಿ ಮುಂದುವರೆದಿರುವುದು ಹರ್ಷದ ವಿಚಾರವಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಗತಿಯನ್ನು ಮುಂದುವರಿಸಿಕೊಂಡು ಹೋಗುವುದಲ್ಲದೇ 2–3 ಶಾಖೆಗಳನ್ನು ತೆರೆಯಲು ಕಾರ್ಯಪ್ರವೃತ್ತರಾಗಿ ಶ್ರಮವಹಿಸಿ ಪ್ರಗತಿಯತ್ತ ಕೊಂಡೊಯ್ಯುವ ಭರವಸೆ ನೀಡುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಬ್ಯಾಂಕಿನ ಮೇಲಿಟ್ಟಿರುವ ನಂಬಿಕೆ ಹಾಗೂ ಅವರು ನೀಡುತ್ತಿರುವ ಸಹಕಾರವನ್ನು ಆಡಳಿತ ಮಂಡಳಿಯು ಪರಿಗಣಿಸಿ 2024–25ನೇ ಸಾಲಿಗೆ ಶೇ.18ರ ಡಿವಿಡೆಂಡ್ ವಿತರಣೆಗೆ ಆಡಳಿತ ಮಂಡಳಿ ನಿಶ್ಚಯಿಸಿದ್ದು, ಇದರ ವಿತರಣೆಗೆ ಸರ್ವಸದಸ್ಯರ ಸಭೆಯ ಒಪ್ಪಿಗೆ ಕೋರುತ್ತೇನೆ.

2024–25ನೇ ಸಾಲಿನ ಲೆಕ್ಕಪರಿಶೋಧರಿಂದ ದೃಢೀಕರಿಸಿದ ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆ, ನಿವ್ವಳ ಲಾಭದ ವಿಲೇವಾರಿ, ಆಯ–ವ್ಯಯ ಪಟ್ಟಿ, ಆಡಳಿತ ಮಂಡಳಿ ವರದಿ ಮತ್ತು ಸಮಜಾಯಿಷಿಗಳೊಂದಿಗೆ ಲೆಕ್ಕಪರಿಶೋಧನಾ ವರದಿ ಇವುಗಳನ್ನು ತಮಗೆ ಒದಗಿಸಿದ್ದು, ಸರ್ವಸದಸ್ಯರ ಸಭೆಯಲ್ಲಿ ತಾವುಗಳು ಸಕ್ರಿಯವಾಗಿ ಪಾಲ್ಗೊಂಡು ಅನುಮೋದಿಸಬೇಕೆಂದು, ಬ್ಯಾಂಕಿನ ಪ್ರಗತಿಗೆ ತಮ್ಮ ಸಲಹೆ ಹಾಗೂ ಸೂಚನೆಗಳನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಬ್ಯಾಂಕಿನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಸಮಯವನ್ನು ವಿನಿಯೋಗಿಸಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಹಕರಿಸುತ್ತಿರುವ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸದಸ್ಯರನ್ನು ಸರ್ವಸದಸ್ಯರ ಸಭೆಗೆ ಮತ್ತೊಮ್ಮೆ ಸ್ವಾಗತ ಕೋರಿ ಇಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆ ನೀಡಿ, ಮಂಡಿಸಿರುವ ಕಾರ್ಯಸೂಚಿಗಳಿಗೆ ಅನುಮೋದನೆ ನೀಡಿ ಸರ್ವಸದಸ್ಯರ ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಮಾನ್ಯ ಸದಸ್ಯರುಗಳಲ್ಲಿ ಕಳಕಳಿಯಿಂದ ಕೋರುತ್ತೇನೆ.

ತಮ್ಮ ವಿಶ್ವಾಸಿ

**ಕೆ.ಆರ್.ಆನಂದಬಾಬು**

**ಅಧ್ಯಕ್ಷರು**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಪ್ರಧಾನ ಕಛೇರಿ : ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.**

## 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡವಳಿಕೆಗಳು

**ದಿನಾಂಕ 22ನೇ ಸೆಪ್ಟೆಂಬರ್ 2024ರ ಭಾನುವಾರದಂದು ಬೆಳಿಗ್ಗೆ 10.30ಕ್ಕೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣ ರವರ ಅಧ್ಯಕ್ಷತೆಯಲ್ಲಿ ಪ್ರಧಾನ ಕಛೇರಿ ಆವರಣದಲ್ಲಿ ನಡೆದ ಬ್ಯಾಂಕಿನ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳು:-**

**ಹಾಜರಿದ್ದ ಸದಸ್ಯರುಗಳ ಸಂಖ್ಯೆ : 2892 ಸದಸ್ಯರುಗಳು ಹಾಜರಿದ್ದರು.**

ಸಭೆಗೆ ಮುನ್ನ ಬೆಳಿಗ್ಗೆ 9.00 ಘಂಟೆಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದು, ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಎನ್.ಮಾಲಿನಿರವರಿಂದ ದೇವತಾ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ರಮಣರೆಡ್ಡಿ ಜಿ.ಎಸ್, ವಿಶೇಷ ಕರ್ತವ್ಯಾಧಿಕಾರಿ, ಸಹಕಾರ ಸಚಿವಾಲಯ, ವಿಧಾನ ಸೌಧ, ಬೆಂಗಳೂರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇವರ ಸಮಕ್ಷಮದಲ್ಲಿ ಸದಸ್ಯರುಗಳ 216 ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಿ ಗೌರವಿಸಲಾಯಿತು. ಮಹನೀಯರಾದ ಇವರು ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯಲ್ಲೂ ಸಹ ಸೇವೆ ಸಲ್ಲಿಸಿರುವುದನ್ನು ಅಭಿನಂದಿಸಿ ಗೌರವಿಸಲಾಯಿತು.

ಮಾನ್ಯ ಶ್ರೀ ರಮಣರೆಡ್ಡಿ ಜಿ.ಎಸ್ ರವರು ಬ್ಯಾಂಕಿನ ಆಗುಹೋಗುಗಳ ಬಗ್ಗೆ ಮಾತನಾಡಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ಈ ಬ್ಯಾಂಕ್ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಹೆಸರನ್ನು ಹೊಂದಿದ್ದು ಇನ್ನೂ ಹೆಚ್ಚಿನ ಪ್ರಗತಿಗೆ ಆಶಿಸಿದರು.

ನಂತರ ಅಗತ್ಯ ಕೋರಂನೊಂದಿಗೆ ಬೆಳಿಗ್ಗೆ 10.30ಕ್ಕೆ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

**1. ಪ್ರಾರ್ಥನೆ :**

ಶ್ರೀಮತಿ ಸಿರೀಶಾ ಎಸ್.ಕುಮಾರ್‌ರವರಿಂದ ದೇವತಾ ಪ್ರಾರ್ಥನೆಯೊಂದಿಗೆ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಂದ ಜ್ಯೋತಿ ಬೆಳಗಿಸುವ ಮೂಲಕ ಸರ್ವಸದಸ್ಯರ ಸಭೆ ಪ್ರಾರಂಭವಾಯಿತು.

ನಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರ ಅಧ್ಯಕ್ಷತೆಯಲ್ಲಿ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

**2. ಅಧ್ಯಕ್ಷರಿಂದ ಸ್ವಾಗತ :**

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರು ಸದಸ್ಯರುಗಳಿಗೆ ಸ್ವಾಗತ ಕೋರಿ, ಬ್ಯಾಂಕಿನ ಪ್ರಗತಿಯೊಂದಿಗಿನ ಹಲವಾರು ಅಂಶಗಳೊಂದಿಗೆ ಸ್ವಾಗತ ಭಾಷಣ ಮಾಡಿದರು.

ಬ್ಯಾಂಕಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ತಮ್ಮೆಲ್ಲರನ್ನೂ ಆಡಳಿತ ಮಂಡಳಿ ಪರವಾಗಿ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

ಬ್ಯಾಂಕಿಂಗ್ ಕ್ಷೇತ್ರದ ತಂತ್ರಜ್ಞಾನವು ಹೊಸ ಹೊಸ ಆವಿಷ್ಕಾರದಿಂದ ವೇಗದಲ್ಲಿ ಮುನ್ನಡೆಯುತ್ತಿದೆ. ಅಂತೆಯೇ, ಬ್ಯಾಂಕಿಂಗ್ ವ್ಯವಸ್ಥೆಯು ಸಂಪೂರ್ಣ ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ವ್ಯವಹಾರದ ಪ್ರತಿಯೊಂದು ವಹಿವಾಟು ತಂತ್ರಾಂಶದಡಿ ಲಭ್ಯವಾಗುವ ರೀತಿಯಲ್ಲಿ ಕೋರ್ ಬ್ಯಾಂಕಿಂಗ್ ಸಿಸ್ಟಂ ಅನ್ನು ಅಳವಡಿಸಿ, ತಂತ್ರಾಂಶದ ಗುಣಮಟ್ಟ, ಹತೋಟಿ ಇವುಗಳ ಮಾರ್ಗಸೂಚಿಯನ್ನು ಪಾಲಿಸಲಾಗುತ್ತಿದೆ. ಬ್ಯಾಂಕಿಂಗ್ ಹಣಕಾಸು ವಹಿವಾಟಿನ ರಕ್ಷಣೆಗೆ ಪ್ರತ್ಯೇಕ ಸೈಬರ್ ಸೆಕ್ಯೂರಿಟಿ ಪಾಲಿಸಿಗಳನ್ನು ಜಾರಿಗೊಳಿಸಿದ್ದು, ಈ ಬೆಳವಣಿಗೆಗಳು ಶೀಘ್ರ ನಗದು ವರ್ಗಾವಣೆಗೆ ಅನುಕೂಲಕರವಾಗಲಿವೆ. RTGS/NEFT ªÀÄvÀÄÛ SMS, BALANCE ENQUIRY, ಎ.ಟಿ.ಎಂ ಕಾರ್ಡ್ ಸೌಲಭ್ಯಗಳನ್ನು ಒದಗಿಸಲಾಗಿದೆ. ಹಾಲಿ ಪ್ರಸಕ್ತ ಸಾಲಿನಲ್ಲಿ ಮೊಬೈಲ್ ಬ್ಯಾಂಕಿಂಗ್, ಯುಪಿಐ ಪೇಮೆಂಟ್ಸ್ (POS/E-Com, GPay, PhonePe, Paytm), IMPS

ನಂತಹ ಡಿಜಿಟಲ್ ಸೌಲಭ್ಯಗಳನ್ನೂ ಸಹ ಜಾರಿಗೊಳಿಸಿದ್ದು ಸದಸ್ಯರು/ಗ್ರಾಹಕರುಗಳು ಇದರ ಸದುಪಯೋಗಿಸಿಕೊಳ್ಳಬೇಕೆಂದು ಕೋರುತ್ತೇವೆ. ಬ್ಯಾಂಕಿಗೆ ಅವಶ್ಯವಿರುವ ಪಾಲಿಸಿಗಳನ್ನು ತಜ್ಞರ ಸಹಕಾರದಿಂದ ಸಿದ್ದಪಡಿಸಿ, ಅವುಗಳ ಜಾರಿಗೆ ಅವಶ್ಯ ಕ್ರಮವಿಡಲಾಗಿದೆ.

ಇತ್ತೀಚಿನ ಕೆಲ ಸಹಕಾರ ಬ್ಯಾಂಕುಗಳ ವಿಫಲತೆಯಿಂದಾಗಿ, ಎಲ್ಲಾ ಬ್ಯಾಂಕುಗಳನ್ನು ಅನುಮಾನದ ದೃಷ್ಟಿಯಿಂದ ನೋಡುವಂತಾಗಿದೆ. ಇದರಿಂದಾಗಿ ಸಹಕಾರ ಬ್ಯಾಂಕುಗಳೊಡನೆ ವ್ಯವಹರಿಸಲು ಗ್ರಾಹಕರು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ಶಿಸ್ತಿಗೆ ಕೆಲ ಕಟ್ಟುನಿಟ್ಟಿನ ಕ್ರಮಕೈಗೊಂಡ ಪರಿಣಾಮವಾಗಿ ಸಹಕಾರ ಬ್ಯಾಂಕುಗಳು ಚೇತರಿಸಿಕೊಳ್ಳುವಂತಾಗಿದೆ. ಈ ಎಲ್ಲಾ ಘಟನಾವಳಿಗಳ ಹೊರತಾಗಿಯೂ ಹಾಗೂ ಇತ್ತೀಚಿನ ಆರ್ಥಿಕ ಬದಲಾವಣೆಗಳ ಮಧ್ಯೆಯೂ ನಮ್ಮ ಬ್ಯಾಂಕಿನ ವಹಿವಾಟು ಮತ್ತು ಲಾಭ ಗಳಿಕೆ ಉತ್ತಮವಾಗಿ ಪ್ರಗತಿಯತ್ತ ಮುನ್ನಡೆಯುತ್ತಿದ್ದು, ಬ್ಯಾಂಕಿನ ಗ್ರಾಹಕರು, ಠೇವಣಿದಾರರು ತಮ್ಮ ವಹಿವಾಟನ್ನು ಬ್ಯಾಂಕಿನಲ್ಲಿ ನಡೆಸುವ ಮೂಲಕ ಬ್ಯಾಂಕಿನ ಮೇಲಿನ ವಿಶ್ವಾಸ ವೃದ್ಧಿಸಿ, ಪ್ರಗತಿಗೆ ಕಾರಣರಾಗುತ್ತಾ ಬಂದಿರುತ್ತಾರೆ. ಅವರ ಸಹಕಾರವನ್ನು ಎಂದಿಗೂ ಸ್ಮರಿಸುತ್ತೇವೆ. ಅಲ್ಲದೇ ಸದಸ್ಯರು ಬ್ಯಾಂಕಿನ ಕನಿಷ್ಠ ವಹಿವಾಟು ನಡೆಸುವುದು, ಸರ್ವಸದಸ್ಯರ ಸಭೆಗಳಲ್ಲಿ ಭಾಗವಹಿಸುವುದು ಸಹಕಾರಿ ಕಾಯ್ದೆಯನ್ವಯ ಕಡ್ಡಾಯವಾಗಿರುತ್ತದೆ. ಆದ್ದರಿಂದ ಬ್ಯಾಂಕಿನಿಂದ ನೀಡುವ ಸೌಲಭ್ಯಗಳನ್ನು ಪಡೆಯಲು ಕಡ್ಡಾಯವಾಗಿ ಖಾತೆಯನ್ನು ತೆರೆದು ವ್ಯವಹರಿಸಲು ವಿನಂತಿಸುತ್ತೇನೆ. ಈ ಮೂಲಕ ಬ್ಯಾಂಕ್ ಇನ್ನಷ್ಟು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

ಅನುತ್ಪಾದಕ ಪ್ರಮಾಣದ ಮಿತಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚಿಗೆ ವಾಣಿಜ್ಯ ಬ್ಯಾಂಕುಗಳಂತೆ ಸಹಕಾರ ಬ್ಯಾಂಕುಗಳಲ್ಲಿಯೂ Technical Write-off, OTS, Compromise Settlement ಗಳಂತಹ ನಿಯಮಾವಳಿಗಳನ್ನು ಜಾರಿಗೊಳಿಸಿದ್ದು, ಈ ನಿಯಮಾವಳಿಗಳಡಿ ಅನುತ್ಪಾದಕ ಸುಸ್ತಿ ಪ್ರಮಾಣ ಮಿತಗೊಳಿಸಲು ಸಹಕಾರಿಯಾಗಿದ್ದು, ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ.

2023–24ನೇ ವರ್ಷಾಂತ್ಯಕ್ಕೆ ರೂ.848.18 ಲಕ್ಷಗಳ ಷೇರು ಸಂಗ್ರಹಣೆ, ರೂ.6881.24 ಲಕ್ಷಗಳ ಆಪದ್ಧನ ಮತ್ತು ಇತರೆ ನಿಧಿಗಳ ಕ್ರೋಢೀಕರಣ, ಸದಸ್ಯರು/ಗ್ರಾಹಕರುಗಳಲ್ಲಿ ಮಿತವ್ಯಯ ಹಾಗೂ ಉಳಿತಾಯ ಮನೋಭಾವನೆ ಬೆಳೆಸುತ್ತಾ ರೂ.14418.70 ಲಕ್ಷಗಳ ಠೇವಣಿ ಸಂಗ್ರಹಣೆ, ಒಟ್ಟಾರೆ ರೂ.22877.45 ಲಕ್ಷಗಳ ದುಡಿಯುವ ಬಂಡವಾಳ ಕ್ರೋಢೀಕರಣ, ಸದಸ್ಯರುಗಳಿಗೆ ರೂ.9577.41 ಲಕ್ಷಗಳ ಸಾಲ ಸೌಲಭ್ಯ, ರೂ.11390.09 ಲಕ್ಷಗಳ ಗುಂತಾಯಗಳ ಹೂಡಿಕೆ, ರೂ.272.17 ಲಕ್ಷಗಳ ನಿವ್ವಳ ಲಾಭಗಳಿಕೆ ಮತ್ತು ಶೇಕಡ ಶೂನ್ಯ ನಿವ್ವಳ ಅನುತ್ಪಾದಕ ಸಾಲಗಳು ಹೀಗೆ ಬ್ಯಾಂಕಿನ ವಹಿವಾಟಿನಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಈ ಎಲ್ಲಾ ಸಾಧನೆಗಳು ತಮ್ಮ ಸಹಕಾರದಿಂದ ಸಾಧ್ಯವಾಯಿತೆಂದು ತಿಳಿಸಲು ಇಚ್ಛಿಸುತ್ತೇನೆ.

ಸಾಲ ಬೆಳವಣಿಗೆ ಹೆಚ್ಚಿಸುವ ನಿಟ್ಟಿನಲ್ಲಿ ಬಡ್ಡಿ ದರಗಳ ಪರಿಷ್ಕರಣೆ, ಶೀಘ್ರ ಅರ್ಜಿ ವಿಲೇವಾರಿ ಕ್ರಮ ಅಳವಡಿಸಿಕೊಳ್ಳಲಾಗಿದೆ. ಬ್ಯಾಂಕಿನ ಇತಿಹಾಸ, ಷೇರು ಬಂಡವಾಳ, ನಿಧಿ ಕ್ರೋಢೀಕರಣ, ಲಾಭ ಗಳಿಕೆ ಸಾಮರ್ಥ್ಯ, ಉತ್ತಮ ಸಾಲ ನೀತಿ ಇತ್ಯಾದಿಗಳನ್ನು ಗಮನಿಸಿ ನಮ್ಮೊಂದಿಗೆ ಮುಂದುವರಿಯಲು ಮತ್ತು ತಮ್ಮ ಬಂಧು–ಮಿತ್ರರನ್ನು ಬ್ಯಾಂಕಿಗೆ ಪರಿಚಯಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಲು ವಿನಂತಿಸುತ್ತೇನೆ.

ಬ್ಯಾಂಕ್ ಆರ್ಥಿಕ ಸಾಲಿನ ದಿನಾಂಕ 31.03.2024ಕ್ಕೆ ಗಮನಾರ್ಹ ಪ್ರಗತಿ ಸಾಧಿಸಿ, ರೂ.2.72 ಕೋಟಿ ನಿವ್ವಳ ಲಾಭ ಗಳಿಸಿ, ಈ ಆರ್ಥಿಕ ಸಾಲು ಸೇರಿದಂತೆ ಕಳೆದ ನಾಲ್ಕಾರು ವರ್ಷಗಳಿಂದ ಲೆಕ್ಕಪರಿಶೋಧನಾ ವರ್ಗೀಕರಣ "ಎ" ದರ್ಜೆಗೆ ಮುಂದುವರೆದು Financially Sound & Well Managed Bank (FSWM) ಮಾನದಂಡದಡಿ ಮುಂದುವರೆದಿರುವುದು ಹರ್ಷದ ವಿಚಾರವಾಗಿದೆ. ಆದಾಗ್ಯೂ ಮುಂದಿನ ದಿನಗಳಲ್ಲಿ ಈ ಸವಾಲುಗಳ ಮಧ್ಯೆ ಈ ಪ್ರಗತಿಯನ್ನು ಮುಂದುವರಿಸಿಕೊಂಡು ಹೋಗುವುದಲ್ಲದೇ ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಸ್ವತಂತ್ರತೆ ನೀಡಿದ್ದು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಶ್ರಮವಹಿಸಿ ಪ್ರಗತಿಯತ್ತ ಕೊಂಡೊಯ್ಯುವ ಭರವಸೆ ನೀಡುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಬ್ಯಾಂಕಿನ ಮೇಲಿಟ್ಟಿರುವ ನಂಬಿಕೆ ಹಾಗೂ ಅವರು ನೀಡುತ್ತಿರುವ ಸಹಕಾರವನ್ನು ಪರಿಗಣಿಸಿ 2023–24ನೇ ಸಾಲಿಗೆ ಶೇ.20ರ ಡಿವಿಡೆಂಡ್ ವಿತರಣೆಗೆ ಆಡಳಿತ ಮಂಡಳಿ ನಿಶ್ಚಯಿಸಿದ್ದು, ಇದರ ವಿತರಣೆಗೆ ಸರ್ವಸದಸ್ಯರ ಸಭೆಯ ಒಪ್ಪಿಗೆ ಕೋರುತ್ತೇನೆ.

2023–24ನೇ ಸಾಲಿನ ಲೆಕ್ಕಪರಿಶೋಧರಿಂದ ದೃಢೀಕರಿಸಿದ ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆ, ನಿವ್ವಳ ಲಾಭದ ವಿಲೇವಾರಿ, ಆಯ–ವ್ಯಯ ಪಟ್ಟಿ, ಆಡಳಿತ ಮಂಡಳಿ ವರದಿ ಮತ್ತು ಸಮಜಾಯಿಷಿಗಳೊಂದಿಗೆ ಲೆಕ್ಕಪರಿಶೋಧನಾ ವರದಿ ಇವುಗಳನ್ನು ತಮಗೆ ಒದಗಿಸಿದ್ದು, ಸರ್ವಸದಸ್ಯರ ಸಭೆಯಲ್ಲಿ ತಾವುಗಳು ಸಕ್ರಿಯವಾಗಿ ಪಾಲ್ಗೊಂಡು ಅನುಮೋದಿಸಬೇಕೆಂದು, ಬ್ಯಾಂಕಿನ ಪ್ರಗತಿಗೆ ತಮ್ಮ ಸಲಹೆ ಹಾಗೂ ಸೂಚನೆಗಳನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಬ್ಯಾಂಕಿನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಸಮಯವನ್ನು ವಿನಿಯೋಗಿಸಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಹಕರಿಸುತ್ತಿರುವ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸದಸ್ಯರನ್ನು ಸರ್ವಸದಸ್ಯರ ಸಭೆಗೆ ಮತ್ತೊಮ್ಮೆ ಸ್ವಾಗತ ಕೋರಿ ಇಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆ ನೀಡಿ, ಮಂಡಿಸಿರುವ ಕಾರ್ಯಸೂಚಿಗಳಿಗೆ ಅನುಮೋದನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಮಾನ್ಯ ಸದಸ್ಯರುಗಳಲ್ಲಿ ವಿನಮ್ರವಾಗಿ ಕೋರಿದರು.

ಮುಂದುವರಿದು, ಸರ್ವಸದಸ್ಯರ ಸಭೆಗೆ ನಿರ್ದೇಶಕರು ಹಾಗೂ ಮಾನ್ಯ ಸದಸ್ಯ ಮಹನೀಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಸದಸ್ಯರು ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡು ಸುಗಮವಾಗಿ ನಡೆಸಿಕೊಡುವಂತೆ ಕೋರಿದರು.

ನಂತರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

**3. 2023–24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು:**

ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ಉಮಾ ಆರ್ ರವರು ವರದಿ ಪುಸ್ತಕದ ಪುಟ: 1–2 ರಲ್ಲಿರುವಂತೆ 2023–24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ವಿವರವಾಗಿ ಓದಿ, ಸಭೆಯ ಅಂಗೀಕಾರಕ್ಕೆ ಮಂಡಿಸಿದರು.

ನಂತರ ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಲ್ಲಿ ಕೆಲ ಸದಸ್ಯರುಗಳು ನೀಡಿರುವ ಪತ್ರಗಳ ವಿವರವನ್ನು ಸಭೆಗೆ ತಿಳಿಸಿದರು. ನಂತರ ಸಭೆಯ ಸೂಚನಾ ಪತ್ರವು ಸರಿಯಾಗಿರುವುದೆಂದು ಸರ್ವಾನುಮತದಿಂದ ಒಪ್ಪಿ ದಾಖಲು ಮಾಡಲಾಯಿತು.

ನಂತರ ಸಭೆಯ ಸೂಚನಾ ಪತ್ರದ ಕಾರ್ಯಸೂಚಿಯಂತೆ ಕಾರ್ಯಕಲಾಪಗಳು ಮುಂದುವರಿಯಿತು.

**4. ಕಳೆದ ವಾರ್ಷಿಕ ಸರ್ವಸದಸ್ಯರ ಸಭೆಯಿಂದೀಚೆಗೆ ಮೃತರಾದ ಸದಸ್ಯರುಗಳಿಗೆ ಸಂತಾಪ ಸೂಚನೆ.**

ಪ್ರಭಾರ ಕಾರ್ಯದರ್ಶಿಯವರು, ವರದಿ ಪುಸ್ತಕದ ಪುಟ 20 ರಲ್ಲಿರುವಂತೆ ಮೃತರಾದ ಸದಸ್ಯರುಗಳನ್ನು ಸ್ಮರಿಸಿ, ಅವರುಗಳ ಗೌರವಾರ್ಥ ಎರಡು ನಿಮಿಷ ಮೌನವನ್ನಾಚರಿಸಬೇಕೆಂದು ಕೋರಿದರು.

| ಮೃತರ ಹೆಸರು | ಸ.ಸಂಖ್ಯೆ | ಮೃತರ ಹೆಸರು | ಸ.ಸಂಖ್ಯೆ | ಮೃತರ ಹೆಸರು | ಸ.ಸಂಖ್ಯೆ |
|---|---|---|---|---|---|
| 01 ಭಾನುಮತಿ | R03314 | 18 ಬಿ.ಎಸ್.ಕಿರಣ್ ಕುಮಾರ್ | R04335 | 35 ಸುಬ್ಬಲಕ್ಷ್ಮಮ್ಮ | R14800 |
| 02 ಆರ್.ಅನಸೂಯದೇವಿ | R03004 | 19 ಲತಾ ರಜನಿಕಾಂತ್ ಲಾತಿಯ | R12678 | 36 ಆರ್.ಮುಗುವಾಳಪ್ಪ | R04555 |
| 03 ಎಸ್.ಸರೋಜ | R10736 | 20 ಬಿ.ಎಂ.ಮಹದೇವಪ್ಪ | R04745 | 37 ಕೆ.ಎಸ್.ಪಾರ್ಥಸಾರಥಿ | R05355 |
| 04 ಕೆ.ಎನ್.ಕೃಷ್ಣಮೂರ್ತಿ | R04160 | 21 ಎ.ಎನ್.ರಂಗನಾಥ | R14178 | 38 ನಂಜುಂಡರಾಜು | R04912 |
| 05 ಎಲ್.ಶ್ರೀನಿವಾಸ ಮೂರ್ತಿ | R12272 | 22 ಎಸ್.ನಾಗರಾಜ್ | R05214 | 39 ಕೆ.ಸುನಂದಮ್ಮ | R06280 |
| 06 ಚಿತ್ತಕಲಾ | R03428 | 23 ಟಿ.ನಿಜಗುಣ | R15561 | 40 ದೀಪಾ ಮಾಕಂ | R13368 |
| 07 ಡಿ.ಹೆಚ್.ಸತ್ಯಲಕ್ಷ್ಮಿ | R12419 | 24 ಶ್ರೀಕಾಂತ್ ಟಿ.ವನಕುದುರೆ | R11781 | 41 ಕೆ.ಸತ್ಯನಾರಾಯಣ ಗುಪ್ತ | R06631 |
| 08 ಅನಂತರಾಂ | R16864 | 25 ಎಸ್.ಬಿ.ರಜನಿ | R12484 | 42 ಜೆ.ಎಸ್.ಶ್ರೀಕಾಂತ ಗುಪ್ತ | R12308 |
| 09 ಸೈಯದ್ ಹಫೀಜ್ | R14028 | 26 ಕೆ.ರಾಮಕುಮಾರ್ | R05933 | 43 ವಿ.ಕನುಮಯ್ಯ | R04164 |
| 10 ಸಿ.ಆರ್.ಬಾಲಸುಬ್ರಮಣ್ಯ | R03128 | 27 ಎನ್.ಮಂಜುಳ | R14243 | 44 ಎಸ್.ಮಂಜುಳಾವಾಣಿ | R09201 |
| 11 ಬಿ.ಕಾಂತರಾಜು | R16538 | 28 ಕೆ.ಎಸ್.ಜ್ವಾಲಾಕುಮಾರ್ | R08730 | 45 ಜಿ.ಆರ್.ಶಿವರುದ್ರಪ್ಪ | R06572 |

| ಮೃತರ ಹೆಸರು | ಸ.ಸಂಖ್ಯೆ | ಮೃತರ ಹೆಸರು | ಸ.ಸಂಖ್ಯೆ | ಮೃತರ ಹೆಸರು | ಸ.ಸಂಖ್ಯೆ |
|---|---|---|---|---|---|
| 12 ಕೆ.ಎಸ್.ಸುಗುಣ | R07190 | 29 ಸೂರ್ಯಕುಮಾರಿ | R14087 | 46 ಎ.ವಿಜಯಕುಮಾರ್ | R11571 |
| 13 ವಿ.ಎಲ್.ಸರೋಜಮ್ಮ | R10933 | 30 ಡಿ.ವಿ.ಚಿನ್ನೂಬಾಯಿ | R11734 | 47 ಎಂ.ಜಯರಾಮಯ್ಯ | R15957 |
| 14 ಹೆಚ್.ಪಿ.ಜ್ಞಾನೇಶ್ವರ್ | R07792 | 31 ಕೆ.ಆರ್.ಪ್ರಸಾದ್ | R13837 | 48 ಪಿ.ಎಸ್.ಚಂದ್ರಶೇಖರ್ | R03436 |
| 15 ಎಸ್.ನಾಚಿಮುತ್ತು | R04959 | 32 ಟಿ.ಎಲ್.ರಾಮಮೂರ್ತಿ | R05651 | 49 ಡಿ.ವಾಸುದೇವರಾವ್ | R13004 |
| 16 ಜಯಮ್ಮ | R03979 | 33 ಬಿ.ವಿ.ಪ್ರೇಮಾ | R09912 | | |
| 17 ಎ.ಗೋವಿಂದಸ್ವಾಮಿ ನಾಯ್ಡು | R03611 | 34 ಪಿ.ಗೋವಿಂದರಾಜುಲು | R03637 | | |

ನಿಧನ ಹೊಂದಿದ ಸದಸ್ಯರುಗಳ ಸ್ಮರಣಾರ್ಥ ಸಭೆಯಲ್ಲಿ ಎರಡು ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿ ಅರ್ಪಿಸಿ ಗೌರವ ಸಲ್ಲಿಸಲಾಯಿತು.

**5. ದಿನಾಂಕ 10.09.2023 ರಂದು ನಡೆದ 2022–23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.**

ಪ್ರಭಾರ ಕಾರ್ಯದರ್ಶಿಯವರು ವರದಿ ಪುಸ್ತಕ ಪುಟ 5 ರಿಂದ 19ರವರೆಗಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ಸಭೆಯ ಅಂಗೀಕಾರಕ್ಕೆ ಮಂಡಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಮಾತನಾಡಿ, ಬ್ಯಾಂಕಿನಲ್ಲಿ ಡಿಜಿಟಲೀಕರಣ ಸೌಲಭ್ಯಗಳೆಲ್ಲವನ್ನೂ ಜಾರಿಗೊಳಿಸಿದ್ದು, ಈ ಸಂಬಂಧ ಶ್ರಮವಹಿಸಿದ ನಿರ್ದೇಶಕರುಗಳಾದ ಶ್ರೀ ಎಂ.ಎಸ್.ಪವನ್‌ಕುಮಾರ್ ಹಾಗೂ ಶ್ರೀ ಎನ್.ವೆಂಕಟಾಚಲಂರವರುಗಳನ್ನು ಅಭಿನಂದಿಸಿದರು.  ಮುಂದುವರಿದು, ಇದೇ ರೀತಿ ವ್ಯಾಪಾರಸ್ಥರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ಯೂ.ಆರ್.ಕೋಡ್ ಅನ್ನು ಜಾರಿಗೆ ತಂದಲ್ಲಿ ಅವರುಗಳ ವ್ಯಾಪಾರಾಭಿವೃದ್ಧಿಗೆ ಸಹಕಾರಿಯಾಗುವುದಾಗಿ ತಿಳಿಸಿದರು.

ಪ್ರಭಾರ ಕಾರ್ಯದರ್ಶಿಯವರು ಮಾತನಾಡಿ, ಕ್ಯೂ.ಅರ್.ಕೋಡ್ ಜಾರಿ ತರುವಲ್ಲಿ ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದು, ಅಕ್ಟೋಬರ್ 2024ರ ಮಾಹೆಯೊಳಗೆ ಇದನ್ನು ಜಾರಿಗೊಳಿಸಿ ಚಾಲ್ತಿ ಖಾತೆ ಹೊಂದಿದ ವ್ಯಾಪಾರಸ್ಥರಿಗೆ ನೀಡುವುದಾಗಿ ತಿಳಿಸಿ, ಕ್ಯೂ.ಆರ್.ಕೋಡ್ ಮಾದರಿಯನ್ನು ಸಭೆಯಲ್ಲಿ ಪ್ರದರ್ಶಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಮಾತನ್ನು ಮುಂದುವರಿಸಿ, ಕೆಲ ಸುಸ್ತಿ ಸಾಲಗಳ ವಸೂಲಾತಿ ಬಗ್ಗೆ ಬ್ಯಾಂಕಿನಲ್ಲಿ ಕ್ರಮವಿಡಬೇಕೆಂದು ಸುಮಾರು 10 ವರ್ಷಗಳಿಂದಲೂ ದಾಖಲಾತಿಗಳ ಸಮೇತ ತಿಳಿಸುತ್ತಾ ಬಂದಿದ್ದರೂ ಸಹ ಇದುವರೆವಿಗೂ ಈ ಬಗ್ಗೆ ಯಾವುದೇ ಕ್ರಮವಿಡದಿರುವ ಬಗ್ಗೆ ಆಕ್ಷೇಪಿಸಿ, ಶ್ರೀ ಎನ್.ದೀಪಕ್, ಶ್ರೀಮತಿ ಸುಮಾ ನಾಗೇಶ್, ಶ್ರೀ ಗಂಗಬೈರಯ್ಯ, ಶ್ರೀ ರಮೇಶ್ ಬಾಬು, ಶ್ರೀ ಮಣಿಲನ್, ಶ್ರೀ ಡಿ.ಎ.ರಾಜು, ಶ್ರೀ ಸಂತೋಶ್, ಶ್ರೀ ವೆಂಕಟೇಶ್ ಕುಮಾರ್ ಮುಂತಾದವುಗಳನ್ನು ಪ್ರಸ್ತಾಪಿಸಿ ಅಸಮರ್ಪಕ ದಾಖಲಾತಿಗಳ ಸ್ವತ್ತುಗಳಿಗೆ ಸಾಲ ನೀಡಿದ ಪರಿಣಾಮವೇ ಸುಸ್ತಿ ಸಾಲಗಳಾಗಿರುವುದೆಂದು ತಿಳಿಸಿದರು. ಈ ಮೇಲ್ಕಂಡ ಸಾಲಗಳ ಬಗ್ಗೆ ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಪ್ರಸ್ತಾಪಿಸಿದಾಗ ಆಡಳಿತ ಮಂಡಳಿಯು ಒಂದು ವಿಚಾರಣಾ ಸಮಿತಿಯನ್ನೂ ರಚಿಸಿದ್ದು, ಅದರ ಪ್ರಗತಿಯ ವಿವರವನ್ನು ನೀಡಿರುವುದಿಲ್ಲ. ಈ ಹಿಂದೆ ಶ್ರೀ ಮಣಿಲನ್‌ರವರಿಗೆ ಸಂಬಂಧಿಸಿದ ಸ್ವತ್ತಿನ ಅಡಮಾನದ ಮೇಲೆ ಸಾಲ ರೂ. 20.00 ಲಕ್ಷ ನೀಡಿದ್ದು, ಸಮರ್ಪಕವಾಗಿ ಮರುಪಾವತಿಸದ ಕಾರಣ ಸುಸ್ತಿಯಾಗಿ ಸ್ವತ್ತನ್ನು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗಿರುತ್ತದೆ. ಸದರಿ ಸ್ವತ್ತು ಬಿ ಖಾತಾ ಆಗಿದ್ದು ಇದರ ಅಡಮಾನದ ಮೇಲೆ ಮತ್ತೊಬ್ಬರಿಗೆ ರೂ.50.00 ಲಕ್ಷಗಳ ಸಾಲವನ್ನು ನೀಡಲಾಗಿದ್ದು, ಸದರಿ ಸಾಲವು ಸಹ ಸುಸ್ತಿಯಾಗಿರುತ್ತದೆ. ಈ ಸಾಲಕ್ಕೆ ನಿರ್ದೇಶಕರಾದ ಶ್ರೀ ಕೆ.ಸಿ. ರುದ್ರಮೂರ್ತಿರವರೇ ನೇರವಾಗಿ ಕಾರಣರಾಗಿರುತ್ತಾರೆಂದು ಆರೋಪಿಸಿದರು.

ಮುಂದುವರಿದು, ಇದೇ ರೀತಿ ಶ್ರೀ ಎನ್.ದೀಪಕ್‌ರವರು ತಮ್ಮ ಸಾಲಕ್ಕೆ ಅಡಮಾನ ಮಾಡಿರುವ ಸ್ವತ್ತಿನ ದಾಖಲಾತಿಗಳು ಸರಿಯಿರುವುದಿಲ್ಲ.  ಸದರಿ ಸ್ವತ್ತಿನ ಸ್ಥಳಕ್ಕೆ ನಾನು ಸಹ ಹೋಗಿ ವಿಚಾರಿಸಲಾಗಿ ಸದರಿ ಜಾಗ ದೇವಸ್ಥಾನಕ್ಕೆ ಸೇರಿದ್ದುದಾಗಿ ಅಲ್ಲಿನ ನಿವಾಸಿಗಳು ಹೇಳಿರುತ್ತಾರೆಂದು ತಿಳಿಸಿದರು. ಸ್ವತ್ತಿನ ದಾಖಲಾತಿಗಳು ಸರಿಯಿಲ್ಲದಿದ್ದಾಗ್ಯೂ ಸಹ ಸಾಲ ವಿತರಿಸಲಾಗಿದೆ.  ಸದರಿ ಸ್ವತ್ತನ್ನು ಬ್ಯಾಂಕಿನಿಂದ ಹರಾಜು ಮೂಲಕ ಮಾರಾಟ ಮಾಡಲು 3 ಬಾರಿ ಪ್ರಯತ್ನಿಸಿದ್ದರೂ ಸಹ ಖರೀದಿದಾರರು ಬಂದಿರುವುದಿಲ್ಲ.  ಸ್ವತ್ತಿನ ದಾಖಲಾತಿಗಳು ಸರಿಯಿಲ್ಲದಿದ್ದಲ್ಲಿ ಅದನ್ನು ಮಾರಾಟ ಮಾಡಿದರೆ ಅದರಿಂದ ಕಾನೂನು ತೊಡಕಾದಲ್ಲಿ ಸಂಬಂಧಿಸಿದವರೇ ಜವಾಬ್ದಾರರಾಗುತ್ತಾರೆಂದು ಇತರೆ ಸಂಘವೊಂದನ್ನು ಉದಾಹರಿಸಿ ತಿಳಿಸಿದರು.  ಸದರಿ ಸಾಲಕ್ಕೆ ನಿರ್ದೇಶಕರಾದ ಶ್ರೀ ಬಿ.ಎಸ್.ಪ್ರಸನ್ನಬಾಬುರವರೇ ಹೊಣೆಗಾರರೆಂದು ಕಳೆದ ಸಭೆಯಲ್ಲಿ ನೇರವಾಗಿ ಆರೋಪಿಸಿದ್ದುದಾಗಿ ತಿಳಿಸಿದರು.

ಮುಂದುವರಿದು, ಶ್ರೀಮತಿ ಸುಮಾ ನಾಗೇಶ್‌ರವರಿಗೆ ನೀಡಿದ ಸಾಲದ ಸಂಬಂಧ ಅವ್ಯವಹಾರ ನಡೆದಿದೆಯೆಂದು ಅಂದಿನ ಉಪಾಧ್ಯಕ್ಷರಾದ ಶ್ರೀ ಪಿ.ಎಂ.ಅಶ್ವತ್‌ನಾರಾಯಣ ಹಾಗೂ ನಿರ್ದೇಶಕರಾದ ಶ್ರೀ ಬಿ.ವಿಠಲ್ ಪ್ರಸಾದ್‌ರವರುಗಳೇ ಇಲಾಖೆಗೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿಗೆ ದೂರು ನೀಡಿರುವುದನ್ನು ಉಲ್ಲೇಖಿಸಿ, ಸದರಿ ದೂರಿನನ್ವಯ ಇಲಾಖಾಧಿಕಾರಿಗಳು ಬ್ಯಾಂಕಿಗೂ ಸಹ ಬಂದು ಪರಿಶೀಲಿಸಿರುತ್ತಾರೆಂದು ತಿಳಿಸಿದರು. ನಂತರ ಸಹಕಾರ ಇಲಾಖೆಯು ಬ್ಯಾಂಕಿನ ಕೆಲ ನಿರ್ದೇಶಕರುಗಳ ವಿರುದ್ಧ ಕಾಯ್ದೆ ಕಲಂ 29 ಸಿ ರಡಿ ನೋಟೀಸ್ ಜಾರಿ ಮಾಡಿದ್ದಾರೆಂದು ಹಾಗೂ ಸಹಕಾರ ಕಾಯ್ದೆ ಕಲಂ 64ರ ವಿಚಾರಣೆ ನಡೆದು ಕಲಂ 68ರ ಆದೇಶದಲ್ಲಿ ವಸೂಲಾತಿಗೆ ಸೂಚಿಸಿದ್ದಾಗ್ಯೂ ಆಡಳಿತ ಮಂಡಳಿಯು ಸಂಬಂಧಿಸಿದ ನಿರ್ದೇಶಕರುಗಳಿಗೆ ನೋಟೀಸ್ ಜಾರಿ ಮಾಡಿಲ್ಲವೆಂದು ಮತ್ತು ಈ ಬಗ್ಗೆ ಯಾವುದೇ ಕ್ರಮವಿಟ್ಟಿಲ್ಲವೆಂದು ತಿಳಿಸಿದಾಗ ಸಭಾಧ್ಯಕ್ಷರು ಮಾತನಾಡಿ, ಕಾಯ್ದೆ ಕಲಂ 29ಸಿ ರಡಿಯ ನೋಟೀಸ್‌ಗೆ ನಿರ್ದೇಶಕರುಗಳು ತಡೆಯಾಜ್ಞೆ ಪಡೆದಿರುತ್ತಾರೆಂದು ತಿಳಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಮಾತನ್ನು ಮುಂದುವರಿಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಸ್.ಪ್ರಸನ್ನಬಾಬು ರವರ ವಿರುದ್ಧ ಕೆಲ ಆರೋಪಗಳನ್ನು ಮಾಡಿ, ಅವರಿಗೆ ಕಾಯ್ದೆ ಕಲಂ 29 ಸಿ ರಡಿ ಕ್ರಮಕ್ಕೆ ಮಾತ್ರ ತಡೆಯಾಜ್ಞೆ ಪಡೆದಿದ್ದು, ಕಲಂ 68ರಡಿಯ ವಸೂಲಾತಿ ಕ್ರಮಕ್ಕೆ ಸೂಚಿಸಿದ್ದರೂ ಸಹ ವಸೂಲಾತಿಗೆ ನೋಟೀಸ್ ಜಾರಿ ಮಾಡಿರುವುದಿಲ್ಲವೆಂದು ಆಗ್ರಹಿಸಿ, ಅವರನ್ನು ಬ್ಯಾಂಕಿನ ವಸೂಲಾತಿ ಸಮಿತಿಯಲ್ಲಿ ನೇಮಿಸಿರುವ ಬಗ್ಗೆ ಆಕ್ಷೇಪಿಸಿದರು.

ಚರ್ಚೆಯ ವಿಷಯವಲ್ಲದೇ ಇತರೆ ವಿಷಯಗಳನ್ನು ಸದಸ್ಯರುಗಳು ಪ್ರಸ್ತಾಪಿಸುತ್ತಿದ್ದಾಗ, ಸಭಾಧ್ಯಕ್ಷರು ಸೂಚನಾ ಪತ್ರದಲ್ಲಿನ ವಿಷಯಗಳ ಬಗ್ಗೆ ಮಾತ್ರ ಚರ್ಚಿಸಲು ಹಾಗೂ ಉಳಿದ ಚರ್ಚೆಯನ್ನು ಇತರೆ ವಿಷಯಗಳಡಿ ಚರ್ಚಿಸಲು ವಿನಂತಿಸಿದರು. ಅಧ್ಯಕ್ಷರ ಅನುಮತಿ ಪಡೆದು ನಿರ್ದೇಶಕರಾದ ಶ್ರೀ ಕೆ.ಎಂ. ಶ್ರೀನಿವಾಸಮೂರ್ತಿರವರು ಮಾತನಾಡಿ, ಸದಸ್ಯರುಗಳ ಎಲ್ಲಾ ಚರ್ಚೆಗಳಿಗೂ ಸಭೆಯಲ್ಲಿ ಉತ್ತರಿಸುವುದಾಗಿ ಸದಸ್ಯರು ತಾಳ್ಮೆಯಿಂದ ಸಹಕರಿಸಲು ಕೋರಿದರು.

ಸದಸ್ಯರಾದ ಶ್ರೀ ವಿಜಯಕುಮಾರ್‌ರವರು ಮಾತನಾಡಿ, ಇತರೆ ಬ್ಯಾಂಕುಗಳಂತೆ ನಮ್ಮ ಬ್ಯಾಂಕ್ ಹೆಚ್ಚಿನ ಪ್ರಗತಿ ಸಾಧಿಸಿಲ್ಲವೆಂದು ಆಕ್ಷೇಪಿಸಿದರು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಮಾತನಾಡಿ, ವಾರ್ಷಿಕ ಮಹಾಸಭೆಯಲ್ಲಿನ ನಮ್ಮ ಚರ್ಚೆಗಳನ್ನು ಅತಿರೇಖವೆಂದು ಭಾವಿಸದೇ ಸಹಕಾರ ಕಾಯ್ದೆಯಲ್ಲಿ ವಾರ್ಷಿಕ ಮಹಾಸಭೆ ಕುರಿತ ವ್ಯಾಖ್ಯಾನದಂತೆ ಕಾರ್ಯಕಲಾಪಗಳು ನಡೆಯಬೇಕೆಂಬುದೇ ನಮ್ಮ ಅಭಿಪ್ರಾಯವಾಗಿರುವುದಾಗಿ ತಿಳಿಸಿ, ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಕೆಲ ವಿಷಯಗಳನ್ನು ಚರ್ಚಿಸಿದ್ದ ಸಮಯದಲ್ಲಿ ಗೊಂದಲ ಸೃಷ್ಟಿಸುತ್ತಿದ್ದೇವೆಂದು ಅವರನ್ನು ಸಭೆಯಿಂದ ಹೊರಹಾಕಬೇಕಾದೀತೆಂದು ನಡವಳಿಕೆಯಲ್ಲಿ ನಮೂದು ಮಾಡಿರುವ ಪದಬಳಕೆ ಸರಿಯಾದುದಲ್ಲವೆಂದು ಇದನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು. ಸದಸ್ಯರುಗಳು ಸಭೆಯಲ್ಲಿ ಹಾಜರಿದ್ದು ಬ್ಯಾಂಕಿನ ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡುವುದನ್ನು ಆಡಳಿತ ಮಂಡಳಿಯು ಸ್ವಾಗತಿಸಬೇಕೆಂದು ತಿಳಿಸಿದರು. ಮುಂದುವರಿದು, ಅನೇಕ ಸರ್ವಸದಸ್ಯರ ಸಭೆಯಲ್ಲಿ ತಿಳಿಸುತ್ತಾ ಬಂದಿದ್ದಾಗ್ಯೂ ಬ್ಯಾಂಕಿನಲ್ಲಿ ಖಾಯಂ ಕಾರ್ಯದರ್ಶಿ ನೇಮಕಾತಿ ಮಾಡಿರುವುದಿಲ್ಲ. ಬ್ಯಾಂಕ್ ಯಾವುದೇ ಪ್ರಗತಿ ಕಾಣದೇ, ಸಾಲ ವಸೂಲಾತಿಯಲ್ಲಿ ಪ್ರಗತಿ ಸಾಧಿಸದೇ ಶಾಖೆಗಳು ನಷ್ಟವನ್ನನುಭವಿಸುತ್ತಿದೆ ಎಂದು ಲೆಕ್ಕಪರಿಶೋಧಕರು ಸಹ ತಮ್ಮ ವರದಿಯಲ್ಲಿ ನಮೂದಿಸಿದ್ದು, ಬ್ಯಾಂಕಿನ ಸಿಬ್ಬಂದಿ ಹಾಗೂ ಪಿಗ್ಮಿ ಏಜಂಟರುಗಳ ಸಹಕಾರ ಪಡೆದು ಹೆಚ್ಚಿನ ಸಾಲ ನೀಡುವಿಕೆಗೆ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಸಭಾಧ್ಯಕ್ಷರು ಮಾತನಾಡಿ, ಅಂದಿನ ಸಭೆಯ ಚರ್ಚೆಯಲ್ಲಿ ಅನಗತ್ಯ ವಿಷಯಗಳನ್ನೇ ಪದೇ ಪದೇ ಪ್ರಸ್ತಾಪಿಸಿದ ಕಾರಣದಿಂದ ಈ ರೀತಿ ನಮೂದು ಮಾಡಲಾಗಿತ್ತೇ ವಿನಃ ಹಾಗೂ ಈ ಬಗ್ಗೆ ಯಾವುದೇ ರೀತಿಯ ಕ್ರಮ ಜರುಗಿಸಿರಲಿಲ್ಲವೆಂದು ಸಮಜಾಯಿಷಿ ನೀಡಿದರು. ಆದಾಗ್ಯೂ ಈ ರೀತಿ ನಮೂದು ಮಾಡಿರುವುದು ತಪ್ಪೆಂದು ಸದಸ್ಯರುಗಳು ಪುನಃ ತಿಳಿಸಲು ಮುಂದಾದಾಗ ನಿರ್ದೇಶಕರಾದ ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿಯವರು ಮಾತನಾಡಿ, ಕಳೆದ ಸಭೆಯ ಚರ್ಚೆಯಲ್ಲಿ ಕೆಲ ಸದಸ್ಯರುಗಳು ಆವೇಶ ಭರಿತವಾಗಿ ಪ್ರಸ್ತಾಪಿಸಿದ್ದನ್ನು ಈ ರೀತಿ ನಮೂದಿಸಲಾಗಿದ್ದು, ಆದಾಗ್ಯೂ ನಂತರ ಸದಸ್ಯರನ್ನು ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿರುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು ಮಾತನಾಡಿ, ನನ್ನ ಮತ್ತು ಮತ್ತೊಬ್ಬ ಸದಸ್ಯರ ಬಗ್ಗೆ ನಡವಳಿಕೆಯಲ್ಲಿ ನಮೂದಿಸಿರುವ ಸದರಿ ವಿಷಯವನ್ನು ಕಡತದಿಂದ ತೆಗೆಯಲು ಕೋರಿದರು.

ನಂತರ ದಿನಾಂಕ 10.09.2023 ರಂದು ನಡೆದ 2022–23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡವಳಿಕೆಗಳು ನಮೂದಾಗಿರುವುದು ಸರಿಯಾಗಿರುವುದೆಂದು ಸರ್ವಾನುಮತದಿಂದ ಒಪ್ಪಿ ದಾಖಲು ಮಾಡಲಾಯಿತು.

**6. 2023–24ನೇ ಸಾಲಿನ ಆಡಳಿತ ಮಂಡಳಿ ವರದಿ ಅಂಗೀಕರಿಸುವುದು:**

ವರದಿ ಪುಸ್ತಕ ಪುಟ 20 ರಿಂದ 29ರವರೆಗಿರುವ 2023–24ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಪ್ರಭಾರ ಕಾರ್ಯದರ್ಶಿಯವರು ಸವಿವರವಾಗಿ ಓದಿ, ವಿವರಿಸಿ ಸರ್ವಸದಸ್ಯರ ಸಭೆಯ ಅಂಗೀಕಾರಕ್ಕೆ ಮಂಡಿಸಿದರು. ಮುಂದುವರಿದು ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದ ನೋಟೀಸ್, ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿಯೊಂದಿಗಿನ ಲೆಕ್ಕಪತ್ರ ತಃಖ್ತೆಗಳು, ಆಯವ್ಯಯ, ನಿವ್ವಳ ಲಾಭ ವಿತರಣಾ ವಿವರ ಗಳೊಂದಿಗಿನ ವಿಷಯ ಸೂಚಿ ಕುರಿತ ಎಲ್ಲಾ ಮಾಹಿತಿಗಳನ್ನು ಸದಸ್ಯರುಗಳಿಗೆ ನೀಡಿರುವುದಲ್ಲದೇ ಬ್ಯಾಂಕಿನ ವೆಬ್‌ಸೈಟ್ www.gmcbank.net ನಲ್ಲೂ ಪ್ರಕಟಿಸಿರುವುದಾಗಿ ತಿಳಿಸಿದರು. ನಂತರ ಸಭಾಧ್ಯಕ್ಷರು ವಿಷಯ ಕುರಿತ ಚರ್ಚೆಗೆ ಸೂಚಿಸಿದರು.

ಸಭೆಯಲ್ಲಿ ಶ್ರೀ ಪಿ.ವೆಂಕಟೇಶ್‌ರರು ಮಾತನಾಡಿ, ಬ್ಯಾಂಕಿನ ಅನೇಕ ನಿರ್ದೇಶಕರುಗಳು ವ್ಯಾಪಾರಸ್ಥರಾಗಿದ್ದು, ಇತರ ರಾಷ್ಟ್ರೀಕೃತ ಬ್ಯಾಂಕುಗಳಂತೆ ವ್ಯಾಪಾರಸ್ಥರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಟರ್ನೋವರ್ ಓಡಿ ಸೌಲಭ್ಯಗಳನ್ನು ಕಡಿಮೆ ಬಡ್ಡಿದರದಲ್ಲಿ ವಿತರಿಸಲು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಮಾತನಾಡಿ, ಬ್ಯಾಂಕಿನ ಹೆಚ್ಚುವರಿ ಮೊಬಲಗು ಲಭ್ಯವಿದ್ದು, ಸಾಲ ನೀಡುವಿಕೆ ಪ್ರಮಾಣ ಕುಂಠಿತವಾಗಿ, ಅನುತ್ಪಾದಕ ಪ್ರಮಾಣ ಹೆಚ್ಚಾಗಿ, ಲಾಭದ ಮೇಲೂ ಸಹ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಗುಣಮಟ್ಟದ ಸಾಲ ನೀಡುವಿಕೆಗೆ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಸದಸ್ಯರ ಸಲಹೆಯನ್ನು ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ ಕ್ರಮವಿಡುವುದಾಗಿ ಅಧ್ಯಕ್ಷರು ತಿಳಿಸಿದರು.

ನಂತರ 2023–24ನೇ ಸಾಲಿನ ಆಡಳಿತ ಮಂಡಳಿ ವರದಿ ಸಮರ್ಪಕವಾಗಿದ್ದು, ಅಂಗೀಕರಿಸಬಹುದೆಂದು ಶ್ರೀ ಪಿ.ವೆಂಕಟೇಶ್ (ಸ.ಸಂ.R07554)ರವರು ಸೂಚಿಸಿದುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**7. 2023–24ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ–ನಷ್ಟ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಜಾಯಿಷಿಯನ್ನು ಅನುಮೋದಿಸುವುದು.**

ವರದಿ ಪುಸ್ತಕ ಪುಟ ಸಂಖ್ಯೆ 34 ರಿಂದ 36 ರವರೆಗಿನ ಆಡಿಟ್ಟಾದ ಲಾಭ–ನಷ್ಟ, ಆಸ್ತಿ–ಜವಾಬ್ದಾರಿಯ ಲೆಕ್ಕಪತ್ರ ತಃಖ್ತೆ ಮತ್ತು ಪುಟ 37 ರಿಂದ 64 ರವರೆಗಿನ 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಲೆಕ್ಕಪರಿಶೋಧಕರು ತಿಳಿಸಿರುವ ನ್ಯೂನತೆಗಳಿಗೆ ಆಡಳಿತ ಮಂಡಳಿಯವರ ಸಮಜಾಯಿಷಿಯ ವಿವರವನ್ನು ಸಭೆಯ ಅನುಮೋದನೆಗೆ ಪ್ರಭಾರ ಕಾರ್ಯದರ್ಶಿಯವರು ಮಂಡಿಸಿದರು.

ಸಭೆಯಲ್ಲಿ ಶ್ರೀ ಪಿ.ವೆಂಕಟೇಶ್‌ರರು ಮಾತನಾಡಿ, ಕಾಯ್ದೆ ಕಲಂ 68ರ ಆದೇಶದಲ್ಲಿ ವಸೂಲಾತಿಗಿಟ್ಟಿರುವ ಮೊಬಲಗಿನ ಬಗ್ಗೆ ಕ್ರಮವಿಡಬೇಕೆಂದು ಬ್ಯಾಂಕಿನ ಲೆಕ್ಕಪರಿಶೋಧಕರು ತಿಳಿಸಿದ್ದು, ಅದರೆ ಈ ಸಾಲಿನಲ್ಲಿ ನಿವೃತ್ತರಾದ ಪ್ರಭಾರ ಕಾರ್ಯದರ್ಶಿ ಶ್ರೀ ಬಿ.ವಿ.ಮಂಜುನಾಥ್ ರವರಿಂದ ಕಾಯ್ದೆ ಕಲಂ 68ರ ರೀತ್ಯ ಮೊಬಲಗು ವಸೂಲಾಗಬೇಕಾಗಿದ್ದರೂ ಸಹ ಅವರಿಗೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ಪಾವತಿಸಿರುವುದು ಸರಿಯಲ್ಲವೆಂದು, ಈ ನಿಟ್ಟಿನಲ್ಲಿ ಲೆಕ್ಕಪರಿಶೋಧಕರ ಸಲಹೆಯನ್ನು ತಾವು ಪಾಲಿಸದೆ ಉಲ್ಲಂಘಿಸಿರುತ್ತೀರೆಂದು ಆರೋಪಿಸಿದರು. ಮೊಬಲಗು ಪಾವತಿ ಬಗ್ಗೆ ತಜ್ಞರ ಅಭಿಪ್ರಾಯ ಪಡೆಯಲು ಪತ್ರ ನೀಡಿದ್ದರೂ ಸಹ ತಾವು ತಜ್ಞರ ಅಭಿಪ್ರಾಯ ಪಡೆದಿರುವುದಿಲ್ಲ. ಮತ್ತೆ ಅವರನ್ನು ಬ್ಯಾಂಕಿನ ಸಲಹೆಗಾರರನ್ನಾಗಿ ನೇಮಕ ಮಾಡಲು ಹೊರಟಿರುವುದೂ ಸಹ ಸರಿಯಾದ ಕ್ರಮವಲ್ಲವೆಂದರು.

ಸಭಾಧ್ಯಕ್ಷರು ಮಾತನಾಡಿ, ನಿವೃತ್ತ ಸಿಬ್ಬಂದಿಗಳ ಸೇವಾ ಸೌಲಭ್ಯಗಳನ್ನು ತಡೆಹಿಡಿಯಲು ಅವಕಾಶವಿಲ್ಲವಾದ್ದರಿಂದ ಅವರಿಂದ ಸೂಕ್ತ ಮುಚ್ಚಳಿಕೆ ಪಡೆದು ಸೇವಾ ಸೌಲಭ್ಯದ ಮೊಬಲಗನ್ನು ಪಾವತಿಸಿರುವುದಾಗಿ ಹಾಗೂ ಈ ಹಿಂದೆ ನಿವೃತ್ತರಾದ ಎಲ್ಲಾ ಸಿಬ್ಬಂದಿಗಳಿಗೂ ಸಹ ಸೇವಾ ಸೌಲಭ್ಯಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು. ಆದಾಗ್ಯೂ ಸದಸ್ಯರು ಸಮಾಧಾನಗೊಳ್ಳದೇ ಲೆಕ್ಕಪರಿಶೋಧನೆಯ ಆಕ್ಷೇಪಣೆಯಿದ್ದಾಗ್ಯೂ ತಾವು ಮೊಬಲಗು ಪಾವತಿಸಿರುವುದು ಸರಿಯಾದ ಕ್ರಮವಲ್ಲವೆಂದು ಸದರಿ ಮೊಬಲಗನ್ನು ಅವರಿಂದ ವಾಪಸ್ ಪಡೆಯಬೇಕೆಂದು ಆಗ್ರಹಿಸಿ, ಈ ಹಿಂದಿನ ನಿವೃತ್ತ ಅಧಿಕಾರಿಗಳು ನ್ಯಾಯಾಲಯದ ಮೊರೆ ಹೋಗಿದ್ದ ಪರಿಣಾಮ ಅವರಿಗೆ ಮೊಬಲಗನ್ನು ಪಾವತಿಸಿರುತ್ತೀರೆಂದು ತಿಳಿಸಿದರು. ಸಭಾಧ್ಯಕ್ಷರ ಅನುಮತಿ ಪಡೆದು ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿ ಯವರು ಉತ್ತರಿಸಿ, ನಿವೃತ್ತ ಸಿಬ್ಬಂದಿಗಳ ಸೇವಾ ಸೌಲಭ್ಯಗಳನ್ನು ತಡೆಹಿಡಿಯಲು ಅವಕಾಶವಿಲ್ಲದಿರುವುದರಿಂದ ಹಾಗೂ ಅವರಿಂದ ಸೂಕ್ತ ಮುಚ್ಚಳಿಕೆಯನ್ನು ಪಡೆದು ಮೊಬಲಗನ್ನು ಪಾವತಿಸಲು ಆಡಳಿತ ಮಂಡಳಿ ವ್ಯಾಪ್ತಿಯ ಪರಿಮಿತಿಯಲ್ಲಿ ತೀರ್ಮಾನಿಸಿ ಇತ್ಯರ್ಥ ಪಡಿಸಿರುವುದಾಗಿ ತಿಳಿಸಿದರು. ಆದಾಗ್ಯೂ ತಮಗೆ ಈ ಬಗ್ಗೆ ಅಸಮಾಧಾನವಿದ್ದಲ್ಲಿ ತಾವು ಇದನ್ನು Competent Authorityಯಲ್ಲಿ ಪ್ರಶ್ನಿಸಬಹುದೆಂದರು.

ನಿವೃತ್ತ ಪ್ರಭಾರ ಕಾರ್ಯದರ್ಶಿ ಹಾಗೂ ಸದಸ್ಯರಾದ ಶ್ರೀ ಜಿ.ಎಸ್.ನಾಗರಾಜ್‌ರವರು ಮಾತನಾಡಿ, ಬ್ಯಾಂಕಿನ ಸರ್ವಸದಸ್ಯರಿಗೆ ಸರ್ವೋಚ್ಚ ಅಧಿಕಾರವಿದ್ದು, ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ಸಮಜಾಯಿಷಿ ನೀಡಬೇಕಾದ್ದು ಆಡಳಿತ ಮಂಡಳಿಯ ಕರ್ತವ್ಯವಾಗಿದೆ. ಈ ಬಗ್ಗೆ ಕ್ರಮವಿಡದೇ Competent Authorityಯಲ್ಲಿ ಪ್ರಶ್ನಿಸಬಹುದೆಂಬ ಅಭಿಪ್ರಾಯವನ್ನು ಉಪಾಧ್ಯಕ್ಷರು ಸಭೆಗೆ ನೀಡುತ್ತಿರುವುದು ಸರಿಯಲ್ಲವೆಂದು ಹಾಗೂ ಸರ್ವಸದಸ್ಯರುಗಳ ಪ್ರಶ್ನೆಗಳಿಗೆ ಸಭಾಧ್ಯಕ್ಷರೇ ಸಮಜಾಯಿಷಿ ನೀಡಬೇಕೆಂದು ತಿಳಿಸಿದರು.

ಸದಸ್ಯರಾದ ಶ್ರೀ ಆರ್.ಮುನಿರಾಜುರವರು ಮಾತನಾಡಿ, ನಾನು ಸಭೆಯಲ್ಲಿ ಕೆಲ ವಿಷಯಗಳನ್ನು ಪ್ರಸ್ತಾಪಿಸಲಿದ್ದು, ಇದಕ್ಕೆ ನಿರ್ದೇಶಕರಾದ ಶ್ರೀ ಬಿ.ಎಸ್.ಪ್ರಸನ್ನಬಾಬುರವರು ಉತ್ತರಿಸಲು ಅಧ್ಯಕ್ಷರು ಅನುಮತಿ ನೀಡಬೇಕೆಂದು ಕೋರಿದರು. ಮುಂದುವರಿದು, ಬ್ಯಾಂಕ್ ಹೆಚ್ಚಿನ ಪ್ರಗತಿ ಕಾಣದಿರಲು ಕೆಲವು ಹಿತಾಸಕ್ತಿಗಳು ಕಾರಣವಾಗಿದ್ದು, ಸಿಬ್ಬಂದಿ ಶೋಷಣೆ, ಅಸಮರ್ಪಕ ಸಾಲದ ಕಡತಗಳ ಮಂಜೂರಾತಿಗೆ ಒತ್ತಾಯ ಇತ್ಯಾದಿ ವಿರೋಧಿ ಚಟುವಟಿಕೆಗಳು ನಡೆಯುತ್ತಿದ್ದು, ಇದಕ್ಕೆಲ್ಲ ನಿರ್ದೇಶಕರಾದ ಶ್ರೀ ಬಿ.ಎಸ್. ಪ್ರಸನ್ನಬಾಬುರವರೇ ಮೂಲ ಕಾರಣವೆಂದು ಆಕ್ಷೇಪಿಸಿ ಅವರಿಂದ ಪ್ರತ್ಯುತ್ತರ ಅಪೇಕ್ಷಿಸಿದರು. ಅಲ್ಲದೇ ಇಂತಹ ಕೃತ್ಯಗಳಿಂದ ಕೆಲ ಸಿಬ್ಬಂದಿಗಳು ಬ್ಯಾಂಕಿನಿಂದಲೇ ನಿರ್ಗಮಿಸಿರುವುದನ್ನು ಉದಾಹರಿಸಿದರು. ಸಾಲದ ಕಡತಗಳಿಗೆ ಹೆಚ್ಚಿನ ಕಮೀಷನ್ ರೂಪದಲ್ಲಿ ಹಣಪಡೆಯುತ್ತಿರುವ ಶಂಕೆಯೂ ಇದ್ದು ಈ ಎಲ್ಲಾ ಕಾರಣಗಳಿಂದ ಉನ್ನತ ಮಟ್ಟದ ತನಿಖೆಗೊಳಪಡಿಸುವಂತೆ ಆಗ್ರಹಿಸಿ, ಇಂತಹ ಹಿತಾಸಕ್ತಿಗಳು ಬ್ಯಾಂಕಿನಿಂದ ಹೊರಹೋದಲ್ಲಿ ಬ್ಯಾಂಕಿನ ವಹಿವಾಟು ವೃದ್ಧಿಸಲಿದೆಯೆಂದು ತಿಳಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಶ್ರೀ ಆರ್.ಮುನಿರಾಜುರವರ ಆಪಾದನೆಯನ್ನು ಸಮರ್ಥಿಸಿ, ನಿರ್ದೇಶಕರಾದ ಶ್ರೀ ಬಿ.ಎಸ್.ಪ್ರಸನ್ನಬಾಬುರವರಿಂದಲೇ ಸೂಕ್ತ ಸಮಜಾಯಿಷಿ ಅಪೇಕ್ಷಿಸಿದರು. ಮುಂದುವರಿದು, ಕೆಲ ಸಾಲದ ಕಡತಗಳು ಮಂಜೂರಾತಿಗೆ ಪರಿಗಣಿಸದ ಸಂದರ್ಭದಲ್ಲಿ ಬ್ಯಾಂಕಿನ ಸಾಲದ ಪ್ರಮಾಣವು ಕುಂಠಿತವಾಗಿ ಬ್ಯಾಂಕ್ ನಷ್ಟವನ್ನನುಭವಿಸುತ್ತಿದೆ. ಮೌಲ್ಯವಿಲ್ಲದ ಸಾಲಗಳ ನೀಡುವಿಕೆಯಿಂದ ಹಲವಾರು ಸಹಕಾರಿ ಬ್ಯಾಂಕುಗಳು ಅವಸಾನದತ್ತ ಸಾಗಿರುವ ಉದಾಹರಣೆಗಳು ನಮ್ಮ ಮುಂದಿದ್ದು, ಇಂತಹ ಅವಘಡ ನಮ್ಮ ಬ್ಯಾಂಕಿನಲ್ಲಿ ನಡೆಯದಂತೆ ಎಚ್ಚರ ವಹಿಸಲು ಎಲ್ಲಾ ನಿರ್ದೇಶಕರು ಕಠಿಣ ನಿರ್ಧಾರ ಕೈಗೊಳ್ಳುವಂತೆ ಸಲಹೆ ನೀಡಿದರು. ಬ್ಯಾಂಕಿನ ದೈನಂದಿನ ವ್ಯವಹಾರದ ವೇಳೆಯಲ್ಲಿ ನಿರ್ದೇಶಕರುಗಳು ಹಸ್ತಕ್ಷೇಪ ಮಾಡಬಾರದೆಂದಿದ್ದರೂ ಸಹ ಬಹುತೇಕ ವೇಳೆಯಲ್ಲಿ ಸದರಿ ನಿರ್ದೇಶಕರು ಬ್ಯಾಂಕಿನಲ್ಲೇ ಇರುವುದನ್ನು ನಾವುಗಳು ನೋಡಿದ್ದು, ಇದಕ್ಕೆ ಹಲವಾರು ಬಾರಿ ಆಕ್ಷೇಪಣೆಯನ್ನೂ ಸಹ ಮಾಡಿರುವುದಾಗಿ ತಿಳಿಸಿದರು.

ಮೇಲ್ಕಂಡ ಚರ್ಚೆಗಳಿಗೆ ನಿರ್ದೇಶಕರಾದ ಶ್ರೀ ಬಿ.ಎಸ್.ಪ್ರಸನ್ನಬಾಬುರವರು ಸಮಜಾಯಿಷಿ ನೀಡುವಂತೆ ಸಭಾಧ್ಯಕ್ಷರು ತಿಳಿಸಿದರು. ಸಭಾಧ್ಯಕ್ಷರ ಅನುಮತಿಯೊಡನೆ ಶ್ರೀ ಬಿ.ಎಸ್.ಪ್ರಸನ್ನಬಾಬುರವರು ಸಭೆಗೆ ಸಮಜಾಯಿಷಿ ನೀಡಿ, ಬ್ಯಾಂಕಿನಲ್ಲಿ ಮಂಜೂರಾಗಿರುವ ಸಾಲದ ಕಡತಗಳಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ಹಾಗೂ ಸಾಲ ಮಂಜೂರಾತಿಗೆ ಯಾರಿಗೂ ಒತ್ತಡ ಹಾಕಿಲ್ಲವೆಂದು ಸಮರ್ಥಿಸಿದರು. ಮುಂದುವರಿದು, ಸಾಲದ ಮಂಜೂರಾತಿಗೆ ಮುನ್ನ ಕೈಗೊಳ್ಳುವ ಕಾನೂನಾತ್ಮಕ ನಡವಳಿಕೆ ರೀತಿಯಲ್ಲಿಯೇ ಸಾಲದ ಕಡತಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲನೆಗೊಳಪಡಿಸಿ ಅಂತಿಮವಾಗಿ ಆಡಳಿತ ಮಂಡಳಿಯಲ್ಲಿ ಮಂಜೂರಾತಿ ಮಾಡಲಾಗುತ್ತಿದ್ದು, ಈಗಲೂ ಸದಸ್ಯರು ಆರೋಪಿಸಿ ಹೆಸರಿಸುತ್ತಿರುವ ಶ್ರೀ ಎನ್.ದೀಪಕ್ ರವರ ಸ್ವತ್ತು ಬ್ಯಾಂಕಿನ ಸುಪರ್ದಿಯಲ್ಲಿದ್ದು, ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಆಸಕ್ತ ಖರೀದಿದಾರರು ಬ್ಯಾಂಕನ್ನು ಸಂಪರ್ಕಿಸಿದ್ದು ಸದ್ಯದರಲ್ಲೇ ಇತ್ಯರ್ಥಗೊಳಿಸುವ ಭರವಸೆ ನೀಡಿದರು.

ಸಾಲಗಳ ಕಡತ ಪರಿಶೀಲನೆ ಹಾಗೂ ಮಂಜೂರಾತಿ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಲೇಬೇಕೆಂದು ಸಭೆಯ ಚರ್ಚೆಯಲ್ಲಿ ಭಾಗವಹಿಸಿದ್ದ ಸದಸ್ಯರುಗಳು ಒತ್ತಾಯಿಸಿದರು.

ಈ ಹಂತದಲ್ಲಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದ ಹಾಗೂ ಸಭೆಯಲ್ಲಿನ ಕೆಲ ಸದಸ್ಯರ ಮಧ್ಯೆ ಬಿರುಸಿನ ಮಾತಿನ ಚಕಮಕಿ ನಡೆದು ಗೊಂದಲದ ವಾತಾವರಣ ಸೃಷ್ಟಿಯಾಯಿತು. ಈ ಹಂತದಲ್ಲಿ ಸದಸ್ಯರು ಗಲಭೆ/ಗೊಂದಲ ಮಾಡದಂತೆ ವೇದಿಕೆಯಿಂದ ಎಚ್ಚರಿಸಿ ಸಭೆಯನ್ನು ನಿಯಂತ್ರಿಸಲಾಯಿತು.

ಸದಸ್ಯರಾದ ಶ್ರೀ ಎ.ಎಂ.ರಾಮಮೂರ್ತಿರವರು ಮಾತನಾಡಿ, ಬ್ಯಾಂಕಿನ ಸಾಲದ ಕಡತಗಳ ಮಂಜೂರಾತಿಯಲ್ಲಿ ಪಾರದರ್ಶಕ ಕ್ರಮವಿಟ್ಟಿಲ್ಲವೆಂದು ಹಾಗೂ ಹಳೆಯ ಸುಸ್ತಿ ವಸೂಲಾತಿಗಾಗಿ ಇತ್ತೀಚಿನ ವರ್ಷವಷ್ಟೇ ಅಲ್ಲದೇ ಹಿಂದಿನ ಹಲವಾರು ವರ್ಷಗಳ ಮಹಾಸಭೆಗಳಲ್ಲಿಯೂ ಸಹ ಸದಸ್ಯರುಗಳು ಆಕ್ಷೇಪಿಸಿ ಆರೋಪ ಪ್ರತ್ಯಾರೋಪಗಳನ್ನು ಮಾಡುತ್ತಾ ಬರುತ್ತಿದ್ದು, ಆಡಳಿತ ಮಂಡಳಿಯು ಅನ್ಯತಾ ಅಪಾರ್ಥಕ್ಕೆ ಅವಕಾಶ ಮಾಡಿಕೊಡದೆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮವಹಿಸಲು ಸಲಹೆ ನೀಡಿದರು.

ಸಭಾಧ್ಯಕ್ಷರು ಮಾತನಾಡಿ, ಮಾನ್ಯ ಎ.ಎಂ.ರಾಮಮೂರ್ತಿರವರ ಸಲಹೆಯು ಉತ್ತಮವಾಗಿದ್ದು, ಈ ಬಗ್ಗೆ ಸೂಕ್ತ ಕ್ರಮವಿಡುತ್ತೇವೆಂದು ಹಾಗೂ ಸಭೆಯಲ್ಲಿ ಪ್ರಸ್ತಾಪಿಸಲಾದಂತೆ ದಿ॥ಎಂ.ಎಸ್.ಪಾಪಣ್ಣ ಮತ್ತು ಕುಟುಂಬದವರ ಸುಸ್ತಿ ವಸೂಲಾತಿಗೆ 2011 ರಲ್ಲಿ ಸುಪರ್ದಿಗೆ ಪಡೆಯಲಾದ ಸ್ವತ್ತಿಗೆ ಸಂಬಂಧಿಸಿದಂತೆ ಕೆಲ ನ್ಯಾಯಾಲಯದ ಅಡೆತಡೆಗಳಿದ್ದು, ಇವುಗಳನ್ನು ನಿವಾರಿಸಿ ಸದ್ಯದರಲ್ಲೇ ಇತ್ಯರ್ಥಪಡಿಸುವ ಭರವಸೆ ನೀಡಿದರು.

ನಂತರ 2023–24ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ–ನಷ್ಟ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಜಾಯಿಷಿಯನ್ನು ಒಪ್ಪಬಹುದೆಂದು ಶ್ರೀ ಎನ್.ಮುರಳಿಧರ್ (ಸ.ಸಂ. R09332)ರವರು ಸೂಚಿಸಿದುದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**8. ಲೆಕ್ಕಪರಿಶೋಧಕರ ದೃಢೀಕರಣದಂತೆ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಮತ್ತು ನಿಧಿಗಳ ವಾಸ್ತವಿಕ ಬಳಕೆಯ ಅನುಮೋದನೆ.**

ವರದಿ ಪುಸ್ತಕ ಪುಟ ಸಂಖ್ಯೆ 20 ರಿಂದ 22 ರವರೆಗಿನ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಹಾಗೂ ನಿಧಿಗಳ ಬಳಕೆ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಶ್ಲೇಷಿಸಿರುವ ವಿವರವನ್ನು ಸಭೆಯ ಅನುಮೋದನೆಗೆ ಪ್ರಭಾರ ಕಾರ್ಯದರ್ಶಿಯವರು ಮಂಡಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಹಿಂದಿನ ಪ್ರಭಾರ ಕಾರ್ಯದರ್ಶಿ ಶ್ರೀ ಎಸ್.ಆರ್.ಆನಂದ್‌ರವರಿಗೆ ಸಿಬ್ಬಂದಿ ಕ್ಷೇಮನಿಧಿಯಿಂದ ರೂ.50,000/– ಗಳನ್ನು ಪಾವತಿಸಿರುವುದನ್ನು ಆಕ್ಷೇಪಿಸಿದರು. ಬ್ಯಾಂಕಿನ ಇತರೆ ನಿವೃತ್ತ ಸಿಬ್ಬಂದಿಗಳು ಅನಾರೋಗ್ಯದಿಂದಿದ್ದರೂ ಸಹ ಯಾರಿಗೂ ಸಹಾಯ ಮಾಡದೇ ಇವರಿಗೆ ಮಾತ್ರ ಮೊಬಲಗನ್ನು ಪಾವತಿಸಿರುವುದರ ಔಚಿತ್ಯವನ್ನು ಪ್ರಶ್ನಿಸಿ, ಎಲ್ಲಾ ಸಿಬ್ಬಂದಿಗಳನ್ನು ಒಂದೇ ರೀತಿ ಕಾಣಲು ಸಲಹೆ ನೀಡಿ ಸದರಿ ಮೊಬಲಗನ್ನು ವಾಪಸ್ ಪಡೆಯಲು ಸೂಚಿಸಿದರು. ಇದೇ ಅಭಿಪ್ರಾಯವನ್ನು ಸದಸ್ಯರಾದ ಶ್ರೀ ಜಿ.ಎಸ್.ನಾಗರಾಜ್‌ರವರು ವ್ಯಕ್ತಪಡಿಸಿ, ಹಲವಾರು ಸಿಬ್ಬಂದಿಗಳು ನಿವೃತ್ತರಾಗಿದ್ದು, ನಿವೃತ್ತಿಹೊಂದಿದ ಸಂದರ್ಭದಲ್ಲಿ ಅವರುಗಳನ್ನು ಗೌರವಯುತವಾಗಿ ಬೀಳ್ಕೊಡುವ ಸೌಜನ್ಯವನ್ನೂ ಸಹ ತೋರಿಸದಿರುವುದು ಅಸಮಾಧಾನವಾಗಿದ್ದು ಈ ರೀತಿ ತಾರತಮ್ಯ ಮಾಡದಂತೆ ಅಗ್ರಹಿಸಿದರು.

ನಿವೃತ್ತ ಸಿಬ್ಬಂದಿ ಶ್ರೀ ಎಲ್.ವಿ.ರೇಣುಕಾಪ್ರಸಾದ್‌ರವರು ಮಾತನಾಡಿ, ನಾನು ಬ್ಯಾಂಕಿನಲ್ಲಿ ಸುಮಾರು 38 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ನಿವೃತ್ತಿ ಅಂಚಿನಲ್ಲಿದ್ದ ಸಮಯದಲ್ಲಿ ಕ್ಷುಲ್ಲಕ ಕಾರಣಕ್ಕೆ ಇನ್‌ಕ್ರಿಮೆಂಟ್ ಕಡಿತಗೊಳಿಸಿದ ಸಂದರ್ಭದಲ್ಲಿ ಮನನೊಂದು ಸ್ವಯಂ ನಿವೃತ್ತಿ ಪಡೆದಿದ್ದು, ಹಾಲಿ ಆರ್ಥಿಕ ಸಂಕಷ್ಟ ಹಾಗೂ ಅನಾರೋಗ್ಯದಿಂದಿರುವ ನನಗೆ ಬ್ಯಾಂಕಿನಿಂದ ಧನಸಹಾಯ ಮಾಡಿಕೊಡಲು ವಿನಂತಿಸಿದರು. ಇವರಿಗೆ ಸಹಾಯ ನೀಡಲು ಸದಸ್ಯರು ಸಹ ಒತ್ತಾಯಿಸಿದರು.

ಸದಸ್ಯರುಗಳಾದ ಶ್ರೀ ಆರ್.ಮುನಿರಾಜು ಹಾಗೂ ಶ್ರೀ ಪಿ.ಕೆ.ಸುರೇಶ್‌ರವರು ಮಾತನಾಡಿ, ಕೆಲ ನಿವೃತ್ತ ಸಿಬ್ಬಂದಿಗಳು ನ್ಯಾಯಾಲಯದ ವ್ಯಾಪ್ತಿಯಲ್ಲಿ ತಕರಾರುಗಳನ್ನು ಸಲ್ಲಿಸಿದ್ದು, ಈ ಬಗ್ಗೆ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ಸಹಾನುಭೂತಿ ತೋರಿ ಯಾವುದೇ ಸಿಬ್ಬಂದಿಗಳಿಗೂ ಅನಾನುಕೂಲವಾಗದಂತೆ ಕ್ರಮವಿಡಲು ವಿನಂತಿಸಿದರು.

ಸಭಾಧ್ಯಕ್ಷರು ಮಾತನಾಡಿ, ಪ್ರಭಾರ ಕಾರ್ಯದರ್ಶಿ ಶ್ರೀ ಎಸ್.ಆರ್.ಆನಂದ್‌ರವರು ಧೀರ್ಘಾವಧಿ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಆಡಳಿತ ಮಂಡಳಿ ತೀರ್ಮಾನದನ್ವಯ ಸಿಬ್ಬಂದಿ ಕ್ಷೇಮನಿಧಿಯಿಂದ ಪಾವತಿಸಿರುವುದಾಗಿ ಹಾಗೂ ಇನ್ನಿತರ ಸಿಬ್ಬಂದಿಗಳು ತಮ್ಮ ಅಹವಾಲುಗಳನ್ನು ಸಲ್ಲಿಸಿದಲ್ಲಿ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ ಕ್ರಮವಿಡುವ ಭರವಸೆ ನೀಡಿದರು.

2023–24ನೇ ಸಾಲಿನ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಹಾಗೂ ನಿಧಿಗಳ ಬಳಕೆ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಶ್ಲೇಷಿಸಿರುವ ವಿವರವನ್ನು ಒಪ್ಪಬಹುದೆಂದು ಶ್ರೀ ಎಸ್.ಎಸ್.ಸುರೇಶ್ ಬಾಬು (ಸ.ಸಂ. R14685) ರವರು ಸೂಚಿಸಿದುದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**9. 2023–24ನೇ ಸಾಲಿನ ನಿವ್ವಳ ಲಾಭದ ಹಂಚಿಕೆ**

ಪ್ರಭಾರ ಕಾರ್ಯದರ್ಶಿಯವರು ವರದಿ ಪುಸ್ತಕದ ಪುಟ 65ರಲ್ಲಿನ ಸಹಕಾರ ಸಂಘಗಳ ಕಾಯ್ದೆ ಕಲಂ 67, ನಿಯಮ 22, ಉಪನಿಯಮ ಸಂಖ್ಯೆ 109ರ ರೀತ್ಯ ಹಂಚಿಕೆ ಮಾಡಲಾದ 2023–24ನೇ ಸಾಲಿನ ಈ ಕೆಳಕಂಡಂತಿರುವ ನಿವ್ವಳ ಲಾಭದ ವಿಲೇವಾರಿ ಪಟ್ಟಿಯನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ವಿವರಿಸಿದರು.

| | ವಿವರ | | 2023-24ನೇ ಸಾಲಿಗೆ ಹಂಚಿಕೆ |
|---|---|---|---|
| 01 | ಆಪದ್ಧನ ನಿಧಿ (ಶೇ.25 ರಂತೆ) | ಶೇ.25 | 68,04,125.69 |
| | ಜಾತ ಉಳಿದ ಲಾಭಾಂಶ ಮೊಬಲಗು ರೂ.2,04,12,377/-ಗಳ ಮೇಲೆ | | |
| 02 | ಸಹಕಾರ ಶಿಕ್ಷಣ ನಿಧಿ (ಸಹಕಾರ ಮಹಾಮಂಡಳ ನಿ.,) (ಶೇ.2 ರಂತೆ) | ಶೇ.2 | 4,08,248.00 |
| 03 | ಸಹಕಾರ ಶಿಕ್ಷಣ ನಿಧಿ (ಸ.ಪ.ಬ್ಯಾ. ಮಹಾಮಂಡಳ ನಿ.,) (ಶೇ.1 ರಂತೆ) | ಶೇ.1 | 2,04,124.00 |
| | ಜಾತ ಉಳಿದ ಲಾಭಾಂಶ ರೂ.1,98,00,005/-ಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ | | |
| 05 | ಸದಸ್ಯರ ಕ್ಷೇಮ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.1.31 | 2,60,366.00 |
| 06 | ಮರಣ ಪರಿಹಾರ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.1 | 1,98,000.00 |
| 07 | ಸಿಬ್ಬಂದಿ ಕ್ಷೇಮ ನಿಧಿ (ಶೇ.5ಕ್ಕೆ ಮೀರದಂತೆ) | ಶೇ.1 | 1,98,000.00 |
| 08 | ಮಹೋತ್ಸವ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.1 | 1,98,000.00 |
| 09 | ಸದಸ್ಯರುಗಳಿಗೆ ಡಿವಿಡೆಂಡ್ (ಷೇರು ಬಂಡವಾಳಕ್ಕೆ ಶೇ.20 ರಂತೆ) | ಶೇ.20 | 1,69,63,667.00 |
| 10 | ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ (ಬೋನಸ್ ಕಾಯ್ದೆಯಂತೆ) | | 19,81,972.00 |
| | **ಒಟ್ಟು** | | **2,72,16,502.69** |

ನಿವ್ವಳ ಲಾಭದ ವಿಲೇವಾರಿ ಬಗ್ಗೆ ಚರ್ಚೆಯಾಗಿ, ಸದಸ್ಯರಾದ ಶ್ರೀ ಪಿ.ಕೆ.ಸುರೇಶ್, ಶ್ರೀ ಪಿ.ವೆಂಕಟೇಶ್ ಹಾಗೂ ಹಲವಾರು ಸದಸ್ಯರುಗಳು ಬ್ಯಾಂಕಿನ ಪ್ರಗತಿ ಹಾಗೂ ಲಾಭ ಗಳಿಕೆಯನ್ನು ಪ್ರಶಂಶಿಸಿ ಸದಸ್ಯರುಗಳಿಗೆ ಶೇ.20 ರ ಡಿವಿಡೆಂಡ್ ವಿತರಣೆಗೆ ಹರ್ಷವ್ಯಕ್ತಪಡಿಸಿದರು.

ನಂತರ ನಿವ್ವಳ ಲಾಭದ ವಿಲೇವಾರಿ ಸಮರ್ಪಕವಾಗಿದ್ದು, ಒಪ್ಪಬಹುದೆಂದು ಶ್ರೀ ಪಿ.ಕೆ.ಸುರೇಶ್ (ಸ.ಸಂ.R06938) ರವರು ಸೂಚಿಸಿದುದನ್ನು ಶ್ರೀ ಎನ್.ಮುರಳಿಧರ್ (ಸ.ಸಂ. R09332)ರವರು ಅನುಮೋದಿಸಿ ದುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು.

**10. 2023–24ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2024–25 ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿ ಮಂಜೂರಾತಿ ಪಡೆಯುವುದು.**

ಪ್ರಭಾರ ಕಾರ್ಯದರ್ಶಿಯವರು, ವರದಿ ಪುಸ್ತಕದ ಪುಟ 66ರಲ್ಲಿರುವಂತೆ, 2023–24ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2024–25ನೇ ಸಾಲಿನ ಆಯವ್ಯಯವನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಮಂಡಿಸಿದರು.

| | ವಿವರ | 2023-24ನೇ ಸಾಲಿಗೆ ಮಂಜೂರಾತಿ ಪಡೆದಿರುವುದು | 2023-24ನೇ ಸಾಲಿನಲ್ಲಿ ಖರ್ಚಾಗಿರುವುದು | 2023-24ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾಗಿ ರುವುದು | 2024-25ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ |
|---|---|---|---|---|---|
| 1 | ಸಿಬ್ಬಂದಿ ಖರ್ಚು, ಭವಿಷ್ಯ ನಿಧಿ ವಗೈರೆ ಪಾವತಿಗಳು | 4,50,00,000.00 | 3,56,47,123.64 | 0.00 | 4,50,00,000.00 |
| 2 | ಮುದ್ರಣ, ಲೇಖನ ಸಾಮಗ್ರಿ ಹಾಗೂ ಗಣಕಯಂತ್ರ | 4,00,000.00 | 3,73,879.32 | 0.00 | 4,00,000.00 |
| 3 | ಚಾರ್ಜಸ್ ಜನರಲ್/ಪೂಜಾ/ಓಡಾಟದ ವೆಚ್ಚ ವಗೈರೆ | 10,00,000.00 | 9,29,561.99 | 0.00 | 12,00,000.00 |
| 4 | ವಿಮೆ ಮತ್ತು ತೆರಿಗೆಗಳು | 30,00,000.00 | 23,26,732.30 | 0.00 | 30,00,000.00 |
| 5 | ಕಟ್ಟಡ ತೆರಿಗೆ | 1,50,000.00 | 1,06,634.00 | 0.00 | 1,50,000.00 |
| 6 | ಅಂಚೆ ಮತ್ತು ದೂರವಾಣಿ | 6,00,000.00 | 2,82,035.62 | 0.00 | 5,00,000.00 |
| 7 | ವಿದ್ಯುತ್‌ಚಕ್ತಿ ವೆಚ್ಚ | 6,50,000.00 | 6,40,552.00 | 0.00 | 8,00,000.00 |
| 8 | ಲೆಕ್ಕಪರಿಶೋಧನಾ ಶುಲ್ಕ | 10,00,000.00 | 7,35,000.00 | 0.00 | 10,00,000.00 |
| 9 | ಕಟ್ಟಡ ದುರಸ್ತಿ ಹಾಗೂ ನಿರ್ವಹಣೆ | 1,00,00,000.00 | 3,11,751.00 | 0.00 | 80,00,000.00 |
| 10 | ಕಾನೂನು ವೆಚ್ಚ | 10,00,000.00 | 2,92,000.00 | 0.00 | 10,00,000.00 |
| 11 | ಶಾಖೆಗಳ ಕಟ್ಟಡ ಬಾಡಿಗೆ | 16,00,000.00 | 15,20,393.00 | 0.00 | 25,00,000.00 |
| 12 | ಸರ್ವಸದಸ್ಯರ ಸಭೆ ಖರ್ಚು | 20,00,000.00 | 11,01,217.66 | 0.00 | 20,00,000.00 |
| 13 | ನಿರ್ದೇಶಕರ ಸಭಾ ಭತ್ಯೆ | 20,00,000.00 | 13,35,000.00 | 0.00 | 25,00,000.00 |
| 14 | ಚುನಾವಣಾ ವೆಚ್ಚ | 0.00 | 0.00 | 0.00 | 20,00,000.00 |
| | **ಒಟ್ಟು** | **6,84,00,000.00** | **4,56,01,880.53** | **0.00** | **7,00,50,000.00** |

2023–24ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2024–25 ನೇ ಸಾಲಿಗೆ ರೂ.7.01 ಕೋಟಿಗಳ ಆಯವ್ಯಯದ ಅಂದಾಜು ಪಟ್ಟಿಯನ್ನು ಒಪ್ಪಬಹುದೆಂದು ಶ್ರೀ ಬಿ.ವಿ.ವಿಜಯಕುಮಾರ್ (ಸ.ಸಂ.R13137) ರವರು ಸೂಚಿಸಿದುದನ್ನು ಶ್ರೀ ಕೆ.ಆರ್.ಆನಂದಬಾಬು (ಸ.ಸಂ.R12691)ರವರು ಅನುಮೋದಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಒಪ್ಪಿಗೆಯ ಮಂಜೂರಾತಿ ನೀಡಿತು.

**11. ಉಪನಿಯಮ ತಿದ್ದುಪಡಿ ಅನುಮೋದಿಸುವುದು.**

ಪ್ರಭಾರ ಕಾರ್ಯದರ್ಶಿಯವರು ಮಾತನಾಡಿ, ಇತ್ತೀಚಿಗೆ ಸಹಕಾರ ಕಾಯ್ದೆಯಲ್ಲಿ ಕೆಲ ತಿದ್ದುಪಡಿ ತರಲು ರಾಜ್ಯ ಸರ್ಕಾರ ಬಿಲ್ ಪಾಸ್ ಮಾಡಿದ್ದು, ಗೆಜೆಟ್ ಪ್ರಕಟಣೆಯಾಗದೆ ಕಾಯ್ದೆ ಮಾರ್ಪಾಟು ಜಾರಿಯಾಗಿರುವುದಿಲ್ಲ. ಪೂರ್ವಭಾವಿಯಾಗಿ ಇದರ ನಿರೀಕ್ಷೆಯಲ್ಲಿ ವಿಷಯವನ್ನು ಮಂಡಿಸಿದ್ದು ಮುಂದಿನ ದಿನಗಳಲ್ಲಿ ಅವಶ್ಯ ತಿದ್ದುಪಡಿಗಳಿದ್ದಲ್ಲಿ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆಯುವುದಾಗಿ ತಿಳಿಸಿದ್ದನ್ನು ಸಭೆಯಲ್ಲಿ ಒಪ್ಪಲಾಯಿತು.

**12. ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2019–20ನೇ ಸಾಲಿನ ಡಿವಿಡೆಂಡ್ ಮೊಬಲಗನ್ನು ಸರ್ವಸದಸ್ಯರ ಸಭೆ ಅನುಮತಿ ಪಡೆದು ಉಪನಿಯಮ ರೀತ್ಯ ಆಪದ್ಧನ ನಿಧಿ (Reserve Fund)ಗೆ ವರ್ಗಾಯಿಸುವ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಮಾತನಾಡಿ, ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2019–20ನೇ ಸಾಲಿನ ಡಿವಿಡೆಂಡ್ ಮೊಬಲಗು ಬಾಕಿಯಿರುವುದಿಲ್ಲವೆಂದು ತಿಳಿಸಿದರು.

**13. ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಆಖೈರುಗೊಳಿಸುವ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಪುಟ 25 ರಲ್ಲಿರುವಂತೆ ವಿಷಯ ಕುರಿತ ಆಡಳಿತ ಮಂಡಳಿ ಪ್ರಸ್ತಾವನೆಯನ್ನು ಸಭೆಯ ಒಪ್ಪಿಗೆಗೆ ಮಂಡಿಸಿ, ವಿಷಯ ಕುರಿತ ಸಂಕ್ಷಿಪ್ತ ವಿವರ ನೀಡಿದರು.

ಸದಸ್ಯರಾದ ಶ್ರೀ ಎಸ್.ಎಸ್.ಸುರೇಶ್ ಬಾಬುರವರು ಮಾತನಾಡಿ, ಸುಸ್ತಿ ಸಾಲಗಳ ಪೂರ್ಣ ಮಾಹಿತಿಯನ್ನು ಬ್ಯಾಂಕಿನ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಿ ಪಾರದರ್ಶಕ ಕ್ರಮ ಅನುಸರಿಸಿ ಕ್ರಮವಿಡುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಆರ್.ಮುನಿರಾಜುರವರು ಮಾತನಾಡಿ, ಯಾವುದೇ ಮನ್ನಾ ರಿಯಾಯಿತಿಗಳನ್ನು ನೀಡದೇ ಕಾನೂನು ರೀತ್ಯ ಕ್ರಮವಿಡುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ವಿಜಯಕುಮಾರ್‌ರವರು ಮಾತನಾಡಿ, ಆರ್ಥಿಕ ಸಂಕಷ್ಟದಲ್ಲಿರುವ ಸುಸ್ತಿದಾರರಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳಡಿ ಸಹಾಯ ನೀಡಿ ಬ್ಯಾಂಕಿನ ಸುಸ್ತಿಸಾಲಗಳನ್ನು ಕಡಿಮೆಗೊಳಿಸಿದಲ್ಲಿ ಆರ್ಥಿಕವಾಗಿ ಪ್ರಗತಿ ಸಾಧಿಸಬಹುದೆಂದು ಸಲಹೆ ನೀಡಿದರು. ಇದನ್ನು ಶ್ರೀ ಪಿ.ಕೆ.ಸುರೇಶ್ ರವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಉತ್ತರಿಸಿ, ಹಾಲಿ ಬ್ಯಾಂಕಿನಲ್ಲಿ ವ್ಯವಸ್ಥಾಪನಾ ಮಂಡಳಿ ರಚನೆಯಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳಂತೆ ಏಕಕಾಲಿಕ ಸಾಲ ತೀರುವಳಿ ರಿಯಾಯಿತಿ ಮುಂತಾದ ಪ್ರಕರಣಗಳನ್ನು ಈ ಮಂಡಳಿಯಲ್ಲಿ ಪರಿಶೀಲಿಸಿ ಕ್ರಮವಿಡಬೇಕಾಗಿದ್ದು, ಆ ರೀತಿಯಲ್ಲಿ ಕ್ರಮವಿಡುವುದಾಗಿ ಸಮಜಾಯಿಷಿ ನೀಡಿದರು.

ಶ್ರೀ ಬಿ.ವಿ.ವಿಜಯಕುಮಾರ್ (ಸ.ಸಂ.R13137) ರವರು ಅನುಮೋದಿಸಿದರು. ಇದನ್ನು ಸಭೆಯಲ್ಲಿ ಒಪ್ಪಲಾಯಿತು.

**14. ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಮೇರೆಗೆ M/s NNR & Co., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರನ್ನು 2024–25 ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಅನುಮೋದಿಸುವ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಪುಟ 28ರಲ್ಲಿರುವಂತೆ ವಿಷಯ ಕುರಿತ ಪ್ರಸ್ತಾವನೆಯನ್ನು ಸಭೆಯ ಒಪ್ಪಿಗೆಗೆ ಮಂಡಿಸಿ, ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಲೆಕ್ಕಪರಿಶೋಧನಾ ಇಲಾಖೆ ಅನುಮೋದಿತ ಪಟ್ಟಿಯಲ್ಲಿನ ಆಡಿಟ್ ಸಂಸ್ಥೆಗಳಾದ ಈ ಕೆಳಕಂಡ ಎರಡು ಸಂಸ್ಥೆಗಳನ್ನು ಆದ್ಯತೆ ಮೇರೆ ಇಲಾಖೆ ನಿಗದಿಪಡಿಸುವ ಶುಲ್ಕದ ಮೇರೆ ಆಡಳಿತ ಮಂಡಳಿಯು ಗೊತ್ತುಪಡಿಸಿದ್ದು, ಅನುಮೋದನೆಗೆ ಮಂಡಿಸಿದರು.

**M/s NNR & Co.,**
Chartered Accountants
(Reg. No.011162s), No.162,
2nd Floor, Rajeshwari Complex,
R.V.Road, Bangalore-560 004

**M/s Girisha Vijayan & Associates,**
Chartered Accountants
(Reg. No.014117s),
Next to Hotel Chalukya
Bangalore-560 001

ಈ ಪೈಕಿ ಮೊದಲ ಆದ್ಯತೆಯಾಗಿ M/s NNR & Co., ಸಂಸ್ಥೆ ಯವರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಡಿ 2024–25ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ (Appointment) ಮಾಡಲು ತೀರ್ಮಾನಿಸಿರುವ ಆಡಳಿತ ಮಂಡಳಿಯ ಈ ಪ್ರಸ್ತಾವನೆಗೆ ಸರ್ವಸದಸ್ಯರ ಸಭೆಯು ಸರ್ವಾನುಮತದ ಅನುಮೋದನೆ ನೀಡಿತು.

**15. ಇತರ ಬ್ಯಾಂಕುಗಳಿಂದ ಪಡೆಯಬಹುದಾದ 10 ಕೋಟಿ ರೂ.ಗಳ ಸಾಲದ ಪರಿಮಿತಿಯನ್ನು ಮಂಜೂರು ಮಾಡುವುದು:**

ಪ್ರಭಾರ ಕಾರ್ಯದರ್ಶಿಯವರು ವಿಷಯವನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಮಂಡಿಸಿದರು. ಇದನ್ನು ಸಭೆಯಲ್ಲಿ ಒಪ್ಪಿ, ರೂ. 10.00 ಕೋಟಿ ಸಾಲದ ಪರಿಮಿತಿಯನ್ನು ಮಂಜೂರು ಮಾಡಲು ಸರ್ವಸದಸ್ಯರ ಸಭೆಯು ಸರ್ವಾನುಮತದ ಅನುಮೋದನೆ ನೀಡಿತು.

**16. ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಬಹುದಾದ ಇತರೆ ವಿಷಯಗಳು:**

ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಡಿ ಚರ್ಚಿಸಲು ಸದಸ್ಯರುಗಳಾದ ಶ್ರೀ ಪಿ.ವೆಂಕಟೇಶ್, ಶ್ರೀ ಪಿ.ಕೆ.ಸುರೇಶ್, ಶ್ರೀ ಎಸ್.ಎಸ್.ಸುರೇಶ್‌ಬಾಬು, ಶ್ರೀ ಎನ್.ಮುರಳಿಧರ್, ಶ್ರೀ ಆರ್.ಮುನಿರಾಜು ರವರುಗಳು ಪತ್ರ ನೀಡಿರುವ ವಿವರವನ್ನು ಸಭೆಗೆ ವಿವರಿಸಿ, ಪ್ರತ್ಯುತ್ತರವನ್ನೂ ಸಹ ನೀಡಿರುವುದಾಗಿ ಪ್ರಭಾರ ಕಾರ್ಯದರ್ಶಿಯವರು ಸಭೆಗೆ ನೀಡಿದರು.

ಇತರೆ ವಿಷಯಗಳಡಿ ಶ್ರೀ ಎಸ್.ಎಸ್.ಸುರೇಶ್‌ಬಾಬುರವರು ಮಾತಾಡಲು ಮುಂದಾದಾಗ, ಸಭಾಧ್ಯಕ್ಷರ ಅನುಮತಿ ಪಡೆದು ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಉತ್ತರಿಸಿ, ತಾವು ಪದೇ ಪದೇ ಬ್ಯಾಂಕಿಗೆ ಹಾಗೂ ಬ್ಯಾಂಕಿನ ವಿರುದ್ಧ ಇಲಾಖೆಗಳಿಗೆ ನೀಡುವ ಪತ್ರಗಳಲ್ಲಿ ಬ್ಯಾಂಕಿನ ಆಡಳಿತ ಮಂಡಳಿ, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಗೌರವಕ್ಕೆ ಹಾಗೂ ಬ್ಯಾಂಕಿನ ಹಿತಾಸಕ್ತಿಗೆ ಧಕ್ಕೆ ತರುವಂತಹ ಪದ ಬಳಕೆ ಮಾಡುತ್ತಿದ್ದು ಹಾಗೂ ಬ್ಯಾಂಕಿನ ನಿರ್ದೇಶಕರುಗಳ ವಿರುದ್ಧ ಕ್ರಿಮಿನಲ್ ನಡವಳಿಕೆಯನ್ನು ಸಹ ಮುಂದುವರಿಸಿರುತ್ತೀರಿ. ಇವುಗಳ ಸಂಬಂಧವೇ ಈಗಲೂ ತಾವು ಪ್ರಸ್ತಾಪಿಸಬಹುದಾದ್ದರಿಂದ ಕ್ರಿಮಿನಲ್ ಮೊಕದಮ್ಮೆ ಹಿಂಪಡೆಯುವವರೆವಿಗೂ ತಮಗೆ ಸರ್ವಸದಸ್ಯರ ಸಭೆಯಲ್ಲಿ ಚರ್ಚೆಗೆ ಅವಕಾಶ ನೀಡುವುದಿಲ್ಲವೆಂದು ತಿಳಿಸಿ ಇದನ್ನು ದಾಖಲಿಸುವುದಾಗಿ ತಿಳಿಸಿದರು.

ಸಭಾಧ್ಯಕ್ಷರು ಮಾತನಾಡಿ, ತಾವು ಇತರೆ ವಿಷಯಗಳಡಿ ಚರ್ಚಿಸಬಹುದಾದ ವಿಷಯವು ಕ್ರಮಬದ್ಧವಾಗಿರದೇ ಬ್ಯಾಂಕಿನ ಆಡಳಿತ ವ್ಯವಸ್ಥೆಗೆ ಅವಮಾನಕರವಾದ ಪದ ಬಳಕೆ ಮಾಡಿರುವುದರಿಂದ ತಮಗೆ ಚರ್ಚಿಸಲು ಅವಕಾಶ ನೀಡುವುದಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಕೆ.ಸಿ.ಮೂರ್ತಿರವರು ಮಾತನಾಡಿ, ಬ್ಯಾಂಕಿನ ವ್ಯವಹಾರದಲ್ಲಿ ಹೆಚ್ಚಿನ ಕನ್ನಡ ಬಳಕೆ ಮಾಡುತ್ತಿರುವುದಕ್ಕೆ ಅಭಿನಂಧಿಸಿ, ಮುಂದಿನ ದಿನಗಳಲ್ಲಿ ಪ್ರತಿ ವರ್ಷ ಸದಸ್ಯರುಗಳನ್ನು ಆಹ್ವಾನಿಸಿ ಕನ್ನಡ ರಾಜ್ಯೋತ್ಸವ ಆಚರಿಸಲು ಸಲಹೆ ನೀಡಿದರು. ಮುಂದುವರಿದು, ಬ್ಯಾಂಕಿನ ಸಂಸ್ಥಾಪಕರಾದ ಶ್ರೀ ಮಂಡಿ ಹರಿಯಣ್ಣನವರು, ಶ್ರೀ ಎನ್.ವೆಂಕಟೇಶಯ್ಯನವರು ಹಾಗೂ ಹೆಚ್ಚಿನ ಸೇವೆ ಸಲ್ಲಿಸಿದವರ ಪುತ್ತಳಿಯನ್ನು ಬ್ಯಾಂಕಿನ ಆವರಣದಲ್ಲಿ ಸ್ಥಾಪಿಸಲು ಸಲಹೆ ನೀಡಿದರು.

ಶ್ರೀ ಪಿ.ವೆಂಕಟೇಶ್‌ರವರು ಮಾತನಾಡಿ, ಬ್ಯಾಂಕಿನ ಮಹಾಸಭೆಗೆ ಹಾಜರಾದ ಸದಸ್ಯರುಗಳಿಗೆ ಓಡಾಟದ ವೆಚ್ಚ ರೂ.500/– ಗಳನ್ನು ಪಾವತಿಸುತ್ತಿದ್ದು, ಇದಕ್ಕೆ ಬದಲಾಗಿ ಮಹಾಸಭೆಗೆ ಹಾಜರಾದ ಸದಸ್ಯರುಗಳಿಗೆ ಸಹಕಾರ ಯಶಸ್ವಿನಿ ಆರೋಗ್ಯ ವಿಮೆ ಕಂತನ್ನು ಪಾವತಿಸಿ ಆರೋಗ್ಯ ವಿಮೆ ಸೌಲಭ್ಯ ಒದಗಿಸಲು ಸಲಹೆ ನೀಡಿದರು.

ಶ್ರೀ ಎನ್.ಮುರಳಿಧರ್‌ರವರು ಮಾತನಾಡಿ, ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಸರ್ಕಾರ ಮಂಜೂರು ಮಾಡುವ ತುಟ್ಟಿ ಭತ್ಯೆ ವೇತನ ಶ್ರೇಣಿ ಜಾರಿಗೆ ಹಾಗೂ ಸಿಬ್ಬಂದಿ ಹಾಗೂ ಸದಸ್ಯರುಗಳಿಗೆ ವೈದ್ಯಕೀಯ ಶಿಭಿರ ನಡೆಸುವಂತೆ ಸಲಹೆ ನೀಡಿದರು. ಬಿಡಿಸಿಸಿ ಬ್ಯಾಂಕಿನವರಿಂದ ಹೆಚ್ಚಿನ ಮೊಬಲಗನ್ನು ಕಟ್ಟಡ ನಿರ್ವಹಣೆ ವೆಚ್ಚವೆಂದು ಪಡೆದು, ಪ್ರಧಾನ ಕಛೇರಿಯ ನವೀಕರಣಕ್ಕೆ ಬಳಸಿಕೊಳ್ಳಲು ಸಲಹೆ ನೀಡಿದರು.

ನಂತರ ಸಭಾಧ್ಯಕ್ಷರು ಮಾತನಾಡಿ, ಸರ್ವಸದಸ್ಯರ ಸಭೆಯಲ್ಲಿನ ಸಲಹೆ ಸೂಚನೆಗಳ ಬಗ್ಗೆ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಚರ್ಚಿಸಿ ಅಗತ್ಯ ಕ್ರಮವಿಡುವುದಾಗಿ ತಿಳಿಸಿ, ಸಭೆಯಲ್ಲಿ ಸಲಹೆ ಸೂಚನೆ ನೀಡಿದ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಿದರು. ನಂತರ ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಡಿಯ ಚರ್ಚೆ ಮುಕ್ತಾಯವಾಯಿತು.

**17. ವಂದನಾರ್ಪಣೆ :**

ನಿರ್ದೇಶಕರಾದ ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿರವರು, ಇಂದಿನ ವಾರ್ಷಿಕ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ. ಸತ್ಯನಾರಾಯಣರವರಿಗೆ, ಸಭೆಗೆ ಹಾಜರಾದ ನಿರ್ದೇಶಕರುಗಳಿಗೆ, ಸಭೆಯಲ್ಲಿ ಭಾಗವಹಿಸಿ ಸಲಹೆ ಸಹಕಾರ ನೀಡಿದ ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ, ಸಭೆಗೆ ಸ್ಥಳಾವಕಾಶ ನೀಡಿದ ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಆಡಳಿತ ವರ್ಗದವರಿಗೆ, ಶಾಮಿಯಾನ, ಮೈಕ್ ಸಿಸ್ಟಂ, ಊಟೋಪಚಾರ ವ್ಯವಸ್ಥೆ ಮಾಡಿಕೊಟ್ಟ ಸಂಸ್ಥೆಯವರಿಗೆ, ಸಂಚಾರ/ಕಾನೂನು ಸುವ್ಯವಸ್ಥೆ ಮಾಡಿದ ಪೋಲೀಸ್ ಇಲಾಖೆ ಸಿಬ್ಬಂದಿಗಳಿಗೆ ಮತ್ತು ಪ್ರತ್ಯಕ್ಷ ಪರೋಕ್ಷ ಸಹಕಾರ ನೀಡಿದವರೆಲ್ಲರಿಗೂ ವಂದನೆಗಳನ್ನರ್ಪಿಸಿದರು.

ನಂತರ ಸಭಾಧ್ಯಕ್ಷರು ಸರ್ವಸದಸ್ಯರ ಸಭೆಯು ಅಧಿಕೃತವಾಗಿ ಮುಕ್ತಾಯವಾಗಿರುವುದಾಗಿ ಘೋಷಿಸಿದರು. ನಂತರ, ರಾಷ್ಟ್ರಗೀತೆಯೊಂದಿಗೆ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಂಡಿತು.

| | | |
|---|---|---|
| ದಿನಾಂಕಃ 22.09.2024 | ಸಹಿಃ– | ಸಹಿಃ– |
| ಬೆಂಗಳೂರು | **(ಉಮಾ ಆರ್.)** | **(ಆರ್.ಪಿ.ಎಂ.ಸತ್ಯನಾರಾಯಣ)** |
| | ಪ್ರಭಾರ ಕಾರ್ಯದರ್ಶಿ | ಅಧ್ಯಕ್ಷರು |

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಪ್ರಧಾನ ಕಛೇರಿಃ ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18**

## 2024–25ನೇ ಸಾಲಿನ ಆಡಳಿತ ವರದಿ

**ಆತ್ಮೀಯ ಸದಸ್ಯರೇ,**

ಶ್ರೀಮಾನ್ ಮಂಡಿ ಹರಿಯಣ್ಣನವರ ಮಾರ್ಗದರ್ಶನ, ಮುಂದಾಳತ್ವದಲ್ಲಿ 1927 ರಲ್ಲಿ ಪ್ರಾರಂಭವಾದ ಈ ನಮ್ಮ ಸಹಕಾರ ಬ್ಯಾಂಕ್ ಹಾಲಿ 95 ವರ್ಷಗಳನ್ನು ಪೂರೈಸಿ ಶತಮಾನದತ್ತ ಮುನ್ನಡೆಯುತ್ತಿರುವುದು ಸಂತಸದ ವಿಷಯವಾಗಿರುತ್ತದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಸ್ಥಾಪನೆಗೆ ಕಾರಣಕರ್ತರಾದ ಹಿರಿಯರನ್ನು ಸ್ಮರಿಸುತ್ತೇವೆ. ಅಲ್ಲದೇ, ಬ್ಯಾಂಕಿನ 2024–25ನೇ ಸಾಲಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ದಿನಾಂಕ 31.03.2025ಕ್ಕೆ ಇದ್ದಂತೆ ಆಡಳಿತ ಮಂಡಳಿ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇವೆ.

ಸಂತಾಪಃ ಕಳೆದ ಮಹಾಸಭೆಯ ನಂತರ ಈ ಕೆಳಕಂಡ ಸದಸ್ಯರುಗಳು ಮೃತರಾಗಿದ್ದು, ಮೃತರ ಗೌರವಾರ್ಥ 2 ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿ ಅರ್ಪಿಸಬೇಕಾಗಿ ಕೋರುತ್ತೇವೆ.

| ಹೆಸರು | ಸದಸ್ಯತ್ವ ಸಂಖ್ಯೆ | ಹೆಸರು | ಸದಸ್ಯತ್ವ ಸಂಖ್ಯೆ | ಹೆಸರು | ಸದಸ್ಯತ್ವ ಸಂಖ್ಯೆ |
|---|---|---|---|---|---|
| 01 ಮಮತಾಜ್ | R17290 | 18 ನಂಜುಂಡ ಇಂದ್ರಾಣಿ | R17062 | 35 ಆರ್.ನಾರಾಯಣ | R09517 |
| 02 ಎ.ಅಮೋಘ | R07894 | 19 ರಾಮಕೃಷ್ಣ | R12639 | 36 ಎಂ.ರಾಘವೇಂದ್ರ | R05878 |
| 03 ಪುಷ್ಪ ಶಿವಪ್ರಸಾದ್ | R05555 | 20 ಡಿ.ಎಂ.ನಟರಾಜ್ | R05107 | 37 ಬಿ.ಕೆ.ರಾಜಣ್ಣ | R10326 |
| 04 ಬಿ.ಆರ್.ಶಂಕರಮ್ಮ | R06845 | 21 ಸಿ.ರಾಜಶೇಖರಯ್ಯ | R05829 | 38 ವಿ.ಮುರಳಿಧರ್ | R17489 |
| 05 ಎನ್.ರಾಮಕೃಷ್ಣ | R10038 | 22 ಟಿ.ಶ್ರೀನಿವಾಸನ್ | R06442 | 39 ಎ.ಆರ್.ನಿರ್ಮಲಕುಮಾರ್ | R05224 |
| 06 ಕೆ.ಎನ್.ಬಾಲರಾಜ್ | R03234 | 23 ಪಿ.ಎಸ್.ಸುಮತಿ | R07141 | 40 ಆರ್.ಗಾಯತ್ರಿದೇವಿ | R11928 |
| 07 ರುದ್ರಗೌಡ ಪಾಟೀಲ್ | R15363 | 24 ಕೆ.ರಾಮಕೃಷ್ಣಬಾಬು | R06149 | 41 ಕೆ.ಎಂ.ಗುರುಮಲ್ಲಯ್ಯ | R08434 |
| 08 ಬಸವರಾಜ್ ಎನ್.ಕೆ | R14648 | 25 ಎಸ್.ವಿ.ಹೇಮಣ್ಣ | R03827 | 42 ಕೆ.ಎಸ್.ನಂಜುಂಡಸ್ವಾಮಿ | R09553 |
| 09 ಬಿ.ಎಸ್.ಕೃಷ್ಣಶೆಟ್ಟಿ | R08806 | 26 ನಾರಾಯಣ ಬಿ.ಎ | R16801 | 43 ಎನ್.ಆದಿಶೇಷಯ್ಯಶೆಟ್ಟಿ | R02914 |
| 10 ಪುಷ್ಪ ರಾಧಾಕೃಷ್ಣ | R05432 | 27 ಬಿ.ಎನ್.ನಾಗಭೂಷಣ | R09540 | 44 ಬಿ.ರಿಯಾಜ್ | R10043 |
| 11 ಎನ್.ನಾರಾಯಣ | R09455 | 28 ಕೆ.ಪಿ.ಕಟ್ಟಿಬಸಮ್ಮ | R04158 | 45 ಆರ್.ಶಾಮಲಾಬಾಯಿ | R07013 |
| 12 ಗೋವಿಂದರಾಜ್ ಎಸ್ | R17176 | 29 ಬಿ.ಆರ್.ಮೋಹನ್ | R04704 | 46 ಕೆ.ಎಸ್.ವೆಂಕಟೇಶ್‌ಬಾಬು | R17939 |
| 13 ಮನೋಹರ್ ಸಿ | R18048 | 30 ಮನೋಹರ್ ಸಿ | R18048 | 47 ಮಹೇಶ್ ವಿ.ತಿವಾರಿ | R04637 |
| 14 ಪ್ರವೀಣ್ ಪಿ.ದೇಶಪಾಂಡೆ | R14410 | 31 ಆರ್.ಶೈಲಜಾ | R15743 | 48 ಎನ್.ಎ.ಪ್ರಭಾಕರ | R05427 |
| 15 ಎಸ್.ಬಾಲಕೃಷ್ಣ | R03286 | 32 ಹನುಮಂತರಾವ್ | R03826 | 49 ವಿ.ರಂಗನಾಥ್ | R05892 |
| 16 ಯಶೋದ ಸುಬ್ರಮಣ್ಯ | R11702 | 33 ಬಿ.ಚಿನ್ನಸ್ವಾಮಿ ಶೆಟ್ಟಿ | R03408 | 50 ಜೆ.ಎನ್.ಶಾಂಭಮೂರ್ತಿ | R06512 |
| 17 ಐ.ಎಸ್.ಪುರಶೋತ್ತಂ | R05600 | 34 ಕೆ.ವಿ.ನಾಗಭೂಷಣ | R04976 | | |

**ಸದಸ್ಯತ್ವ ಮತ್ತು ಷೇರು ಬಂಡವಾಳ:**

**2024–25ನೇ ಸಾಲಿನ ಸದಸ್ಯತ್ವ ಸೇರ್ಪಡೆ ಹಾಗೂ ಹಿಂಪಡೆದ ಸದಸ್ಯರ ಕುರಿತ ಟಿಪ್ಪಣಿಃ**

ಸಾಲಿನ ಪ್ರಾರಂಭದಲ್ಲಿ 12109 ಸದಸ್ಯರಿಂದ ರೂ.848.18 ಲಕ್ಷಗಳಷ್ಟು ಷೇರು ಬಂಡವಾಳವಿದ್ದು, ವರದಿ ಸಾಲಿನಲ್ಲಿ 119 ಸದಸ್ಯರ ಸೇರ್ಪಡೆಯಿಂದ ರೂ.39.84 ಲಕ್ಷ ಜಮೆಯಾಗಿ, 113 ಸದಸ್ಯರ ಷೇರು ವಾಪಸಾತಿ ಬಗ್ಗೆ ರೂ.46.75 ಲಕ್ಷ ಹಿಂದಿರುಗಿಸಲಾಗಿದೆ. ದಿನಾಂಕ 31.03.2025ರ ಅಂತ್ಯಕ್ಕೆ 12115 ಸದಸ್ಯರಿಂದ ರೂ.841.27 ಲಕ್ಷಗಳ ಷೇರು ಬಂಡವಾಳವಿದ್ದು, ನಿವ್ವಳ ರೂ.6.91 ಲಕ್ಷಗಳ ಷೇರು ಬಂಡವಾಳವು ಕಡಿಮೆಯಾಗಿರುತ್ತದೆ. ವರದಿ ಸಾಲಿನಲ್ಲಿ ನಾಮಮಾತ್ರ ಸದಸ್ಯರು ಸೇರ್ಪಡೆಯಾಗಿರುವುದಿಲ್ಲ. ಸದಸ್ಯತ್ವ ಸೇರ್ಪಡೆ ಹಾಗೂ ವಾಪಸಾತಿಯ ಅಂಕಿ ಅಂಶಗಳನ್ನು ಲೆಕ್ಕಪರಿಶೋಧಕರ ವರದಿಯಲ್ಲಿ ದೃಢೀಕರಿಸಿದ್ದು, ಮೂರು ವರ್ಷಗಳ ಹೋಲಿಕೆಯ ಅಂಕಿ ಅಂಶಗಳನ್ನು ಅನುಮೋದನೆಗೆ ಮಂಡಿಸಿದೆ.

|  | 31.03.2023 | 31.03.2024 | 31.03.2024 |
|---|---|---|---|
| ಸದಸ್ಯರು | 11119 | 11790 | 11790 |
| ನಾಮಮಾತ್ರ ಸದಸ್ಯರು | 38 | 38 | 38 |
| ಸಹ ಸದಸ್ಯರು | 281 | 281 | 281 |
| ಒಟ್ಟು ಸದಸ್ಯರು | 11438 | 12109 | 12109 |
| ಷೇರು ಬಂಡವಾಳ (ರೂ.ಲಕ್ಷಗಳಲ್ಲಿ) | 828.15 | 848.18 | 848.18 |

ಉಪನಿಯಮ ರೀತ್ಯ ಸದಸ್ಯತ್ವದ ಪ್ರತಿ ಷೇರಿನ ಮುಖಬೆಲೆಯು ರೂ.100/– ಗಳಂತೆ ಕನಿಷ್ಠ 10 ಷೇರುಗಳನ್ನು ಸದಸ್ಯರು ಹೊಂದಬೇಕಾಗಿರುತ್ತದೆ. ಬಹಳಷ್ಟು ಸದಸ್ಯತ್ವದಲ್ಲಿ ಷೇರು ಮೊಬಲಗು ರೂ.100/– ರ ಗುಣಕದಲ್ಲಿ ಹಾಗೂ 10 ಷೇರುಗಳು ಇಲ್ಲದಿರುವುದರಿಂದ ಕ್ರಮಬದ್ಧಗೊಳಿಸಲು ಹಲವಾರು ಸರ್ವಸದಸ್ಯರಸಭೆಗಳಿಂದಲೂ ತಿಳುವಳಿಕೆ ನೀಡುತ್ತಾ ಬರಲಾಗಿದೆ. ಅಲ್ಲದೇ, ಹಲವಾರು ವರ್ಷಗಳಿಂದ ಸದಸ್ಯತ್ವಕ್ಕೆ ಕೆ.ವೈ.ಸಿ ದಾಖಲಾತಿಗಳು ಕಡ್ಡಾಯವಾಗಿರುವ ಮಾಹಿತಿಯನ್ನು ಸದಸ್ಯರ ಗಮನಕ್ಕೆ ತರಲಾಗುತ್ತಿದ್ದರೂ ಇನ್ನೂ ಕೆಲವರ ದಾಖಲಾತಿಗಳು ಈವರೆವಿಗೂ ಸಲ್ಲಿಕೆಯಾಗಿರುವುದಿಲ್ಲ. ಅದರಂತೆ ಸದಸ್ಯರು ತಮ್ಮ ದಾಖಲಾತಿ ಪುರಾವೆಗಳನ್ನು ಸಲ್ಲಿಸಿ ಸದಸ್ಯತ್ವ ಖಾತೆಯನ್ನು ಕ್ರಮಬದ್ದಗೊಳಿಸಿಕೊಳ್ಳಲು ಹಾಗೂ ಈಗಾಗಲೇ ಸಲ್ಲಿಸಿದ್ದಲ್ಲಿ ಖಾತರಿಪಡಿಸಿಕೊಳ್ಳಲು ಕೋರಿದೆ. ಇಲ್ಲವಾದಲ್ಲಿ ಕೈ.ವೈ.ಸಿ ರಹಿತ ಸದಸ್ಯರುಗಳು ಮತದಾನದ ಹಕ್ಕಿಂದ ವಂಚಿತರಾಗಲಿದ್ದು, ಅಲ್ಲದೇ ಇಂತಹ ಖಾತೆಗಳನ್ನು ಅಮಾನತ್ ಖಾತೆಗೆ ವರ್ಗಾಯಿಸಲು ಆಡಳಿತ ಮಂಡಳಿಯು ತೀರ್ಮಾನಿಸಿದ್ದು, ಈ ನಿಟ್ಟಿನಲ್ಲಿ ಆಗುವ ತೊಡಕುಗಳ ನಿವಾರಣೆಗೆ ಸರ್ವಸದಸ್ಯರ ಸಹಕಾರ ಕೋರಿದೆ.

**ಆಪದ್ಧನ ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆ:**

ವರದಿ ಸಾಲಿನ ಆಪದ್ಧನ ಮತ್ತು ಇತರ ನಿಧಿಗಳ ತುಲನಾತ್ಮಕ ಅಂಕಿ ಅಂಶಗಳು ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2022-23 | 2023-24 | 2024-25 |
|---|---|---|---|---|
| 1. | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 2,405.79 | 2,430.39 | 2,457.39 |
| 2. | ಕಟ್ಟಡ ನಿಧಿ | 363.29 | 387.82 | 387.82 |
| 3. | ಷೇರು ನಷೆ ಸಮತೋಲನಾ ನಿಧಿ | 100.02 | 100.02 | 100.02 |
| 4. | ಗುಂತಾಯಗಳ ಸವಕಳಿ ನಿಧಿ | 132.09 | 162.19 | 162.18 |
| 5. | ಗುಂತಾಯಗಳ ಏರಿಳಿತ ನಿಧಿ | 376.22 | 376.22 | 376.22 |
| 6. | ಗೃಹ ಸಾಲಗಳ ವಿಶೇಷ ನಿಧಿ | 29.50 | 29.50 | 29.50 |
| 7. | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 34.00 | 34.00 | 34.00 |
| 8. | ಆಪದ್ಧನ ನಿಧಿ | 2,520.87 | 2,640.52 | 2,691.87 |
| 9. | ಇತರೆ ನಿಧಿಗಳು (ದಾನ ನಿಧಿ, ಪ್ರಚಾರ ನಿಧಿ, ಸದಸ್ಯರ ಕ್ಷೇಮ ನಿಧಿ, ಮರಣ ಪರಿಹಾರ ನಿಧಿ ಹಾಗೂ ಇತರೆ) | 693.08 | 720.58 | 698.11 |
|  | **ಒಟ್ಟು** | **6,654.86** | **6,881.24** | **6,937.11** |

**ವರದಿ ಸಾಲಿನಲ್ಲಿ ಈ ಕೆಳಕಂಡಂತೆ ನಿಧಿಗಳನ್ನು ಬಳಸಲಾಗಿದೆ.**

**ಸದಸ್ಯರ ಕ್ಷೇಮ ನಿಧಿಃ** ಕಳೆದ ಮಹಾಸಭೆಯ ತೀರ್ಮಾನದಂತೆ ವರದಿ ಸಾಲಿನಲ್ಲಿ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು 216 ಪ್ರತಿಭಾನ್ವಿತರಿಗೆ ರೂ.6.53 ಲಕ್ಷಗಳ ಮೊಬಲಗನ್ನು ಪ್ರತಿಭಾ ಪುರಸ್ಕಾರವಾಗಿ ನೀಡಿ ಗೌರವಿಸಿದೆ. ಇದಲ್ಲದೇ ಇದರೊಂದಿಗೆ ಕೆಲ ಸದಸ್ಯರ ವೈದ್ಯಕೀಯ, ಶೈಕ್ಷಣಿಕ ಖರ್ಚುಗಳಿಗೆ ಸಹಾಯ ನೀಡಿ ಒಟ್ಟು ಈ ನಿಧಿಯಿಂದ ರೂ.19.92 ಲಕ್ಷ ಮೊತ್ತದ ನಿಧಿ ಬಳಕೆಯಾಗಿದೆ.

**ಮರಣೋತ್ತರ ಪರಿಹಾರ ನಿಧಿಃ** ವರದಿ ಸಾಲಿನಲ್ಲಿ ಮೃತ ಸದಸ್ಯರ ಮರಣೋತ್ತರ ಕಾರ್ಯಗಳಿಗೆ ಕುಟುಂಬದವರ ಮನವಿ ಮೇರೆಗೆ ರೂ.3.60 ಲಕ್ಷಗಳ ಮೊಬಲಗನ್ನು ಪಾವತಿಸಲಾಗಿದೆ. ಮೃತ ಸದಸ್ಯರ ಮಾಹಿತಿಯನ್ನು 6 ತಿಂಗಳ ಒಳಗಾಗಿ ಮೃತ ಸದಸ್ಯರ ವಾರಸುದಾರರು (Nominee) ಬ್ಯಾಂಕಿಗೆ ತಿಳಿಸಲು ಕೋರಲಾಗಿದೆ.

**ದಾನ ಧರ್ಮದ ನಿಧಿಃ** ವರದಿ ಸಾಲಿನಲ್ಲಿ ಸಂಘ ಸಂಸ್ಥೆಗಳ ಧಾರ್ಮಿಕ ಕಾರ್ಯಕ್ರಮಗಳಿಗೆ ಹಾಗೂ ಸಮಾಜದ ಕಡುಬಡವರ ವೈದ್ಯಕೀಯ ಇನ್ನಿತರ ವೆಚ್ಚಗಳಿಗಾಗಿ ರೂ.0.90 ಲಕ್ಷಗಳ ದೇಣಿಗೆ ನೀಡಿ ಸಹಾಯ ಮಾಡಲಾಗಿದೆ.

ವರದಿ ಸಾಲಿನಲ್ಲಿ ಮಾಡಿರುವ ನಿಧಿಗಳ ಒಟ್ಟು ಬಳಕೆಯನ್ನು ಸರ್ವಸದಸ್ಯರ ಸಭೆಯ ವಿಷಯ–08ರಲ್ಲಿ ಅನುಮೋದನೆಗೆ ಮಂಡಿಸಿದೆ.

ಠೇವಣಿಗಳುಃ ದಿನಾಂಕ 31.03.2025ರಲ್ಲಿದ್ದಂತೆ ಠೇವಣಿಗಳ ವಿವರಗಳನ್ನು ಈ ರೀತಿ ಕಾಣಬಹುದಾಗಿದೆ. (ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2022–23 | 2023–24 | 2024–25 |
|---|---|---|---|---|
| 1. | ನಿಶ್ಚಿತ ಠೇವಣಿ | 4,409.43 | 4,720.20 | 4,448.67 |
| 2. | ನಗದು ಸರ್ಟಿಫಿಕೇಟ್ | 4,789.17 | 4,516.01 | 4,125.87 |
| 3. | ಉಳಿತಾಯ ಖಾತೆ | 2,427.87 | 2,419.49 | 2,702.48 |
| 4. | ಪಿಗ್ಮಿ ಠೇವಣಿ | 1,180.58 | 1,284.62 | 1,305.96 |
| 5. | ಚಾಲ್ತಿ ಖಾತೆ | 884.30 | 909.48 | 971.27 |
| 6 | ಸಂಚಿತ ಠೇವಣಿ | 98.75 | 94.69 | 96.72 |
| 7. | ಇತರೇ ಠೇವಣಿ | 602.24 | 474.21 | 410.75 |
| | **ಒಟ್ಟು** | **14,392.34** | **14,418.70** | **14,061.72** |

ಬ್ಯಾಂಕಿನ ಪ್ರತಿ ಠೇವಣಿದಾರರ ರೂ.5.00 ಲಕ್ಷ ಮೊತ್ತದ ವರೆಗಿನ ಠೇವಣಿಗಳು "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್ ಆಫ್ ಇಂಡಿಯಾ, ಮುಂಬಯಿ" (DICGC, Mumbai) ರವರಿಂದ ವಿಮೆಗೊಳಪಟ್ಟಿದ್ದು, 2024–25ರ ಸಾಲಿನಲ್ಲಿ ರೂ.17.26 ಲಕ್ಷಗಳ ಪ್ರೀಮಿಯಂ ಪಾವತಿಸಿದೆ. ಠೇವಣಿ ವಿಮಾ ಯೋಜನೆಯಿಂದಾಗಿ ದೇಶದ ಯಾವುದೇ ಬ್ಯಾಂಕ್ ನಷ್ಟದಿಂದಾಗಿ ಸಮಾಪನಾಗೊಂಡಲ್ಲಿ ಅಂತಹ ಬ್ಯಾಂಕಿನ ಪ್ರತಿ ಗ್ರಾಹಕನ ರೂ.5.00 ಲಕ್ಷಗಳವರೆಗಿನ ಠೇವಣಿಯು ವಿಮೆಗೊಳಪಟ್ಟಿರುತ್ತದೆ. ಇದರಿಂದಾಗಿ ಗ್ರಾಹಕರು ಹೆಚ್ಚಿನ ವಿಶ್ವಾಸದಿಂದ ಬ್ಯಾಂಕಿನೊಂದಿಗೆ ವ್ಯವಹರಿಸಬಹುದಾಗಿದೆ. ಅಲ್ಲದೇ ಠೇವಣಿದಾರರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಅವಧಿ ಮುಗಿದ ನಿಶ್ಚಿತ ಠೇವಣಿಗಳನ್ನು ಸ್ವಯಂ ನವೀಕರಣ (Auto Renewal) ವ್ಯವಸ್ಥೆ ಜಾರಿಗೊಳಿಸಲಾಗಿದೆ.

**ಠೇವಣಿದಾರರ ಶಿಕ್ಷಣ ಮತ್ತು ಜಾಗೃತ ನಿಧಿ (Deposit Education & Awareness Fund)** ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ 10 ವರ್ಷಕ್ಕೂ ಮೇಲ್ಪಟ್ಟು ಚಾಲ್ತಿಯಲ್ಲಿಲ್ಲದ ಠೇವಣಿಗಳು, ಉಳಿತಾಯ/ಚಾಲ್ತಿ ಖಾತೆ, ಬ್ಯಾಂಕ್ ಗ್ಯಾರಂಟಿಗಳ ಮೊಬಲಗನ್ನು DEAಈ ಖಾತೆಗೆ ವರ್ಗಾಯಿಸುವುದು ಕಡ್ಡಾಯವಾಗಿದ್ದು, ಸಂಬಂಧಿಸಿದವರು ಕೆ.ವೈ.ಸಿ ಹಾಜರುಪಡಿಸಿ, ವಾಪಸ್ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಸದಸ್ಯರು/ಗ್ರಾಹಕರು ತಮ್ಮ ಎಲ್ಲಾ ಖಾತೆಗಳಿಗೆ ಕೆ.ವೈ.ಸಿ ದಾಖಲೆಗಳೊಂದಿಗೆ ಅಡೆತಡೆಯಿಲ್ಲದಂತೆ ಚಾಲ್ತಿಯಲ್ಲಿಟ್ಟುಕೊಳ್ಳಲು ಕೋರುತ್ತೇವೆ.

**ವಾರ್ಷಿಕ ವ್ಯವಹಾರಿಕ ಗುರಿ ಸಾಧನೆ (Annual Business Plan)**

2025–26ನೇ ಸಾಲಿನಲ್ಲಿ ಬ್ಯಾಂಕಿನ ಠೇವಣಿ ಸಂಗ್ರಹಣೆಗೆ ಆದ್ಯತೆ ನೀಡಿ, ಶಾಖಾ ವಿಸ್ತರಣೆ ಹಾಗೂ ನೂತನ ಶಾಖೆಗಳ ಪ್ರಾರಂಭಕ್ಕೆ ಪ್ರಯತ್ನಿಸಲಾಗುವುದು. ಹೆಚ್ಚಿನ ಸಾಲ ಮತ್ತು ಮುಂಗಡಗಳನ್ನು ನೀಡಲು, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಉದ್ಯಮ, ಗೃಹ ಖರೀದಿ ನಿರ್ಮಾಣ, ಮಹಿಳೆಯರು ಹಾಗೂ ಆರ್ಥಿಕ ದುರ್ಬಲ ವರ್ಗ ಮುಂತಾದ ಆದ್ಯತಾ ವಲಯಕ್ಕೆ ಸಾಲ ನೀಡುವಿಕೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ಪಾಲನೆಯಡಿ ಉತ್ತೇಜಿಸುವ ಗುರಿ ಹೊಂದಿದೆ. ಅಲ್ಲದೇ ಹಳೆಯ ಸುಸ್ತಿ ಬಾಕಿಗಳ ವಸೂಲಾತಿಗೆ ಹೆಚ್ಚಿನ ಗಮನ ಹರಿಸಿ ಆದಾಯ ಗಳಿಕೆಗೂ ಸಹ ಪ್ರಯತ್ನಿಸುವ ಗುರಿ ಹೊಂದಿದ್ದೇವೆ. ಅಲ್ಲದೇ ಹೂಡಿಕೆಗಳ ವಹಿವಾಟಿಗೂ ಹೆಚ್ಚಿನ ಗಮನಹರಿಸಿ, ಈ ಮೂಲಕ ಬ್ಯಾಂಕಿನ ನಿವ್ವಳ ಲಾಭ ರೂ.5.00 ಕೋಟಿ ನಿರೀಕ್ಷೆಯಲ್ಲಿದ್ದೇವೆ.

**ಕ್ಯಾಪಿಟಲ್ ಅಡಿಕ್ವೆಸಿ (Capital Risk Adequency Ratio) :**

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ಬ್ಯಾಂಕು ತನ್ನ ಒಟ್ಟು ಆಸ್ತಿಗಳ ಅಪಾಯದ ನಿರ್ವಹಣೆಗೋಸ್ಕರ ಕನಿಷ್ಠ ಶೇ.12 ರಷ್ಟು CRAR ನ್ನು ಹೊಂದಬೇಕಾಗಿರುತ್ತದೆ. ಹಾಲಿ ಬ್ಯಾಂಕ್ ಶೇ.44.71 ರಷ್ಟು ಹೊಂದಿದ್ದು ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಹೊಂದಿ Financially Sound and Well Management (FSWM) ವಿಭಾಗದಲ್ಲಿದ್ದು ಆರ್ಥಿಕವಾಗಿ ಸದೃಢವಾಗಿರುತ್ತದೆ. ಬ್ಯಾಂಕ್ ತನ್ನ ಲಾಭದಿಂದ ತೆಗೆದಿರಿಸಿದ ಎಲ್ಲಾ ನಿಧಿಗಳನ್ನು ಸೇರಿಸಿ ಸ್ವಂತ ಬಂಡವಾಳವನ್ನು ಹೆಚ್ಚಿಸಿದಷ್ಟು CRAR ಪ್ರಮಾಣದಲ್ಲಿ ಏರಿಕೆ ಉಂಟಾಗಿ, ಬ್ಯಾಂಕ್ ಸಕ್ಷಮವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಬ್ಯಾಂಕಿನಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಮೊಬಲಗನ್ನು ಆದ್ಯತೆ ಮೇರೆ ವಿವಿಧ ರೀತಿಯ ಸಾಲ ನೀಡುವಿಕೆಗೆ ಮತ್ತು ಹೂಡಿಕೆಗೆ ಬಳಸಿ ಲಾಭ ಗಳಿಕೆ ಮಾಡಲಾಗುತ್ತಿದೆ.

**ಸರ್ಕಾರಿ ಭದ್ರತೆ, ಹೂಡಿಕೆಗಳು ಮತ್ತು ದ್ರವ್ಯಾಸ್ತಿಗಳ ನಿರ್ವಹಣೆಃ**

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಯಂತೆ ಬೇಡಿಕೆ ಮತ್ತು ನಿಶ್ಚಿತಾವಧಿ ಜವಾಬ್ದಾರಿ (DTL) ಮೇಲಿನ ನಗದು ಮೀಸಲು ಪ್ರಮಾಣ (CRR) ವು ಶೇ.4 ಮತ್ತು ಶಾಸನಾತ್ಮಕ ದ್ರವ್ಯಾಸ್ತಿ ಪ್ರಮಾಣ (SLR)ವು ಶೇ.18.25 ರಷ್ಟಿರಬೇಕಿದ್ದು, ವರದಿ ಸಾಲಿನಲ್ಲಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಕೊರತೆಯಾಗದಂತೆ ನಿರ್ವಹಿಸಲಾಗಿದೆ. ಶಾಸನಾತ್ಮಕ ಹೂಡಿಕೆಗಳನ್ನು ಸರ್ಕಾರಿ ಭದ್ರತೆಯಲ್ಲಿ ತೊಡಗಿಸಿದ್ದು, ಅಲ್ಪ ಪ್ರಮಾಣದ ಲಾಭ ಗಳಿಸಲಾಗಿದೆ. ಈ ಹೂಡಿಕೆ ಹಾಗೂ ವಹಿವಾಟಿನ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಪ್ರತ್ಯೇಖ ಹೂಡಿಕೆ ನಿಯಮಾವಳಿ (Investment Policy)ಗಳನ್ನು ರೂಪಿಸಿದೆ. ಇದಲ್ಲದೇ ಸರ್ಕಾರಿ ಭದ್ರತೆಯ ಹೂಡಿಕೆಯಿಂದ ಹಾಲಿ ಆರ್ಥಿಕ ಸಾಲಿನಲ್ಲಿ ರೂ.4.58 ಕೋಟಿಗಳ ಬಡ್ಡಿ ಆಖರಗೊಂಡಿದೆ. ಈ ಎಲ್ಲಾ ವಹಿವಾಟುಗಳನ್ನು ಕಾರ್ಯನಿರ್ವಾಹಕ ಸಮಿತಿಯ ಮೇಲ್ವಿಚಾರಣೆಯಲ್ಲಿ ನಿಗಾವಹಿಸಲಾಗುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಬ್ಯಾಂಕಿನ ಒಟ್ಟು ಠೇವಣಿ ಮೇಲಿನ ಶೇ.20ಕ್ಕಿಂತ ಹೆಚ್ಚಿನ ಮೊಬಲಗನ್ನು ಇತರ ಬ್ಯಾಂಕ್‌ಗಳಲ್ಲಿನ ಹೂಡಿಕೆಗೆ ನಿರ್ಬಂಧ (Inter Bank Exposure Limit) ವಿಧಿಸಿದ್ದು, ಸರ್ಕಾರಿ ಭದ್ರತೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ವಹಿವಾಟು ನಡೆಸಲು ಅವಕಾಶ ನೀಡಿದೆ. ಅಲ್ಲದೆ ಸರ್ಕಾರಿ ಭದ್ರತೆಗಳ ಮಾರುಕಟ್ಟೆ ದರದ ಬೆಲೆಯನ್ನು ನಿರ್ಧರಿಸಿ ಸಾಲಾಖೈರಿಗೆ ಅದಕ್ಕೆ ಸಮನಾದ ಮೊಬಲಗನ್ನು ಇಳುವರಿ ರೂಪದಲ್ಲಿ ತೆಗೆದಿರಿಸಬೇಕಿದ್ದು, ಗುಂತಾಯಗಳ ಸವಕಳಿ ನಿಧಿ (Investment Depriciation Reserve) ಹಾಗೂ ಗುಂತಾಯ ಏರಿಳಿತ ನಿಧಿ (Investment Fluctuation Reserve)ಗಳನ್ನಾಗಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಅವಕಾಶ ಕಲ್ಪಿಸಿ ತೆಗೆದಿರಿಸಲಾಗಿದೆ. ಹೀಗೆ ಕಲ್ಪಿಸಿರುವ ಈ ನಿಧಿಗಳ ಹೆಚ್ಚುವರಿ ಅವಕಾಶವು ಸರ್ಕಾರಿ ಭದ್ರತೆ ಬೆಲೆಯ ಏರಿಳಿತದಿಂದ ಉಂಟಾಗುವ ಹಿನ್ನಡೆಯಿಂದ ರಕ್ಷಣೆ ನೀಡಲಿದೆ.

ದಿನಾಂಕ 31.03.2025ಕ್ಕೆ ಹೂಡಿಕೆಗಳ ವಿವರ ಈ ಕೆಳಕಂಡಂತೆ ಹೂಡಿಕೆಗಳಿರುತ್ತದೆ. (ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2022–23 | 2023–24 | 2024–25 |
|---|---|---|---|---|
| 1. | ಅಪೆಕ್ಸ್ ಬ್ಯಾಂಕ್ | 406.74 | 406.74 | 406.73 |
| 2. | ಬಿಡಿಸಿಸಿ ಬ್ಯಾಂಕ್ ಷೇರುಗಳು | 3.02 | 287.15 | 7.15 |
| 3. | ಗೌರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿ | 7,008.33 | 7,008.33 | 7,008.33 |
| 4. | ಬೆಂಗಳೂರು ಮರ್ಕೆಂಟೈಲ್ ಕೊ–ಆಪ್.ಬ್ಯಾಂಕ್ | 55.81 | 55.81 | 55.81 |
| 5. | ಹೆಚ್.ಡಿ.ಎಫ್.ಸಿ, ಕಸ್ತೂರ್ಬಾ ರಸ್ತೆ ಶಾಖೆ | 1,406.86 | 3,632.06 | 2,739.04 |
| 6 | SEDBI MSE Refinance Fund 2022-23 | 703.85 | 0.00 | 40.51 |
| | **ಒಟ್ಟು** | **9,584.59** | **11,390.09** | **10,257.57** |

**ಸಾಲ ಮತ್ತು ಮುಂಗಡಗಳುಃ**

**ದಿನಾಂಕ 31.03.2025ರಲ್ಲಿದ್ದಂತೆ ಸಾಲ ಮತ್ತು ಮುಂಗಡಗಳ ವಿವರಗಳು ಈ ಕೆಳಕಂಡಂತಿರುತ್ತದೆ.** (ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2022–23 | 2023–24 | 2024–25 |
|---|---|---|---|---|
| 1. | ಜಂಟಿ ಸಾಲಗಳು/ಓವರ್ ಡ್ರಾಫ್ಟ್ | 463.68 | 476.11 | 588.21 |
| 2. | **ಆಧಾರ ಸಾಲಗಳು** | | | |
| | a) ಸ್ಥಿರಾಧಾರ ಸಾಲ ಓವರ್ ಡ್ರಾಫ್ಟ್ | 1,212.02 | 801.04 | 861.36 |
| | b) ಸ್ಥಿರಾಧಾರ ಸಾಲ | 7,620.69 | 6,904.94 | 6,529.79 |
| | c) ಆಧಾರ ರಹಿತ ಸಾಲ | 144.88 | 107.22 | 127.42 |
| | d) ಗೃಹ ನಿರ್ಮಾಣ ಸಾಲ | 408.14 | 345.65 | 324.66 |
| | e) ವಾಹನ ಸಾಲ | 57.73 | 61.13 | 64.00 |
| | f) ಚಿನ್ನಾಭರಣ ಸಾಲ | 53.70 | 50.65 | 66.14 |
| | g) ಇತರೆ ಸಾಲ – (FD, CC, GD, RD, SIL, IL LIC, NSC, UTI, etc) | 845.52 | 830.67 | 832.58 |
| | **ಒಟ್ಟು** | **10,806.36** | **9,577.41** | **9,394.16** |

ಬ್ಯಾಂಕು ವರ್ಷಾಂತ್ಯಕ್ಕೆ ರೂ. 9394.16 ಲಕ್ಷಗಳಷ್ಟು ಸಾಲ ನೀಡಿದ್ದು, ಇದು ಕಳೆದ ಸಾಲಿಗಿಂತ ಕಡಿಮೆಯಾಗಿರುತ್ತದೆ. ಸದಸ್ಯರುಗಳ ಅನುಕೂಲಕ್ಕಾಗಿ ಆಡಳಿತ ಮಂಡಳಿಯು ವಿವಿಧ ಸಾಲಗಳ ಯೋಜನೆ ರೂಪಿಸಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಾಲ ನೀಡುವ ಗುರಿ ಹೊಂದಿರುತ್ತೇವೆ. ಈ ಸೌಲಭ್ಯ ಪ್ರಯೋಜನ ಪಡೆಯಲು ಸದಸ್ಯರ ಸಹಕಾರ ಕೋರುತ್ತೇವೆ.

ಬ್ಯಾಂಕಿನಲ್ಲಿ ನೀಡುವ ಒಟ್ಟಾರೆ ಸಾಲಗಳ ಪೈಕಿ ಶೇ.60 ರಷ್ಟು ವಿವಿಧ ವಿಭಾಗ ಆದ್ಯತಾ ವಲಯಕ್ಕೆ (Priority Sector) ನೀಡಬೇಕಾಗಿದ್ದು ಈ ಪೈಕಿ ಆರ್ಥಿಕ ದುರ್ಬಲ ವರ್ಗಕ್ಕೆ ನೀಡಬೇಕಾದ ಸಾಲದಲ್ಲಿ ಕೊರತೆಯಾದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆ Small Industries Development Bank of India (SIDBI)ದಲ್ಲಿ ಆರ್ಥಿಕ ಸಾಲಿನಲ್ಲಿ ರೂ.40.51 ಲಕ್ಷಗಳ ಠೇವಣಿಯಿರಿಸಲಾಗಿದೆ. ಈ ಆದ್ಯತಾ ವಲಯ ಸಾಲ ನೀಡುವಿಕೆಯ ನಿರ್ದೇಶನಗಳ ಪಾಲನೆಗೆ ಅಗತ್ಯ ಕ್ರಮವಹಿಸಲಾಗಿದೆ.

**ಅನುತ್ಪಾದಕ ಆಸ್ತಿ (ಎನ್.ಪಿ.ಎ):** ಭಾರತೀಯ ರಿಸರ್ವ್ ಬ್ಯಾಂಕಿನ Income Recognisation & Assets Classification (IRAC) ನಿಯಮದಂತೆ ಯಾವುದೇ ಸಾಲವು 90 ದಿನಗಳಲ್ಲಿ ಮರುಪಾವತಿಯಾಗದಿದ್ದಲ್ಲಿ ನಿಷ್ಕ್ರಿಯ ಆಸ್ತಿಗಳಾಗುತ್ತದೆ. ನಿಷ್ಕ್ರಿಯ ಆಸ್ತಿ ಪ್ರಮಾಣ ಹೆಚ್ಚಾದಲ್ಲಿ ಇದಕ್ಕಾಗಿ ಮೊಬಲಗನ್ನು ಕಾಯ್ದಿರಿಸಬೇಕಿರುವುದರಿಂದ ಲಾಭದ ಮೇಲೂ ಹೆಚ್ಚಿನ ಪರಿಣಾಮ ಬೀರಿ ಬ್ಯಾಂಕಿನ ಗುಣಮಟ್ಟದ ವರ್ಗೀಕರಣವು ಕಡಿಮೆಯಾಗುತ್ತದೆ. ಆದಾಗ್ಯೂ ದಿನಾಂಕ 31.03.2025ಕ್ಕೆ ಬ್ಯಾಂಕ್ ನೀಡಿದ ಒಟ್ಟು ಸಾಲ ರೂ.9394.16 ಲಕ್ಷಗಳ ಪೈಕಿ ಅನುತ್ಪಾದಕ ಮೊಬಲಗು ರೂ.2182.84 ಲಕ್ಷಗಳಿದ್ದು, ಗ್ರಾಸ್ ಎನ್.ಪಿ.ಎ ಪ್ರಮಾಣ ಶೇ.23.24 ರಷ್ಟಿದ್ದು ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.5.53 ರಷ್ಟು ಹೆಚ್ಚಾಗಿದೆ. ಈ ಬಗ್ಗೆ ಬ್ಯಾಂಕಿನಲ್ಲಿ ಈವರೆವಿಗೂ ರೂ.2491.39 ಲಕ್ಷಗಳನ್ನು ಕಾಯ್ದಿರಿಸಿದ್ದು, ಇದರಿಂದಾಗಿ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣ ಶೂನ್ಯ ಮಟ್ಟದಲ್ಲಿರುತ್ತದೆ.

ಹಿಂದಿನ ಕೆಲವು ಸರ್ವಸದಸ್ಯರ ಸಭೆಗಳ ತೀರ್ಮಾನದಂತೆ ಸುಸ್ತಿ ಬಾಕಿಗಳನ್ನು ರಿಯಾಯಿತಿ ನೀಡಿ ಚುಕ್ತಗೊಳಿಸಲು ಆಡಳಿತ ಮಂಡಳಿಗೆ ನೀಡಿದ ಅಧಿಕಾರದಿಂದಾಗಿ ಕೆಲ ಸುಸ್ತಿ ಬಾಕಿಗಳನ್ನು ಈ ಹಿಂದೆ ವಸೂಲ್ಮಾಡಿದ ರೀತಿಯಲ್ಲಿಯೇ ವರದಿ ಸಾಲಿನಲ್ಲಿಯೂ ವಸೂಲಾತಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಇದಕ್ಕಾಗಿ ಪ್ರತ್ಯೇಖ ವಿಭಾಗ ರಚನೆ, ನುರಿತ ಕಾನೂನು ಸಲಹೆಗಾರರ ನೇಮಕ, ವಸೂಲಾತಿಗೆ ಹೊರಗುತ್ತಿಗೆಯಲ್ಲಿ ಏಜೆನ್ಸಿಗಳ ನೇಮಕಾತಿ ಇತ್ಯಾದಿಗಳ ನಡವಳಿಕೆಗಳನ್ನು ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಕ್ರಮವಿಡಲಾಗಿದೆ.

**ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಆಖೈರುಗೊಳಿಸುವ ಬಗ್ಗೆ:**

ಬ್ಯಾಂಕಿನ ಒಟ್ಟಾರೆ ಸಾಲಗಳ ಪೈಕಿ ಸುಮಾರು 21.83 ಕೋಟಿಗಳಷ್ಟು ಮೊಬಲಗು ಸುಸ್ತಿಯಾಗಿದ್ದು ಇದರ ವಸೂಲಾತಿಗೆ ಗಂಭೀರವಾಗಿ ಪ್ರಯತ್ನಿಸುವಂತೆ ಲೆಕ್ಕಪರಿಶೋಧಕರು ತಮ್ಮ ಸಲಹೆ ಸೂಚನೆಗಳಡಿ ಸೂಚಿಸಿರುತ್ತಾರೆ. ಈ ಪೈಕಿ ಹಲವಾರು ವರ್ಷಗಳ ಹಿಂದಿನ ಪ್ರಕರಣಗಳೇ ಹೆಚ್ಚಿದ್ದು, ಇವುಗಳನ್ನು ಇತ್ಯರ್ಥಗೊಳಿಸಿದಲ್ಲಿ ಬ್ಯಾಂಕಿನ ಆರ್ಥಿಕ ವಹಿವಾಟು ಮುಂದಿನ ದಿನಗಳಲ್ಲಿ ಸುಗಮವಾಗಿ ನಡೆಯಲು ಅವಕಾಶವಾಗಿ ಶಾಖಾ ವಿಸ್ತರಣೆಗೂ ಸಹಕಾರಿಯಾಗಲಿದೆ.

ಕಳೆದ ಹಲವಾರು ವರ್ಷಗಳಿಂದ ವಸೂಲಾಗದೆ ಬಾಕಿಯುಳಿದಿದ್ದ 10 ವರ್ಷಗಳಿಗೂ ಮೇಲ್ಪಟ್ಟ ಕೆಲ ಸುಸ್ತಿ ಬಾಕಿಗಳನ್ನು ಸರ್ವಸದಸ್ಯರ ಸಭೆ ತೀರ್ಮಾನದಂತೆ ಆಖೈರುಗೊಳಿಸಿದ ಪರಿಣಾಮ ಅನುತ್ಪಾದಕ ಆಸ್ತಿ ಪ್ರಮಾಣವು ಗಮನಾರ್ಹ ಇಳಿಕೆಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸುವ ನಿರ್ಬಂಧದಿಂದ ಹೊರಬಂದಿದೆ. ಈ ಕಾರಣದಿಂದ ಬ್ಯಾಂಕ್ ಗಳಿಸಿದ ಲಾಭದಲ್ಲಿ ಮುಕ್ತವಾಗಿ ಡಿವಿಡೆಂಡ್ ವಿತರಣೆಗೂ ಸಹಕಾರಿಯಾಗಿದೆ. ಸರ್ವಸದಸ್ಯರ ಸಭೆಯು ಆಡಳಿತ ಮಂಡಳಿಗೆ ನೀಡಲಾಗಿದ್ದ ಆಧಿಕಾರ ವ್ಯಾಪ್ತಿಯಲ್ಲಿ ಚರ್ಚಿಸಿ, ತೀರ್ಮಾನಿಸಿ ಬ್ಯಾಂಕಿನ ಹಿತದೃಷ್ಟಿಯೊಂದಿಗೆ ಮಾನವೀಯ ದೃಷ್ಟಿಯಿಂದ ಆರ್ಥಿಕ ಸಂಕಷ್ಟದಲ್ಲಿದ್ದ ಸದಸ್ಯರುಗಳಿಗೆ ಸಹಾಯ ಮಾಡಿ ತನ್ಮೂಲಕ ಬ್ಯಾಂಕಿನ ಹಿತವನ್ನೂ ಕೂಡ ಕಾಪಾಡಿ ಹಳೆಯ ಸುಸ್ತಿ ಬಾಕಿಗಳನ್ನು ಇತ್ಯರ್ಥಗೊಳಿಸಲಾಗುತ್ತಿದೆ. ಅದರಂತೆ ಸುಸ್ತಿ ಪ್ರಕರಣಗಳಲ್ಲಿ ಕಾಸ್ಟ್ ಆಫ್ ಫಂಡ್‌ಗೆ ಕೊರತೆಯಾಗದಂತೆ ಖಾತೆಗಳನ್ನು ಚುಕ್ತಗೊಳಿಸಲು ಅಧಿಕಾರ ಪಡೆಯಲಾಗಿತ್ತು. ಈ ಎಲ್ಲಾ ಅಂಶಗಳನ್ನು ಗಮನಿಸಿ, ಹಾಲಿ ಆರ್ಥಿಕ ಸಾಲಿನಲ್ಲಿ ಶ್ರೀಮತಿ ಅಶ್ವತ್ ಆರ್ ರವರ ಖಾತೆಯನ್ನು ಪರಿಗಣಿಸಿ ಚುಕ್ತಗೊಳಿಸಲಾಗಿದೆ. ಇದಕ್ಕೆ ಸರ್ವಸದಸ್ಯರು ಅನುಮೋದನೆ ನೀಡಲು ಕೋರಲಾಗಿದೆ.

ಅದೇ ರೀತಿ ಮುಂದಿನ ದಿನಗಳಲ್ಲಿಯೂ ವಸೂಲಾತಿಗೆ ತೊಡಕಾದ ಅನುತ್ಪಾದಕ ಸಾಲಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಪ್ರಕರಣಗಳನ್ನೂ ಸಹ ನಿಯಮಾನುಸಾರ ಇತ್ಯರ್ಥಗೊಳಿಸಲು ಉದ್ದೇಶಿಸಿದೆ. ಇಂತಹವುಗಳನ್ನು ಇತ್ಯರ್ಥಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಅಪೇಕ್ಷಿಸಿದ್ದು ಇದಕ್ಕೆ ಸರ್ವಸದಸ್ಯರು ಅನುಮೋದನೆ ನೀಡಲು ಕೋರಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಸುಸ್ತಿ ಸಾಲಗಳ ತಾಂತ್ರಿಕ ವಜಾ (Technical Write-off), ಏಕಕಾಲಿಕ ತೀರುವಳಿ ಯೋಜನೆ (OTS), ಸುಸ್ತಿ ರಾಜಿ ಪರಿಹಾರ (Compromise Settlement)ಗಳಿಗೆ ವಿವಿಧ ಸುತ್ತೋಲೆಗಳನ್ನು ಹೊರಡಿಸಿದೆ. ಇದರನ್ವಯ ಆಡಳಿತ ಮಂಡಳಿಗೆ ಹೆಚ್ಚಿನ ಅಧಿಕಾರ ನೀಡಿದ್ದು, ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯಲ್ಲಿ ಈ ಕುರಿತ ನಿಯಮಾವಳಿಗಳನ್ನು ರಚಿಸಿದ್ದು, ಇವುಗಳಡಿಯಲ್ಲಿ ಕಾರ್ಯಪ್ರವೃತ್ತರಾಗಿರುವುದಾಗಿ ಸರ್ವಸದಸ್ಯರ ಗಮನಕ್ಕೆ ತರುತ್ತಿದ್ದೇವೆ.

**2024–25ನೇ ಸಾಲಿನ ನಿವ್ವಳ ಲಾಭಃ**

ಬ್ಯಾಂಕ್ ಪ್ರಾರಂಭದಿಂದಲೂ ಸತತವಾಗಿ ಲಾಭಗಳಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. 2024–25ನೇ ಸಾಲಿನಲ್ಲಿ ರೂ. 306.64 ಲಕ್ಷ ಕ್ರೋಢೀಕೃತ ಲಾಭಗಳಿಸಿದ್ದು, ಈ ಪೈಕಿ ರೂ.72.52 ಲಕ್ಷ ಆದಾಯ ತೆರಿಗೆ ಪಾವತಿಸಿ, ರೂ.27.00 ಲಕ್ಷ ಕರಡು ಹಾಗೂ ಸಂಶಯಾಸ್ಪದ ನಿಧಿ, ರೂ.18.02 ಲಕ್ಷ ಸಿಬ್ಬಂದಿ ಗಳಿಕೆ ರಜೆ ನಗದೀಕರಣ ಕಾಯ್ದಿರಿಸಿ ಅಂತಿಮವಾಗಿ ರೂ.266.08 ಲಕ್ಷ ನಿವ್ವಳ ಲಾಭಗಳಿಸಿದೆ. ಶಾಖೆಗಳ ವಹಿವಾಟನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ಲಾಭಗಳಿಕೆಯತ್ತ ಸಾಗಬೇಕಿದೆ. ಹಾಲಿ ಸಾಲಿನ ಈ ನಿವ್ವಳ ಲಾಭವನ್ನು ಕಾಯ್ದೆ, ನಿಯಮ, ಉಪನಿಯಮ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳ ರೀತ್ಯ ವಿಲೇ ಮಾಡಿ ವಿಷಯ–9ರಲ್ಲಿ ಮಹಾಸಭೆಯ ಅನುಮೋದನೆಗೆ ಆಡಳಿತ ಮಂಡಳಿಯು ಮಂಡಿಸಿದೆ.

**ಡಿವಿಡೆಂಡ್ ವಿತರಣೆಃ**

2023–24ನೇ ಸಾಲಿನಲ್ಲಿ ಸದಸ್ಯರುಗಳಿಗೆ ಶೇ.20ರ ದರದಲ್ಲಿ ಡಿವಿಡೆಂಡ್ ವಿತರಿಸಲಾಗಿತ್ತು. 2024–25ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯಲ್ಲಿ ಸದಸ್ಯರುಗಳ ಷೇರುಧನ ರೂ.8.41 ಕೋಟಿಗಳ ಮೇಲೆ ಶೇ.18ರ ದರದಲ್ಲಿ ರೂ.1.51 ಕೋಟಿಗಳ ಡಿವಿಡೆಂಡ್ ಮೊಬಲಗನ್ನು ಆಡಳಿತ ಮಂಡಳಿಯು ಘೋಷಿಸಲು ನಿರ್ಧರಿಸಿದೆ. ಇದಕ್ಕೆ ಸರ್ವಸದಸ್ಯರ ಸಭೆಯು ಒಪ್ಪಿಗೆ ನೀಡಬೇಕಾಗಿ ಕೋರಿದೆ.

**ಮೂರು ವರ್ಷಗಳಿಗೆ ಮೇಲ್ಪಟ್ಟ ಪಾವತಿಯಾಗದ ಡಿವಿಡೆಂಡ್ ಮೊಬಲಗು :**

ವಿಲೇಯಾಗಿ ಪಾವತಿಯಾಗದಿರುವ ಮೂರು ವರ್ಷಗಳಿಗೂ ಮೇಲ್ಪಟ್ಟ ಡಿವಿಡೆಂಡ್ ಮೊಬಲಗನ್ನು ಕಾಯ್ದೆ /ಉಪನಿಯಮ ರೀತ್ಯ ಆಪದ್ಧನ ನಿಧಿಗೆ ವರ್ಗಾಯಿಸಬೇಕಾಗಿದ್ದು, ಪಾವತಿಯಾಗದೆ ಬಾಕಿಯುಳಿದಿರುವ ರೂ. 92.73 ಲಕ್ಷಗಳ ಪೈಕಿ ದಿನಾಂಕ 30.03.2025 ಕ್ಕೆ 2020–21ನೇ ಸಾಲಿಗೆ ಸಂಬಂಧಿಸಿದ ಬಾಬ್ತು ಡಿವಿಡೆಂಡ್ ಮೊಬಲಗು ರೂ. 19.43 ಲಕ್ಷಗಳನ್ನು ಮಹಾಸಭೆಯ ಅನುಮತಿ ಪಡೆದು ಆಪದ್ಧನ ನಿಧಿ (Reserve Fund)ಗೆ ವರ್ಗಾಯಿಸಲಿದ್ದು, ಸರ್ವಸದಸ್ಯರ ಸಭೆಯ ವಿಷಯ–12ರಲ್ಲಿ ಒಪ್ಪಿಗೆಗೆ ಮಂಡಿಸಲಾಗಿದೆ.

**ಬ್ಯಾಂಕಿನ ಸಿಬ್ಬಂದಿ ವೃಂದಬಲ/ವೇತನ ಪಾವತಿ/ತರಬೇತಿ ಹಾಗೂ ನೇಮಕಾತಿ ಬಗ್ಗೆಃ**

ಸಹಕಾರ ಇಲಾಖೆಯ ಆದೇಶ ಸಂಖ್ಯೆಃ ಯುಬಿಸಿಃಯುಸಿಎಸ್ಃ57/94–95, ದಿನಾಂಕ 30.05.1995ರಲ್ಲಿ 85 ಹುದ್ದೆ ಮತ್ತು ಆದೇಶ ಸಂಖ್ಯೆಃ ಯುಬಿಸಿಃಯುಸಿಎಸ್ಃ77/95–96, ದಿನಾಂಕ 08.01.1996ರಲ್ಲಿ 25 ಹುದ್ದೆ ಒಟ್ಟು ಹಾಲಿ ಅನುಮೋದಿಸಲ್ಪಟ್ಟ ವೃಂದಬಲ 110 ಇರುತ್ತದೆ. ಸಿಬ್ಬಂದಿಗಳಿಗೆ ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕ್ ಮಹಾಮಂಡಳ ನಿ., ದ ವೇತನ ಶ್ರೇಣಿ ಅಳವಡಿಸಿ, ಕಾಲಕಾಲಕ್ಕೆ ಕರ್ನಾಟಕ ರಾಜ್ಯ ಸರ್ಕಾರವು ಮಂಜೂರು ಮಾಡುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಗಳಿಕೆ ರಜೆ ನಗದೀಕರಣ ಇತ್ಯಾದಿಗಳನ್ನು ನೀಡುತ್ತಾ ಬಂದಿದೆ, ಇದಲ್ಲದೇ, ಸಿಬ್ಬಂದಿಗಳ ಕಾರ್ಯಕ್ಷಮತೆಗಳಿಗನುಗುಣವಾಗಿ ಬಡ್ತಿ, ಕಾಲಕಾಲಕ್ಕೆ ಇನ್‌ಕ್ರಿಮೆಂಟ್, ಬೋನಸ್/ಎಕ್ಸ್‌ಗ್ರೇಷಿಯಾ ಇತ್ಯಾದಿ ಸೌಲಭ್ಯ ನೀಡಿ ಉತ್ತೇಜಿಸಲಾಗುತ್ತಿದೆ. ಇದರ ಒಟ್ಟಾರೆ ನಿರ್ವಹಣೆಯು ದುಡಿಯುವ ಬಂಡವಾಳದ ಶೇ.2ಕ್ಕೆ ಮೀರದಂತೆ ನಿಗಾವಹಿಸಲಾಗಿದೆ.

ಬ್ಯಾಂಕಿನ ವಹಿವಾಟು ವಿಸ್ತರಣೆ ದೃಷ್ಠಿಯಿಂದ ಶಾಖೆಗಳನ್ನು ತೆರೆಯಬೇಕಿದ್ದು, ಹೆಚ್ಚಿನ ಪ್ರಮಾಣದ ಅಧಿಕಾರಿ ವರ್ಗ ಹಾಗೂ ಸಹಾಯ ಸಿಬ್ಬಂದಿಗಳ ಅಗತ್ಯವಿರುತ್ತದೆ. ಅಲ್ಲದೇ ಕೆಲ ಹಿರಿಯ ಅಧಿಕಾರಿ ಸಿಬ್ಬಂದಿ ವರ್ಗದವರು ವಯೋಮಾನ ರೀತ್ಯ ನಿವೃತ್ತರಾಗಿರುವುದರಿಂದ ಸಿಬ್ಬಂದಿ ನೇಮಕಾತಿಗೆ ಸರ್ವಸದಸ್ಯರ ಸಭೆಗಳ ತೀರ್ಮಾನದಂತೆ ಕ್ರಮವಿಡಲಾಗಿದೆ. ಅಲ್ಲದೇ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ, ಲೆಕ್ಕಪರಿಶೋಧಕರ ಹಾಗೂ ಸರ್ವಸದಸ್ಯರ ಸೂಚನೆ ಮೇರೆಗೆ ಪೂರ್ಣಪ್ರಮಾಣದ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಅಧಿಕಾರಿಗಳ ನೇಮಕಾತಿಗೂ ಕ್ರಮವಿಡಲಾಗಿದ್ದು, ಈ ಬಗ್ಗೆ ಸಹಕಾರಿ ಇಲಾಖೆಯಿಂದ ಅನುಮತಿ ಬಂದ ಮೇರೆಗೆ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್, ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ತರಬೇತಿ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್ ಮಹಾಮಂಡಳ ನಿ.,ದ ಆಶ್ರಯದಲ್ಲಿ ಆನ್‌ಲೈನ್ ಮೂಲಕ ವಿವಿಧ ತರಬೇತಿ/ಕಾರ್ಯಗಾರಗಳು ಜರುಗುತ್ತಿದ್ದು ಬ್ಯಾಂಕಿನ ಸಿಬ್ಬಂದಿಗಳಿಗೆ ಇವುಗಳ ಸಹಕಾರದಿಂದ ತರಬೇತಿಗೆ ನಿಯೋಜಿಸಲಾಗುತ್ತಿದೆ. ಅಲ್ಲದೇ ಬ್ಯಾಂಕಿಂಗ್ ವಹಿವಾಟಿಗೆ ಸಂಬಂಧಿಸಿದಂತೆ ತಜ್ಞರು, ಬ್ಯಾಂಕಿನ ಲೆಕ್ಕಪರಿಶೋಧಕರುಗಳಿಂದ ಉಪನ್ಯಾಸ ಆಯೋಜಿಸಲಾಗಿದೆ. ಅಲ್ಲದೇ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್ ನಡೆಸುವ ಡಿಪ್ಲೋಮಾ ಇನ್ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (DUCBM)ದ ಲಿಖಿತ ಪರೀಕ್ಷೆಗೆ ಬ್ಯಾಂಕಿನ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ರಾಜ್ಯಮಟ್ಟದ ಪ್ರಾದೇಶಿಕ ಸಹಕಾರಿ ತರಬೇತಿ ಕೇಂದ್ರ, ಬೆಂಗಳೂರುರವರು ನಡೆಸುವ ಎಲ್ಲಾ ಕಾರ್ಯಾಗಾರಗಳಿಗೆ ಬ್ಯಾಂಕಿನ ವತಿಯಿಂದ ನಿರ್ದೇಶಕರು/ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಬರಲಾಗುತ್ತಿದೆ.

**ಚುನಾಯಿತ ನೂತನ ಆಡಳಿತ ಮಂಡಳಿ ರಚನೆ ಹಾಗೂ ಪದಾಧಿಕಾರಿಗಳ ಆಯ್ಕೆ:**

ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ: ಸಚುಪ್ರಾ/ಬೆಂ/ಉ.ನಿ./ಆಮಂಚು–ರಿಅನೇ/15/2024–25 ದಿನಾಂಕ 15.11.2024ರ ಮೇರೆ ನಿಯೋಜಿಸಲ್ಪಟ್ಟ ರಿಟರ್ನಿಂಗ್ ಅಧಿಕಾರಿಯವರ ಮೇಲ್ವಿಚಾರಣೆಯಲ್ಲಿ ದಿನಾಂಕ: 02.02.2025 ರಂದು ಆಡಳಿತ ಮಂಡಳಿ ಚುನಾವಣೆ ನಡೆದಿರುತ್ತದೆ. ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಈ ಕೆಳಕಂಡವರು ಚುನಾಯಿತರಾಗಿರುವುದಾಗಿ ದಿನಾಂಕ 14.03.2025ರಂದು ರಿಟರ್ನಿಂಗ್ ಅಧಿಕಾರಿಯವರು ಘೋಷಿಸಿರುತ್ತಾರೆ.

| | | | | | |
|---|---|---|---|---|---|
| 01 | ಶ್ರೀ ಕೆ.ಆರ್.ಆನಂದಬಾಬು | 06 | ಶ್ರೀ ಕಿರಣ್ ಚಂದ್ರಶೇಖರ್ | 11 | ಶ್ರೀ ಹೆಚ್.ಕೆ.ಚಂದ್ರಪ್ಪ |
| 02 | ಶ್ರೀ ಕೆ.ಸಿ.ರುದ್ರಮೂರ್ತಿ | 07 | ಶ್ರೀ ಬಿ.ಎಸ್.ಪ್ರಸನ್ನಬಾಬು | 12 | ಶ್ರೀ ಎನ್.ವೆಂಕಟಾಚಲಂ |
| 03 | ಶ್ರೀ ಕೆ.ಆರ್.ಕೃಷ್ಣ | 08 | ಶ್ರೀ ಕೆ.ರಾಮಚಂದ್ರ | 13 | ಶ್ರೀ ಎನ್.ಗಿರೀಶ್ ಬಾಬು |
| 04 | ಶ್ರೀ ಎನ್.ದಯಾನಂದ | 09 | ಶ್ರೀ ಎನ್.ಮುರಳಿಧರ್ | 14 | ಶ್ರೀಮತಿ ಹೆಚ್.ಸಿ.ನಾಗರತ್ನ |
| 05 | ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ | 10 | ಶ್ರೀ ಎಂ.ದಿನೇಶ್ | 15 | ಶ್ರೀಮತಿ ಎನ್.ಮಾಲಿನಿ |

ಹೀಗೆ ಚುನಾಯಿತರಾದ ನಿರ್ದೇಶಕರುಗಳ ಪೈಕಿ ದಿನಾಂಕ 24.03.2025ರಂದು ಚುನಾವಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಐದು ವರ್ಷಗಳ ಅವಧಿಗೆ ಪದಾಧಿಕಾರಿಗಳ ಚುನಾವಣೆ ನಡೆದು ಈ ಕೆಳಕಂಡವರು ಆಯ್ಕೆಯಾಗಿರುತ್ತಾರೆ.

| | |
|---|---|
| ಶ್ರೀ ಕೆ.ಆರ್.ಆನಂದಬಾಬು | ಅಧ್ಯಕ್ಷರು |
| ಶ್ರೀ ಕೆ.ಆರ್.ಕೃಷ್ಣ | ಉಪಾಧ್ಯಕ್ಷರು |

**ಸಮಿತಿಗಳು:**

ಬ್ಯಾಂಕಿನಲ್ಲಿ ಈ ಕೆಳಕಂಡಂತೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ.

| ಕಾರ್ಯನಿರ್ವಾಹಕ ಸಮಿತಿ | ಸಾಲದ ಸಮಿತಿ | ಲೆಕ್ಕಪರಿಶೋಧನಾ ಸಮಿತಿ | ಹೂಡಿಕೆ ಸಮಿತಿ |
|---|---|---|---|
| 1. ಶ್ರೀ ಕೆ.ಆರ್.ಆನಂದಬಾಬು | 1. ಶ್ರೀ ಕೆ.ಆರ್.ಆನಂದಬಾಬು | 1. ಶ್ರೀ ಕೆ.ಆರ್.ಆನಂದಬಾಬು | 1. ಶ್ರೀ ಕೆ.ಆರ್.ಆನಂದಬಾಬು |
| 2. ಶ್ರೀ ಕೆ.ಆರ್.ಕೃಷ್ಣ | 2. ಶ್ರೀ ಕೆ.ಸಿ.ರುದ್ರಮೂರ್ತಿ | 2. ಶ್ರೀ ಕಿರಣ್ ಚಂದ್ರಶೇಖರ್ | 2. ಶ್ರೀಮತಿ ಎನ್.ಮಾಲಿನಿ |
| 3. ಶ್ರೀಮತಿ ಹೆಚ್.ಸಿ.ನಾಗರತ್ನ | 3. ಶ್ರೀಮತಿ ಎನ್.ಮಾಲಿನಿ | 3. ಶ್ರೀ ಕೆ.ರಾಮಚಂದ್ರ | 3. ಶ್ರೀ ಎನ್.ವೆಂಕಟಾಚಲಂ |
| 4. ಶ್ರೀ ಎನ್.ದಯಾನಂದ | 4. ಶ್ರೀ ಎಂ.ದಿನೇಶ್ | 4. ಶ್ರೀ ಎನ್.ವೆಂಕಟಾಚಲಂ | 4. ಶ್ರೀ ಎನ್.ಗಿರೀಶ್‌ಬಾಬು |

**ಆಡಳಿತ ಮಂಡಳಿ, ಸಮಿತಿ ಸಭೆಗಳು ಮತ್ತು ವಾರ್ಷಿಕ ಸರ್ವಸದಸ್ಯರ ಸಭೆ:**

ವರದಿ ಸಾಲಿನಲ್ಲಿ 13 ಆಡಳಿತ ಮಂಡಳಿ ಸಭೆ, 32 ಸಮಿತಿ ಸಭೆ, 3 ವ್ಯವಸ್ಥಾಪನಾ ಮಂಡಳಿ ಸಭೆಗಳು ಮತ್ತು ದಿನಾಂಕ 22.09.2024 ರಂದು 95ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡೆದಿರುತ್ತದೆ. ಸಾಲದ ಸಮಿತಿ, ಕಾರ್ಯನಿರ್ವಾಹಕ ಸಮಿತಿ, ಲೆಕ್ಕಪರಿಶೋಧನಾ ಸಮಿತಿ ಹಾಗೂ ಹೂಡಿಕೆ ಸಮಿತಿಗಳನ್ನು ಹೊಂದಿದ್ದು, ಈ ಸಮಿತಿಯ ಸದಸ್ಯರು ಕಾಲಕಾಲಕ್ಕೆ ಸಭೆ ಸೇರಿ ಸಮಿತಿಯ ಉದ್ದೇಶಕ್ಕನುಗುಣವಾಗಿ ಕಾರ್ಯಭಾರಗಳನ್ನು ನಡೆಸಿ ಸಹಕರಿಸಿರುತ್ತಾರೆ. ಸಾಲ ಸಮಿತಿಯನ್ನೊಳಗೊಂಡಂತೆ ಕೆಲ ನಿರ್ದೇಶಕರನ್ನು ಸೇರ್ಪಡಿಸಿ ಈ ಸಮಿತಿ ವ್ಯಾಪ್ತಿಯಲ್ಲಿ ವಸೂಲಾತಿಗೆ ಸಂಬಂಧಿಸಿದ ಪೂರ್ಣ ಅಧಿಕಾರ ನೀಡಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

## ಆಡಳಿತ ಮಂಡಳಿ ನಿರ್ದೇಶಕರ ಸಭೆ ಹಾಜರಾತಿ ವಿವರ
## ದಿನಾಂಕ 01.04.2024 ರಿಂದ 15.02.2025 ರವರೆಗೆ

| | ನಿರ್ದೇಶಕರ ಹೆಸರು | ಹುದ್ದೆ | ಆಡಳಿತ ಮಂಡಳಿ | ಸಮಿತಿ | ಒಟ್ಟು |
|---|---|---|---|---|---|
| 01 | ಶ್ರೀ ಆರ್.ಪಿ.ಎಂ.ಸತ್ಯನಾರಾಯಣ | ಅಧ್ಯಕ್ಷರು | 11 | 32 | 43 |
| 02 | ಶ್ರೀ ಬಿ.ವಿ.ಗೋಪಾಲರೆಡ್ಡಿ | ಉಪಾಧ್ಯಕ್ಷರು | 10 | 6 | 16 |
| 03 | ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ | ನಿರ್ದೇಶಕರು | 4 | 0 | 4 |
| 04 | ಶ್ರೀ ಎಂ.ಎಸ್.ಪವನ್ ಕುಮಾರ್ | ನಿರ್ದೇಶಕರು | 7 | 11 | 18 |
| 05 | ಶ್ರೀ ಪಿ.ಎಸ್.ಬಾಲಕೃಷ್ಣಶೆಟ್ಟಿ | ನಿರ್ದೇಶಕರು | 7 | 0 | 7 |
| 06 | ಶ್ರೀ ಕೆ.ಆರ್.ಕೃಷ್ಣ | ನಿರ್ದೇಶಕರು | 12 | 9 | 21 |
| 07 | ಶ್ರೀ ಕೆ.ಸಿ.ರುದ್ರಮೂರ್ತಿ | ನಿರ್ದೇಶಕರು | 9 | 9 | 18 |
| 08 | ಶ್ರೀ ಬಿ.ಎಸ್.ಪ್ರಸನ್ನಬಾಬು | ನಿರ್ದೇಶಕರು | 11 | 1 | 12 |
| 09 | ಶ್ರೀ ಎನ್.ದಯಾನಂದ | ನಿರ್ದೇಶಕರು | 11 | 12 | 23 |
| 10 | ಶ್ರೀ ಪಿ.ಪಳನಿ | ನಿರ್ದೇಶಕರು | 7 | 2 | 9 |
| 11 | ಶ್ರೀ ಬಿ.ಎಸ್.ಶ್ರೀರಂಗ | ನಿರ್ದೇಶಕರು | 11 | 0 | 11 |
| 12 | ಶ್ರೀಮತಿ ಹೆಚ್.ಸಿ.ನಾಗರತ್ನ | ನಿರ್ದೇಶಕರು | 12 | 15 | 27 |
| 13 | ಶ್ರೀಮತಿ ಎನ್.ಮಾಲಿನಿ | ನಿರ್ದೇಶಕರು | 11 | 18 | 29 |
| 14 | ಶ್ರೀ ಎಂ.ಮಾರಪ್ಪ | ನಿರ್ದೇಶಕರು | 4 | 4 | 8 |
| 15 | ಶ್ರೀ ಹೆಚ್.ಕೆ.ಚಂದ್ರಪ್ಪ | ನಿರ್ದೇಶಕರು | 11 | 0 | 11 |
| 16 | ಶ್ರೀ ಬಿ.ವಿ.ಶ್ರೀನಿವಾಸ್ | ವೃತ್ತಿಪರ ನಿರ್ದೇಶಕರು | 4 | 0 | 4 |
| 17 | ಶ್ರೀ ಎನ್.ವೆಂಕಟಾಚಲಂ | ವೃತ್ತಿಪರ ನಿರ್ದೇಶಕರು | 11 | 8 | 19 |

## ಆಡಳಿತ ಮಂಡಳಿ ನಿರ್ದೇಶಕರ ಸಭೆ ಹಾಜರಾತಿ ವಿವರ
## ದಿನಾಂಕ 24.03.2025 ರಿಂದ 31.03.2025 ರವರೆಗೆ

| | ನಿರ್ದೇಶಕರ ಹೆಸರು | ಹುದ್ದೆ | ಆಡಳಿತ ಮಂಡಳಿ | ಸಮಿತಿ | ಒಟ್ಟು |
|---|---|---|---|---|---|
| 01 | ಶ್ರೀ ಕೆ.ಆರ್.ಆನಂದಬಾಬು | ಅಧ್ಯಕ್ಷರು | 1 | 0 | 1 |
| 02 | ಶ್ರೀ ಕೆ.ಆರ್.ಕೃಷ್ಣ | ಉಪಾಧ್ಯಕ್ಷರು | 1 | 0 | 1 |
| 03 | ಶ್ರೀ ಕೆ.ಸಿ.ರುದ್ರಮೂರ್ತಿ | ನಿರ್ದೇಶಕರು | 1 | 0 | 1 |
| 04 | ಶ್ರೀ ಎನ್.ದಯಾನಂದ | ನಿರ್ದೇಶಕರು | 1 | 0 | 1 |
| 05 | ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ | ನಿರ್ದೇಶಕರು | 1 | 0 | 1 |
| 06 | ಶ್ರೀ ಕಿರಣ್ ಚಂದ್ರಶೇಖರ್ | ನಿರ್ದೇಶಕರು | 1 | 0 | 1 |
| 07 | ಶ್ರೀ ಬಿ.ಎಸ್.ಪ್ರಸನ್ನಬಾಬು | ನಿರ್ದೇಶಕರು | 1 | 0 | 1 |
| 08 | ಶ್ರೀ ಕೆ.ರಾಮಚಂದ್ರ | ನಿರ್ದೇಶಕರು | 1 | 0 | 1 |
| 09 | ಶ್ರೀ ಎನ್.ಮುರಳಿಧರ್ | ನಿರ್ದೇಶಕರು | 1 | 0 | 1 |
| 10 | ಶ್ರೀಮತಿ ಹೆಚ್.ಸಿ.ನಾಗರತ್ನ | ನಿರ್ದೇಶಕರು | 1 | 0 | 1 |
| 11 | ಶ್ರೀಮತಿ ಎನ್.ಮಾಲಿನಿ | ನಿರ್ದೇಶಕರು | 1 | 0 | 1 |
| 12 | ಶ್ರೀ ಎಂ.ದಿನೇಶ್ | ನಿರ್ದೇಶಕರು | 1 | 0 | 1 |
| 13 | ಶ್ರೀ ಹೆಚ್.ಕೆ.ಚಂದ್ರಪ್ಪ | ನಿರ್ದೇಶಕರು | 1 | 0 | 1 |
| 14 | ಶ್ರೀ ಎನ್.ವೆಂಕಟಾಚಲಂ | ನಿರ್ದೇಶಕರು | 1 | 0 | 1 |
| 15 | ಶ್ರೀ ಎನ್.ಗಿರೀಶ್ ಬಾಬು | ನಿರ್ದೇಶಕರು | 1 | 0 | 1 |

**ವ್ಯವಸ್ಥಾಪನಾ ಮಂಡಳಿ (Board of Management) ರಚನೆ**

ಭಾರತೀಯ ರಿಸರ್ವ್ ಬ್ಯಾಂಕಿನವರು ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ವಹಣೆಯಲ್ಲಿ ವೃತ್ತಿಪರತೆ ತರುವ ನಿಟ್ಟಿನಲ್ಲಿ ಅರ್ಹ ವಿದ್ಯಾರ್ಹತೆ ಹೊಂದಿರುವ ವ್ಯಕ್ತಿಗಳಿರುವ ವ್ಯವಸ್ಥಾಪನಾ ಮಂಡಳಿ (Board of Management) ಹೊಂದಿರಬೇಕೆಂದು ನಿರ್ದೇಶಿಸಿದ ಹಿನ್ನೆಲೆಯಲ್ಲಿ ಬ್ಯಾಂಕಿನ ಬೈಲಾ ಅನುಮೋದನೆ ಪಡೆದಿದೆ. ಈ ಮಂಡಳಿಯು ಬ್ಯಾಂಕಿನ ಮೇಲ್ವಿಚಾರಣೆಗೆ ಸಂಬಂಧಿಸಿದ ಅಗತ್ಯ ಹೂಡಿಕೆ, ಸಾಲ ಮತ್ತು ಮುಂಗಡ, ಸುಸ್ತಿ ವಸೂಲಾತಿ, ಸಿಬ್ಬಂದಿ ಇತ್ಯಾದಿ ನಿಯಮಾವಳಿ (Policies) ಗಳನ್ನು ರಚಿಸಿ ಜಾರಿಗೆ ತರುವಲ್ಲಿ ಅಗತ್ಯ ಪಾತ್ರ ವಹಿಸಲಿದೆ. ಈ ನಿಯಮಾವಳಿಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಡಿ ರಚಿತವಾಗಿ ಕಾಲಕಾಲಕ್ಕೆ ಪರಾಮರ್ಶೆ(Review)ಗೊಳ್ಳುವುದು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕಿನಲ್ಲಿ ಹಿಂದಿನ ಸಾಲಿನಿಂದ ವೃತ್ತಿಪರ ತಜ್ಞರನ್ನೊಳಗೊಂಡ ವ್ಯವಸ್ಥಾಪನಾ ಮಂಡಳಿ ರಚಿಸಿ ಕಾಲಕಾಲಕ್ಕೆ ಸಭೆ ನಡೆಸಲಾಗಿರುತ್ತದೆ. 2025–26ನೇ ಸಾಲಿಗೆ ವ್ಯವಸ್ಥಾಪನಾ ಮಂಡಳಿ ರಚಿಸಲು ಕ್ರಮವಿಡಲಾಗಿದೆ.

**Digitalisation ಹಾಗೂ ಗಣಕೀಕರಣಃ**

ಬ್ಯಾಂಕಿಂಗ್ ಕ್ಷೇತ್ರದ ತಂತ್ರಜ್ಞಾನವು ಹೊಸ ಹೊಸ ಆವಿಷ್ಕಾರದಿಂದ ವೇಗದಲ್ಲಿ ಮುನ್ನಡೆಯುತ್ತಿದೆ. ಅಂತೆಯೇ, ಬ್ಯಾಂಕಿಂಗ್ ವ್ಯವಸ್ಥೆಯು ಸಂಪೂರ್ಣ ಗಣಕೀಕರಣಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶಿಸಿದೆ. ಅದರಂತೆ ಬ್ಯಾಂಕಿಂಗ್ ವ್ಯವಹಾರದ ಪ್ರತಿಯೊಂದು ವಹಿವಾಟು ತಂತ್ರಾಂಶದಡಿ ಲಭ್ಯವಾಗುವ ರೀತಿಯಲ್ಲಿ ಕೋರ್ ಬ್ಯಾಂಕಿಂಗ್ ಸಿಸ್ಟಂ ಅನ್ನು ಅಳವಡಿಸಿ, ತಂತ್ರಾಂಶದ ಗುಣಮಟ್ಟ, ಹತೋಟಿ, ನಿಯಂತ್ರಣ ಅಂಶಗಳ ಬಗ್ಗೆ ಸೂಕ್ತ ಮಾರ್ಗಸೂಚಿಯನ್ನು ಪಾಲಿಸಲಾಗುತ್ತಿದೆ. ಬ್ಯಾಂಕಿಂಗ್ ಹಣಕಾಸು ವಹಿವಾಟಿನ ರಕ್ಷಣೆಗೆ ಪ್ರತ್ಯೇಕ ಸೈಬರ್ ಸೆಕ್ಯೂರಿಟಿ ಪಾಲಿಸಿಗಳನ್ನು ಜಾರಿಗೊಳಿಸಿ, ಬ್ಯಾಂಕಿನ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದೆ. ಈ ಬೆಳವಣಿಗೆಗಳು ಶೀಘ್ರ ನಗದು ವರ್ಗಾವಣೆಗೆ ಅನುಕೂಲಕವಾಗಲಿವೆ. ಹಾಲಿ RTGS/NEFT ಸೌಲಭ್ಯ ಮತ್ತು SMS, Balance Enquiry, ಎ.ಟಿ.ಎಂ ಗಳಂತಹ ಮೌಲ್ಯವರ್ಧಿತ ಸೇವೆಗಳು ಈಗಾಗಲೇ ಜಾರಿಯಲ್ಲಿದೆ.

ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಡಿಜಿಟಲೈಸೇಷನ್ ಸೌಲಭ್ಯಗಳಾದ ಮೊಬೈಲ್ ಬ್ಯಾಂಕಿಂಗ್, ಯುಪಿಐ ಪೇಮೆಂಟ್ಸ್ (POS/E-Com, GPay, PhonePe, Paytm), IMPS ಗಳ ಜಾರಿಗೆ ಅಗತ್ಯ ಲೈಸೆನ್ಸ್ ಪಡೆಯುವಲ್ಲಿ ಬ್ಯಾಂಕ್ ಯಶಸ್ವಿಯಾಗಿ ಡಿಜಿಟಲ್ ಸೌಲಭ್ಯಗಳನ್ನೂ ಸಹ ಜಾರಿಗೊಳಿಸಿದ್ದು ಗ್ರಾಹಕರುಗಳು ಇದರ ಸದುಪಯೋಗಿಸಿಕೊಳ್ಳಬೇಕೆಂದು ಕೋರುತ್ತೇವೆ. ಇದಲ್ಲದೇ ಬ್ಯಾಂಕ್ ತನ್ನದೇ ಆದ ವೆಬ್‌ಸೈಟ್ (www.gmcbank.net) ಹೊಂದಿದ್ದು, ಠೇವಣಿ/ಸಾಲ ಬಡ್ಡಿ ಹಾಗೂ ಇನ್ನಿತರ ವಿವರಗಳನ್ನು ಕಾಲಕಾಲಕ್ಕೆ ಜಾಲತಾಣದಲ್ಲಿ ಪ್ರಕಟಿಸುತ್ತಿದ್ದು, ಪರೀಶೀಲನೆಗೆ ಲಭ್ಯವಿದೆ. ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಯನ್ನೂ ಸಹ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುತ್ತಿದ್ದು, ಈ ಸಾಲಿನ ವರದಿಯನ್ನೂ ಸಹ ಸದಸ್ಯರುಗಳು ಜಾಲತಾಣದಲ್ಲಿ ಪರೀಶೀಲಿಸಬಹುದಾಗಿದೆ.

**ಸಮವರ್ತಿ, ತೆರಿಗೆ, ಜಿ.ಎಸ್.ಟಿ ಮತ್ತು ಶಾಸನಾತ್ಮಕ ಲೆಕ್ಕಪರಿಶೋಧನೆ :**

ಬ್ಯಾಂಕಿನ 2024–25ನೇ ಸಾಲಿನಲ್ಲಿ ಸಮವರ್ತಿ ಲೆಕ್ಕಪರಿಶೋಧನೆಯನ್ನು ಶ್ರೀ ರಾಘವೇಂದ್ರ ಆಚಾರ್ಯ ಸಿ ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರು ಹಾಗೂ ವಾರ್ಷಿಕ ಶಾಸನಾತ್ಮಕ ಲೆಕ್ಕಪರಿಶೋಧನೆಯನ್ನು ಮೆಃ ಎನ್‌ಎನ್‌ಆರ್ & ಕಂ., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರುಗಳು ನಿರ್ವಹಿಸಿರುತ್ತಾರೆ. ಸದರಿ ಸಾಲಿನ ಜಿ.ಎಸ್.ಟಿ ಆಡಿಟ್ ಹಾಗೂ ವಾರ್ಷಿಕ ತೆರಿಗೆ ಆಡಿಟ್ ನಿರ್ವಹಿಸಲು ಶ್ರೀ ಹೆಚ್.ಎಸ್.ಉಡುಪ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ನಿಯೋಜಿಸಲಾಗಿದೆ.

**2024–25ನೇ ಸಾಲಿನ ಲೆಕ್ಕಪರಿಶೋಧನಾ "ಎ" ದರ್ಜೆ ವರ್ಗೀಕರಣಃ**

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿನ ಪ್ರಗತಿಗಾಗಿ ಶ್ರಮವಹಿಸಿದ ಫಲದಿಂದಾಗಿ ಕಳೆದ ಸಾಲುಗಳಿಂದ ಮುಂದುವರಿದು 2024–25ನೇ ಸಾಲಿಗೂ ಬ್ಯಾಂಕಿನ ಲೆಕ್ಕಪರಿಶೋಧನಾ ವರ್ಗೀಕರಣ "ಎ" ದರ್ಜೆಗೆ ಬಂದಿರುವುದನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸಲು ಹರ್ಷಿಸುತ್ತೇವೆ. ಸದಸ್ಯರ ಸಹಕಾರದೊಂದಿಗೆ ಮುಂದಿನ ಸಾಲುಗಳಲ್ಲೂ ಸಹ ಇದನ್ನೇ ಮುಂದುವರಿಸಿಕೊಂಡು ಹೋಗುವ ಇಚ್ಛೆ ಆಡಳಿತ ಮಂಡಳಿಯದ್ದಾಗಿರುತ್ತದೆ.

ಬ್ಯಾಂಕಿನ 2024–25ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟ ಮೆಃ ಎನ್‌ಎನ್‌ಆರ್&ಕಂ., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರಿಗೆ ಧನ್ಯವಾದಗಳನ್ನರ್ಪಿಸುತ್ತೇವೆ. ಈ ಲೆಕ್ಕಪರಿಶೋಧನಾ ವರದಿಯಲ್ಲಿ ಲೆಕ್ಕಪರಿಶೋಧಕರು ಗುರುತಿಸಿರುವ ನ್ಯೂನತೆಗಳಿಗೆ ಆಡಳಿತ ಮಂಡಳಿಯವರ ಸಮಾಧಾನದೊಂದಿಗೆ ಸರ್ವಸದಸ್ಯರ ಸಭೆ ಅನುಮೋದನೆಗೆ ವಿಷಯ–07ರಲ್ಲಿ ಮಂಡಿಸಿದೆ.

**ಪ್ರಧಾನ ಕಛೇರಿ ಮೊದಲ ಮಹಡಿ ದುರಸ್ತಿ/ನವೀಕರಣ ಹಾಗೂ ಸಭಾ ಆವರಣ ನಿರ್ಮಾಣಃ**

ಕಳೆದ ಸರ್ವಸದಸ್ಯರ ಸಭೆಯ ತೀರ್ಮಾನದಂತೆ ಬ್ಯಾಂಕಿನ ದುರಸ್ತಿ/ಕಟ್ಟಡ ನವೀಕರಣಕ್ಕೆ ರೂ.1.00 ಕೋಟಿ ಮೊಬಲಗನ್ನು ಆಯವ್ಯಯದೊಂದಿಗೆ ಮಂಜೂರಾತಿ ಪಡೆಯಲಾಗಿತ್ತು. ಕಾರಣಾಂತರದಿಂದ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ. ಹಾಲಿ ಇದಕ್ಕೆ ಚಾಲನೆ ನೀಡಲು ಆಡಳಿತ ಮಂಡಳಿ ಸಿದ್ದತೆ ನಡೆಸಿ ಅಂದಾಜು ಆಯವ್ಯಯದಲ್ಲಿ ರೂ.80.00 ಲಕ್ಷ ಮೊಬಲಗನ್ನು ಕಾಯ್ದಿರಿಸಿದ್ದು, ಇದಕ್ಕಾಗಿ ತಾಂತ್ರಿಕ ತಜ್ಞರ ಸಮಿತಿ ರಚಿಸಿ ಕಾಮಗಾರಿ ಮೇಲ್ವಿಚಾರಣೆ ನಿರ್ವಹಿಸಲಿದ್ದು ಇದಕ್ಕೆ ಮಹಾಸಭೆ ಅನುಮೋದನೆ ನೀಡಬೇಕಾಗಿ ಕೋರಿದೆ.

**ಭಾರತೀಯ ರಿಸರ್ವ್ ಬ್ಯಾಂಕಿನ DoS.CO.ARG/SEC.01/08.91.001/2021-22, dtd.27.04.2021ರ ಪ್ರಕಾರ 2025–26ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ**

ತಿದ್ದುಪಡಿಗೊಂಡ ಬ್ಯಾಂಕಿಂಗ್ ಕಾಯಿದೆ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ 2025–26ರ ಅವಧಿಗೆ ಬ್ಯಾಂಕಿನ ಶಾಸನಾತ್ಮಕ ಲೆಕ್ಕಪರಿಶೋಧನೆ ಮಾಡಲು ಈ ಕೆಳಕಂಡ ಸಂಸ್ಥೆಯನ್ನು ಎರಡನೇ ಬಾರಿಗೆ ನೇಮಿಸಿ, ಅನುಮತಿ ಕೋರಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

**M/s NNR & Co.,**
Chartered Accountants (Reg. No.11162s),
No.162, 2nd Floor, Rajeshwari Complex, R.V.Road, Bangalore-560 004

ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯನ್ವಯ 2025–26ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಲಿದ್ದು ವಿಷಯ–14ರಲ್ಲಿ ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

**ಬ್ಯಾಂಕಿನ ಪ್ಯಾನಲ್ ವಕೀಲರುಃ**

| | | | |
|---|---|---|---|
| ಶ್ರೀ ಬಿ.ಎಸ್.ರಂಗಪ್ಪ | ಶ್ರೀ ಡಿ.ಪಿ.ಸುಬ್ಬಕೃಷ್ಣ | ಶ್ರೀ ಗಿರೀಶ್ ಬಿ.ಎನ್ | ಶ್ರೀ ಅಶ್ವತ್ ನಾರಾಯಣ |
| ಶ್ರೀ ಎ.ವೈ.ಎನ್.ಗುಪ್ತ | ಶ್ರೀ ಎಸ್.ಬಿ.ಮುಕ್ಕಣ್ಣಪ್ಪ | ಶ್ರೀ ಎಲ್.ಆರ್.ಶಶಿಕಾಂತ್ | ಶ್ರೀ ಎಂ.ಎನ್.ಮುನಿರೆಡ್ಡಿ |
| ಶ್ರೀ ಕೆ.ಎಸ್.ಶ್ರೀಕಾಂತ | ಶ್ರೀ ಎಲ್.ಎಸ್.ವೆಂಕಟಕೃಷ್ಣ | ಶ್ರೀ ಕೆ.ವಿ.ಲೋಕೇಶ್ | ಶ್ರೀ ಅರವಿಂದ್ ಬಾಬು |
| ಶ್ರೀ ವಿ.ಎನ್.ಶಿವಾನಂದ | ಶ್ರೀ ಹೆಚ್.ಎ.ಪ್ರಭಾಕರ್ | ಶ್ರೀಮತಿ ಮಂಜುಳ | ಶ್ರೀ ರಮೇಶ್ ಐತಾಳ್ |
| ಶ್ರೀ ಆರ್.ರಾಜೇಶ್ ತಿವಾರಿ | ಶ್ರೀ ಸಂದೇಶ್ ಟಿ.ಬಿ | ಶ್ರೀ ಸುಬ್ಬರಾಯ ಕಾರ್ವಿ | ಶ್ರೀ ಅನಂತನಾರಾಯಣ B.N |
| ಮೆಃ ಜಿ.ಕೆ.ಅಸೋಸಿಯೇಟ್ಸ್ | ಶ್ರೀ ಸಿ.ಎಸ್.ಸುಧೀರ್ ಅಸೋಸಿಯೇಟ್ | | |

**ಬ್ಯಾಂಕಿನ ಪ್ಯಾನಲ್ ಇಂಜೀನೀಯರ್ಸ್ಃ**

ಶ್ರೀ ಆರ್.ಜಗದೀಶ್ ಶ್ರೀ ಎಂ.ಆರ್.ಪುಟ್ಟರಾಜು ಶ್ರೀ ಎನ್.ರಾಜೇಂದ್ರನಾಥ್

ಶ್ರೀ ರವಿಶಂಕರ್ ಶ್ರೀ ಕಾರ್ತಿಕ್, ಮೆಃ ಆನಂದ್ ಇಂಜಿನಿಯರಿಂಗ್ ಶ್ರೀ ಕೆ.ಅನಂತರಾಂ

ಮೆಃ ಶ್ರೀಹರಿ ಅಸೋಸಿಯೇಟ್ಸ್

**ಬ್ಯಾಂಕಿನ ಆಭರಣ ಮೌಲ್ಯಮಾಪಕರುಃ** ಶ್ರೀ ಎಸ್.ಲಕ್ಷ್ಮಿನಾರಾಯಣ ರಾಜು ಶ್ರೀ ಎಂ.ರಂಗರಾಜು

**ಧನ್ಯವಾದಗಳುಃ**

ಭಾರತೀಯ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕ್ ವಿಭಾಗದ ಅಧಿಕಾರಿಗಳಿಗೆ, ಹೆಚ್.ಡಿ.ಎಫ್.ಸಿ, ಐಡಿಬಿಐ, ಅಪೆಕ್ಸ್ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ಬಿಡಿಸಿಸಿ ಬ್ಯಾಂಕ್ ಅಧಿಕಾರಿಗಳಿಗೆ, ಪ್ಯಾನಲ್ ವಕೀಲರುಗಳಿಗೆ, ಸಹಕಾರ ಇಲಾಖೆಯ ಅಧಿಕಾರಿಗಳಿಗೆ, ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್ ಮಹಾಮಂಡಳದ ಆಡಳಿತ ವರ್ಗದವರಿಗೆ, ಸಹಕಾರ ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳಿಗೆ, ಚಾರ್ಟರ್ಡ್ ಅಕೌಂಟೆಂಟ್ಸ್‌ರವರಾದ ಮೆಃ ಎನ್‌ಎನ್‌ಆರ್ & ಕಂ., ಮೆಃ ಹೆಚ್.ಎಸ್.ಉಡುಪ ಅಂಡ್ ಕಂ., ಶ್ರೀ ಸಿ.ಎ.ರಾಘವೇಂದ್ರ ಆಚಾರ್ಯ ಸಿ, ಮತ್ತು ಬ್ಯಾಂಕಿನ ಕಾನೂನು ಸಲಹೆಗಾರರು/ಮೌಲ್ಯಮಾಪಕರುಗಳಿಗೆ ಹಾಗೂ ಸಂಸ್ಥೆಯ ದೈನಂದಿನ ಚಟುವಟಿಕೆಯಲ್ಲಿ ಎಲ್ಲ ಕಾಲದಲ್ಲಿಯೂ ಸಾಕಷ್ಟು ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರುಗಳಿಗೆ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ, ಬೆಂಬಲ ನೀಡುತ್ತಿರುವ ಬ್ಯಾಂಕಿನ ಸದಸ್ಯರುಗಳಿಗೆ, ಗ್ರಾಹಕರುಗಳಿಗೆ, ಪ್ರಮುಖವಾಗಿ ಠೇವಣಿದಾರರುಗಳಿಗೆ ಹಾಗೂ ಪ್ರತ್ಯಕ್ಷ ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲರಿಗೂ ಆಡಳಿತ ಮಂಡಳಿ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇವೆ ಹಾಗೂ ತಾವುಗಳೆಲ್ಲರೂ ಇನ್ನೂ ಹೆಚ್ಚಿನ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ.

**ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು**
**ದಿ ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್,**
**ಚಾಮರಾಜಪೇಟೆ, ಬೆಂಗಳೂರು–560 018**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

## ನಂ.2 ಪಂಪಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು-560 018

## ದಿನಾಂಕ 1.04.2024 ರಿಂದ 31.03.2025ರ ವರೆಗಿನ ಲಾಭ ಮತ್ತು ನಷ್ಟದ ತಃಖ್ತೆ

| 31.03.2024 ರಲ್ಲಿದ್ದಂತೆ | ವೆಚ್ಚ | ಮೊಬಲಗು | ಮೊಬಲಗು 31.03.2025 | 31.03.2024 ರಲ್ಲಿದ್ದಂತೆ | ಆದಾಯ | ಮೊಬಲಗು | ಮೊಬಲಗು 31.03.2025 |
|---|---|---|---|---|---|---|---|
| | **ಬಡ್ಡಿಗಳ ಪಾವತಿ** | | | | **ಬಡ್ಡಿಗಳ ಜಮಾ** | | |
| **8,19,30,177.00** | ತೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು | | **7,87,91,767.05** | 10,80,36,249.00 | ಸಾಲಗಳ ಮೇಲೆ ಬಂದ ಬಡ್ಡಿ | 9,50,20,629.00 | |
| | | | | 1,67,29,061.00 | ಗುಂತಾಯಗಳ ಮೇಲಿನ ಬಡ್ಡಿ | 2,46,00,394.00 | |
| | **ವೇತನ ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ** | | | 4,61,46,999.80 | ಸರ್ಕಾರಿ ಭದ್ರತೆಗಳ ಮೇಲೆ ಬಂದ ಬಡ್ಡಿ | 4,57,88,000.00 | |
| 27,91,560.00 | ಸಿಬ್ಬಂದಿ ಭವಿಷ್ಯ ನಿಧಿ ಬ್ಯಾಂಕಿನ ವಂತಿಗೆ | 23,65,123.00 | | 7,96,388.00 | ಅವಧಿ ಪೂರ್ವ ಸಾಲ ಚುಕ್ತ ಶುಲ್ಕ | 6,58,133.00 | |
| 1,16,311.00 | ಇಪಿಎಫ್ ಆಡಳಿತ ವೆಚ್ಚ | 3,23,348.00 | | 2,50,000.00 | ಸರ್ಕಾರಿ ಭದ್ರತೆಗಳ ಮಾರಾಟದಿಂದ ಬಂದ ಲಾಭ | 0.00 | |
| 32,997.00 | ವಿಮಾ ನಿಧಿ | 26,807.00 | | **17,19,58,697.80** | | | **16,60,67,156.00** |
| 10,74,504.00 | ಎಲ್.ಐ.ಸಿ ಗ್ರೂಪ್ ಗ್ರಾಚ್ಯೂಯಿಟಿ ಯೋಜನೆ | 10,800.00 | | | | | |
| 19,93,950.50 | ಗಳಿಕೆ ರಜೆ ನಗದೀಕರಣ ಪಾವತಿ | 26,14,895.00 | | | **ದಲ್ಲಾಳಿ ವಿನಿಮಯ ಮತ್ತು ರುಸುಂ** | | |
| 2,76,83,594.00 | ಸಿಬ್ಬಂದಿ ವೇತನ | 2,30,58,762.00 | | 2,64,394.10 | ದಲ್ಲಾಳಿ | 2,50,001.56 | |
| 17,83,407.00 | ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಪಾವತಿ | 19,81,972.00 | | 8,06,699.14 | ಸಾಲ ಪರಿಶೀಲನಾ ಶುಲ್ಕ | 6,15,199.98 | |
| 1,70,800.14 | ಸಿಬ್ಬಂದಿ ಕ್ಷೇಮ ವೆಚ್ಚ | 2,09,947.00 | | 941.92 | NPCI ವೆಚ್ಚ ಬಂದಿರುವುದು | 569.52 | |
| **3,56,47,123.64** | | | **3,05,91,654.00** | **10,72,035.16** | | | **8,65,771.06** |
| | | | | | **ಇತರೆ ಆದಾಯಗಳು** | | |
| | **ನಿರ್ದೇಶಕರ ಸಭಾ ಭತ್ಯೆ** | | | 12,360.00 | ಎ.ಟಿ.ಎಂ ವೆಚ್ಚ NPCI | 11,354.40 | |
| **13,35,000.00** | ನಿರ್ದೇಶಕರ ಸಭಾ ಭತ್ಯೆ | | **10,04,000.00** | 16,94,915.00 | ಕಟ್ಟಡ ನಿರ್ವಹಣಾ ಶುಲ್ಕ ಬಂದಿರುವುದು | 16,94,915.00 | |
| | | | | 4,661.02 | ನಗದು ನಿರ್ವಹಣಾ ಶುಲ್ಕ | 0.00 | |
| | **ಬಾಡಿಗೆ ತೆರಿಗೆ ವಿಮೆ ವಿದ್ಯುಚ್ಛಕ್ತಿ ವೆಚ್ಚ** | | | 7,000.00 | CERSAI ಶುಲ್ಕ | 4,900.00 | |
| 1,06,634.00 | ಕಟ್ಟಡ ತೆರಿಗೆ | 96,210.00 | | 97,033.92 | ಸಾಲ ವಸೂಲಾತಿ ಶುಲ್ಕ | 14,491.54 | |
| 17,60,888.40 | ಡಿ.ಐ.ಸಿ.ಜಿ.ಸಿ ವಿಮೆ ಕಂತು | 17,26,660.20 | | 29,545.75 | ಇತರೆ ಆದಾಯ | 17,890.61 | |
| 5,65,843.90 | ವಿಮೆ ಮತ್ತು ತೆರಿಗೆ | 4,82,504.10 | | 0.00 | ನೇಮಕಾತಿ ಅರ್ಜಿ ಶುಲ್ಕ | 1,52,542.70 | |
| 6,40,552.00 | ವಿದ್ಯುಚ್ಛಕ್ತಿ ವೆಚ್ಚ | 6,65,559.00 | | 2,64,000.00 | ಭದ್ರತಾ ಕಪಾಟುಗಳ ಬಾಡಿಗೆ | 2,54,250.00 | |
| 7,500.00 | ಬ್ಯಾಂಕಿನ ವೃತ್ತಿ ತೆರಿಗೆ | 7,500.00 | | 6,89,444.58 | ಫಾರಂಗಳ ಮಾರಾಟ ಮತ್ತು ಇತರೆ ಆದಾಯ | 6,19,909.70 | |
| 15,20,393.00 | ಶಾಖೆಗಳ ಬಾಡಿಗೆ | 16,20,404.00 | | 0.00 | ಎಟಿಎಂ ಕಾರ್ಡ್ ಹಾಗೂ ಇತರೆ ಸೇವಾ ಶುಲ್ಕ | 62,154.36 | |
| 55,177.32 | ನೀರಿನ ವೆಚ್ಚ | 48,382.34 | | 3,400.48 | ಷೇರು ಪ್ರವೇಶ ಶುಲ್ಕ | 504.56 | |
| **46,56,988.62** | | | **46,47,219.64** | 1,40,996.34 | ಷೇರು ಶುಲ್ಕ | 76,800.84 | |
| | **ಅಂಚೆ ಮತ್ತು ದೂರವಾಣಿ ವೆಚ್ಚ** | | | **29,43,357.09** | | | **29,09,713.71** |
| 13,400.00 | ಅಂಚೆ ವೆಚ್ಚ | 18,711.00 | | | | | |
| 2,68,635.62 | ದೂರವಾಣಿ ವೆಚ್ಚ | 2,22,310.00 | | | | | |
| **2,82,035.62** | | | **2,41,021.00** | | | | |
| | **ಲೆಕ್ಕಪರಿಶೋಧಕರ ವೆಚ್ಚ** | | | | | | |
| 4,05,000.00 | ಲೆಕ್ಕಪರಿಶೋಧನಾ ವೆಚ್ಚ | 3,65,500.00 | | | | | |
| 2,50,000.00 | ಶಾಸನಬದ್ಧ ಲೆಕ್ಕಪರಿಶೋಧನೆ | 3,00,000.00 | | | | | |
| 80,000.00 | ಟ್ಯಾಕ್ಸ್ ಆಡಿಟ್ ಶುಲ್ಕ | 85,000.00 | | | | | |
| **7,35,000.00** | | | **7,50,500.00** | | | | |

| | | | | | | | |
|---|---|---|---|---|---|---|---|
| | **ಸವಕಳಿ** | | | | | | |
| **24,78,314.46** | **ಸವಕಳಿ ಖಾತೆ** | | **21,46,248.00** | | | | |
| | **ಮುದ್ರಣ ಮತ್ತು ಲೇಖನ ಸಾಮಗ್ರಿ** | | | | | | |
| 2,786.92 | ಗಣಕಯಂತ್ರ ಸಾಮಗ್ರಿ | 4,700.00 | | | | | |
| 3,71,092.40 | ಮುದ್ರಣ ಮತ್ತು ಲೇಖನ ಸಾಮಗ್ರಿ | 5,39,380.82 | | | | | |
| **3,73,879.32** | | | **5,44,080.82** | | | | |
| | **ಇತರೆ ಖರ್ಚು** | | | | | | |
| 1,93,142.86 | ಜಾಹಿರಾತು ವೆಚ್ಚ | 4,48,838.10 | | | | | |
| 9,94,676.50 | ಗಣಕಯಂತ್ರ ಮತ್ತಿತರ ವಾರ್ಷಿಕ ನಿರ್ವಹಣೆ | 13,99,188.48 | | | | | |
| 1,86,029.56 | ಎ.ಟಿ.ಎಂ.ವೆಚ್ಚ | 16,72,191.54 | | | | | |
| 1,51,822.24 | ಬ್ಯಾಂಕಿನ ವಾಹನ ದುರಸ್ತಿ ಮತ್ತು ನಿರ್ವಹಣೆ | 1,69,408.86 | | | | | |
| 3,11,751.00 | ಕಟ್ಟಡ ದುರಸ್ತಿ ಮತ್ತು ನಿರ್ವಹಣೆ | 76,570.40 | | | | | |
| 3,78,725.82 | ಕೇಂದ್ರ ಸರಕು ಮತ್ತು ಸೇವಾ ತೆರಿಗೆ 50% Write Off | 1,84,233.94 | | | | | |
| 3,827.50 | ಬೇರೆ ಬ್ಯಾಂಕುಗಳು ವಿಧಿಸಿದ ಖರ್ಚು | 11,631.00 | | | | | |
| 0.00 | ಚಾರ್ಜಸ್ ಜನರಲ್ | 1,600.00 | | | | | |
| 47,000.00 | ದಾನಗಳು | 90,000.00 | | | | | |
| 1,89,836.50 | ಕ್ಲಿಯರಿಂಗ್ ಹೌಸ್ ಖರ್ಚು | 1,87,602.50 | | | | | |
| 62,01,661.00 | ಪಿಗ್ಮಿ ಠೇವಣಿ ಮೇಲಿನ ದಲ್ಲಾಳಿ | 66,85,258.00 | | | | | |
| 80,583.22 | ಗಣಕಯಂತ್ರ ನಿರ್ವಹಣೆ | 53,523.50 | | | | | |
| 2,45,288.00 | ಓಡಾಟ ವೆಚ್ಚ | 1,72,521.00 | | | | | |
| 0.00 | ಚುನಾವಣಾ ವೆಚ್ಚ | 17,73,374.60 | | | | | |
| 11,01,217.66 | ಸರ್ವಸದಸ್ಯರ ಸಭೆ ವೆಚ್ಚ | 22,27,214.00 | | | | | |
| 44,110.00 | ಗೌರವಧನ ಹಾಗೂ ತರಬೇತಿ ವೆಚ್ಚ | 17,500.00 | | | | | |
| 3,40,419.80 | ಅಂತರರಾಜ್ಯ ಸರಕು ಮತ್ತು ಸೇವಾ ತೆರಿಗೆ 50% Write Off | 2,67,064.11 | | | | | |
| 2,92,000.00 | ಕಾನೂನು ವೆಚ್ಚ | 3,93,900.00 | | | | | |
| 0.00 | ಸಾಲದ ಉಲ್ಲೇಖದ ಶುಲ್ಕಗಳು | 2,500.00 | | | | | |
| 2,30,000.00 | ಸದಸ್ಯರ ಮರಣ ಪರಿಹಾರ | 3,60,000.00 | | | | | |
| 14,65,500.00 | ಸದಸ್ಯರ ಕ್ಷೇಮ ವೆಚ್ಚ | 8,63,000.00 | | | | | |
| 80,398.49 | ಇತರೆ ವೆಚ್ಚ | 32,088.32 | | | | | |
| 127.81 | NPCI ವೆಚ್ಚ | 10.36 | | | | | |
| 6,53,536.18 | ಕಛೇರಿ ನಿರ್ವಹಣೆ | 7,72,291.26 | | | | | |
| 1,62,978.00 | ಪೂಜಾ ವೆಚ್ಚ | 1,46,470.00 | | | | | |
| 8,37,463.00 | ವೃತ್ತಿ ಶುಲ್ಕ | 5,81,675.00 | | | | | |
| 1,71,919.50 | ಉಪಹಾರ ವೆಚ್ಚ | 1,49,223.00 | | | | | |
| 2,68,978.00 | ಸಿಬ್ಬಂದಿ ಉಪಹಾರ ವೆಚ್ಚ | 2,57,296.00 | | | | | |
| 11,23,337.88 | ಭದ್ರತಾ ಸಿಬ್ಬಂದಿ ವೆಚ್ಚ | 11,33,911.26 | | | | | |
| 3,78,725.82 | ರಾಜ್ಯ ಸರಕು ಮತ್ತು ಸೇವಾ ತೆರಿಗೆ 50% Write Off | 1,84,233.94 | | | | | |
| 89,255.90 | ಚಂದಾ ಹಾಗೂ ನವೀಕರಣ | 1,33,703.20 | | | | | |
| 44,777.46 | ವೆಬ್‌ಸೈಟ್ ವೆಚ್ಚ | 2,657.56 | | | | | |
| 6,665.00 | ಜೆರಾಕ್ಸ್ ವೆಚ್ಚ | 11,137.00 | | | | | |
| **1,62,75,754.70** | | | **2,04,61,816.93** | | | | |
| **3,22,59,816.69** | ಕ್ರೂಢೀಕೃತ ಲಾಭ C/d | | **3,06,64,333.33** | | | | |
| **17,59,74,090.05** | ಒಟ್ಟು | | **16,98,42,640.77** | **17,59,74,090.05** | ಒಟ್ಟು | | **16,98,42,640.77** |

## Profit & Loss Appropriation Account

| | | | | | | | |
|---|---|---|---|---|---|---|---|
| 62,06,946.00 | ಆದಾಯ ಕರ | | 72,52,315.00 | 3,22,59,816.69 | ಕ್ರೂಢೀಕೃತ ಲಾಭ B/d | | 3,06,64,333.33 |
| | ಕಾಯ್ದಿರಿಸಿರುವುದು | | | | ನಿಧಿಗಳ ಬಳಕೆ | | |
| 25,90,000.00 | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ ಶೇ.8.5 | 27,00,000.00 | | 0.00 | EL Provision Written Back | 26,14,895.00 | |
| 1,36,218.00 | ಸಿಬ್ಬಂದಿ ಗಳಿಕೆ ರಜೆ ನಗದೀಕರಣ | 18,02,045.00 | | 17,83,407.00 | ಲಾಭದ ವಿಲೇವಾರಿ ಎಕ್ಸ್‌ಗ್ರೇಷಿಯಾ | 19,81,972.00 | |
| 27,26,218.00 | | | 45,02,045.00 | 21,06,443.00 | ನಿಧಿಗಳ ಬಳಕೆ ಲಾಭದ ವಿಲೇವಾರಿಯಿಂದ | 31,00,785.10 | |
| | | | | 38,89,850.00 | | | 76,97,652.10 |
| 2,72,16,502.69 | ನಿವ್ವಳ ಲಾಭ | | 2,66,07,625.43 | | | | |
| 3,61,49,666.69 | ಒಟ್ಟು | | 3,83,61,985.43 | 3,61,49,666.69 | ಒಟ್ಟು | | 3,83,61,985.43 |

# ದಿನಾಂಕ 31.03.2025ರಂದು ಇದ್ದಂತೆ ಬ್ಯಾಂಕಿನ ಆಸ್ತಿ-ಜವಾಬ್ದಾರಿ ತಃಖ್ತೆ

| 31.03.2024 ರಲ್ಲಿದ್ದಂತೆ | ಬಂಡವಾಳ ಹಾಗೂ ಜವಾಬ್ದಾರಿಗಳು | ಮೊಬಲಗು ರೂ. ಪೈ | ಮೊಬಲಗು ರೂ. ಪೈ 31.03.2025 | 31.03.2024 ರಲ್ಲಿದ್ದಂತೆ | ಆಸ್ತಿ ಹಾಗೂ ಸ್ವತ್ತುಗಳು | ಮೊಬಲಗು ರೂ. ಪೈ | ಮೊಬಲಗು ರೂ. ಪೈ 31.03.2025 |
|---|---|---|---|---|---|---|---|
| | ಷೇರು ಬಂಡವಾಳ | | | 1,51,33,486.00 | ನಗದು | | 1,94,53,906.00 |
| 8,01,17,635.00 | ಸದಸ್ಯರು | 7,99,67,241.25 | | | | | |
| 46,96,900.00 | ಅಸೋಸಿಯೇಟ್ ಸದಸ್ಯರು | 41,55,900.00 | | | ಇತರೆ ಬ್ಯಾಂಕಿನಲ್ಲಿರುವ ಶಿಲ್ಕುಗಳು | | |
| 3,800.00 | ನಾಮಮಾತ್ರ ಸದಸ್ಯರು | 3,800.00 | | 21,42,098.82 | ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆ | 47,45,541.17 | |
| 8,48,18,335.00 | | | 8,41,26,941.25 | 41,97,413.00 | ಬಿಡಿಸಿಸಿ ಬ್ಯಾಂಕ್ ಚಾಲ್ತಿ ಖಾತೆ | 1,51,90,861.00 | |
| | ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು | | | 2,06,64,197.19 | ಹೆಚ್.ಡಿ.ಎಫ್.ಸಿ ಬ್ಯಾಂಕ್ ಚಾಲ್ತಿ ಖಾತೆ | 16,06,368.88 | |
| 24,30,38,886.00 | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 24,57,38,886.00 | | 73,71,051.63 | ಹೆಚ್.ಡಿ.ಎಫ್.ಸಿ ಎ.ಟಿ.ಎಂ ಖಾತೆ | 10,65,74,993.18 | |
| 3,87,81,914.00 | ಕಟ್ಟಡ ನಿಧಿ | 3,87,81,914.00 | | 5,15,72,841.17 | ಐಡಿಬಿಐ ಬ್ಯಾಂಕ್ ಚಾಲ್ತಿ ಖಾತೆ | 7,05,08,265.90 | |
| 1,00,01,945.00 | ಷೇರು ನಷೆ ಸಮತೋಲನ ನಿಧಿ | 1,00,01,945.00 | | 2,29,94,952.85 | ಭಾರತೀಯ ರಿಸರ್ವ್ ಬ್ಯಾಂಕ್ ಚಾಲ್ತಿ ಖಾತೆ | 2,38,78,260.80 | |
| 1,62,18,471.00 | ಗುಂತಾಯಗಳ ಸವಕಳಿ ನಿಧಿ | 1,62,18,471.00 | | 76,83,283.16 | ಭಾರತೀಯ ಸ್ಟೇಟ್ ಬ್ಯಾಂಕ್ ರಾಜಾಜಿನಗರ ಶಾಖೆ | 81,14,331.16 | |
| 3,76,22,257.00 | ಗುಂತಾಯಗಳ ವಿರಳಿತ ನಿಧಿ | 3,76,22,257.00 | | 11,66,25,837.82 | | | 23,06,18,622.09 |
| 29,50,000.00 | ಗೃಹ ಸಾಲಗಳ ವಿಶೇಷ ನಿಧಿ | 29,50,000.00 | | | | | |
| 34,00,000.00 | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 34,00,000.00 | | | | | |
| 26,40,52,456.88 | ಆಪದ್ಧನ ನಿಧಿ | 26,91,87,016.57 | | | ಹೂಡಿಕೆ ಮತ್ತು ತೇವಣಿಗಳು | | |
| 61,60,65,929.88 | | | 62,39,00,489.57 | 50,00,000.00 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ ನಿಶ್ಚಿತ ತೇವಣಿ | 50,00,000.00 | |
| | | | | 1,56,73,116.49 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ ಆಪದ್ಧನ ನಿಧಿ | 1,56,73,116.49 | |
| | ಇತರೆ ನಿಧಿಗಳು | | | 2,00,00,000.00 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ (ಶಾಖೆಗಳ ಹೂಡಿಕೆ) | 2,00,00,000.00 | |
| 23,30,620.32 | ಪ್ರಚಾರ ನಿಧಿ | 18,81,782.22 | | 2,87,15,007.00 | ಬೆ.ಜಿ. ಮತ್ತು ಗ್ರಾ.ಜಿ.ಕೇಂದ್ರ ಸಹಕಾರ ಬ್ಯಾಂಕ್ ಷೇರು | 7,15,007.00 | |
| 1,00,51,796.64 | ಬ್ಯಾಂಕಿನ ಸದಸ್ಯರ ಕ್ಷೇಮ ನಿಧಿ | 83,20,162.64 | | 49,28,32,500.00 | ಸರ್ಕಾರಿ ಭದ್ರತಾ ತೇವಣಿ (ಹೆಲ್ಡ್ ಫಾರ್ ಸೇಲ್) | 49,28,32,500.00 | |
| 24,34,465.00 | ದಾನಗಳ ನಿಧಿ | 23,44,465.00 | | 20,80,00,000.00 | ಸರ್ಕಾರಿ ಭದ್ರತಾ ತೇವಣಿ (ಹೆಲ್ಡ್ ಟು ಮೆಚ್ಯುರಿಟಿ) | 20,80,00,000.00 | |
| 98,31,247.00 | ಮರಣೋತ್ತರ ಪರಿಹಾರ ನಿಧಿ | 96,69,247.00 | | 1,32,07,226.00 | ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಶ್ಚಿತ ತೇವಣಿ | 1,39,04,506.00 | |
| 2,97,80,446.00 | ಮಹೋತ್ಸವ ನಿಧಿ | 2,99,78,446.00 | | 35,00,00,000.00 | ಕರೆ ತೇವಣಿ ಹೂಡಿಕೆಗಳು | 26,00,00,000.00 | |
| 55,81,000.00 | ಮರ್ಕೆಂಟೈಲ್ ಬ್ಯಾಂಕ್ ಹೂಡಿಕೆ-ನಿಧಿ ಕಾಯ್ದಿರಿಸಿದ್ದು | 55,81,000.00 | | 0.00 | SIDBI MSE Refinance Fund 2023-24 | 40,51,000.00 | |
| 1,20,48,198.92 | ಸಿಬ್ಬಂದಿ ಕ್ಷೇಮ ನಿಧಿ | 1,20,36,251.92 | | 55,81,000.00 | ಬೆಂಗಳೂರು ಮರ್ಕೆಂಟೈಲ್ ಬ್ಯಾಂಕ್ | 55,81,000.00 | |
| 7,20,57,773.88 | | | 6,98,11,354.78 | 1,13,90,08,849.49 | | | 1,02,57,57,129.49 |

| | | | | | | | |
|---|---|---|---|---|---|---|---|
| | **ತೇವಣಿ ಹಾಗೂ ಇತರೆ ಖಾತೆಗಳು** | | | | **ಸಾಲಗಳು ಮತ್ತು ಮುಂಗಡಗಳು** | | |
| 2,50,75,136.00 | ಅವಧಿ ಮೀರಿದ ನಗದು ಸರ್ಟಿಫಿಕೇಟ್ | 2,55,09,648.00 | | | **ಅಲ್ಪಾವಧಿ ಭದ್ರತಾ ಸಾಲ** | | |
| 2,520.00 | ಅವಧಿ ಮೀರಿದ ನಗದು ಸರ್ಟಿಫಿಕೇಟ್ (ಖಾತರಿ ತೇವಣಿ) | 2,520.00 | | 492.00 | ಬಡವರ ಬಂಧು | 0.00 | |
| 45,16,00,672.00 | ನಗದು ಸರ್ಟಿಫಿಕೇಟ್ | 41,25,87,481.00 | | 1,17,99,632.30 | ಓಡಿ ಖಾತೆ-I (ಜಮಾ) | 57,62,313.68 | |
| 492.00 | ಬಡವರ ಬಂಧು (ಜಮಾ) | 0.00 | | 9,68,357.67 | ಓಡಿ ಖಾತೆ-III (ಜಮಾ) | 5,51,855.99 | |
| 1,17,99,632.30 | ಓಡಿ ಖಾತೆ-I (ಜಮಾ) | 57,62,313.68 | | 0.00 | ವಿದ್ಯಾಭ್ಯಾಸ ಸಾಲ | 1,41,485.00 | |
| 9,68,357.67 | ಓಡಿ ಖಾತೆ-III (ಜಮಾ) | 5,51,855.99 | | 1,95,000.00 | ಸಿಬ್ಬಂದಿ ಹಬ್ಬದ ಮುಂಗಡ | 1,20,500.00 | |
| 3,70,94,503.92 | ಚಾಲ್ತಿ ಖಾತೆ-I | 4,26,60,965.00 | | 1,25,668.00 | ಬಡವರ ಬಂಧು ಓಡಿ ಖಾತೆ | 1,18,060.00 | |
| 5,38,52,526.15 | ಚಾಲ್ತಿ ಖಾತೆ-III | 5,44,66,142.81 | | 8,01,03,776.61 | ಓಡಿ ಖಾತೆ-I | 8,61,35,511.62 | |
| 47,20,20,362.00 | ನಿಶ್ಚಿತ ತೇವಣಿ | 44,48,67,211.00 | | 4,76,10,964.56 | ಓಡಿ ಖಾತೆ-III | 5,88,20,719.26 | |
| 94,04,184.00 | ಅವಧಿ ಮೀರಿದ ನಿಶ್ಚಿತ ತೇವಣಿ | 90,75,304.00 | | 42,41,127.00 | ನಗದು ಸರ್ಟಿಫಿಕೇಟ್ ಆಧಾರ ಸಾಲ | 20,34,081.00 | |
| 12,84,61,715.00 | ಪಿಗ್ಮಿ ತೇವಣಿ | 13,05,96,152.00 | | 48,55,644.00 | ನಿಶ್ಚಿತ ತೇವಣಿ ಆಧಾರ ಸಾಲ | 45,95,496.00 | |
| 1,72,813.31 | ಅವಧಿ ಮೀರಿದ ನಿಶ್ಚಿತ ಖಾತರಿ ತೇವಣಿ (APMC) | 1,72,813.31 | | 10,39,005.00 | ಪಿಗ್ಮಿ ತೇವಣಿ ಆಧಾರ ಸಾಲ | 38,28,970.00 | |
| 94,68,707.92 | ಸಂಚಿತ ತೇವಣಿ | 96,72,366.60 | | **15,09,39,667.14** | | **16,21,08,992.55** | |
| 24,19,48,562.41 | ಉಳಿತಾಯ ಖಾತೆ | 27,02,47,660.03 | | | | | |
| **1,44,18,70,184.68** | | | **1,40,61,72,433.42** | | **ಮಧ್ಯಮಾವಧಿ ಭದ್ರತಾ ಸಾಲ** | | |
| | | | | 50,64,853.00 | ಚಿನ್ನಾಭರಣ ಸಾಲ | 66,14,489.00 | |
| | **ಪಾವತಿಸಬೇಕಾದ ಬಡ್ಡಿ** | | | 3,45,65,201.00 | ಗೃಹ ನಿರ್ಮಾಣ ಸಾಲ | 3,24,66,043.00 | |
| 38,13,555.00 | ನಿಶ್ಚಿತ ತೇವಣಿ ಮೇಲೆ | 38,98,314.00 | | 2,44,374.00 | ಕಂತು ಸಾಲ | 5,19,706.00 | |
| 80,394.32 | ಅವಧಿ ಮೀರಿದ ನಿಶ್ಚಿತ ಖಾತರಿ ತೇವಣಿ (APMC) | 80,394.32 | | 52,66,918.00 | ಟ್ರೇಡ್ ಲೋನ್ ಓಡಿ ಸೌಲಭ್ಯ | 66,85,220.00 | |
| 19,12,479.00 | ಅವಧಿ ಮೀರಿದ ನಿಶ್ಚಿತ ತೇವಣಿ | 19,12,479.00 | | 63,16,950.00 | ಸಿಬ್ಬಂದಿ ಕಂತು ಸಾಲ | 1,08,87,068.00 | |
| 37,19,292.00 | ಅವಧಿ ಮೀರಿದ ನಗದು ಸರ್ಟಿಫಿಕೇಟ್ | 37,19,292.00 | | 4,80,14,281.47 | ದಾವಾ ದಾಖಲು ಸಾಲ | 4,80,14,281.47 | |
| 19,10,696.00 | ಪಿಗ್ಮಿ ತೇವಣಿ ಮೇಲೆ | 20,30,595.00 | | 69,04,94,488.74 | ಸ್ಥಿರಾಸ್ತಿಗಳ ಆಧಾರ ಸಾಲ | 65,29,78,794.64 | |
| 28,57,084.00 | ನಿಶ್ಚಿತ ತೇವಣಿ ಮೇಲೆ (ನಗದು) | 29,43,162.00 | | 1,07,21,783.00 | ಆಧಾರ ರಹಿತ ಸಾಲ | 1,27,42,021.00 | |
| **1,42,93,500.32** | | | **1,45,84,236.32** | 61,12,590.00 | ವಾಹನ ಸಾಲ | 63,99,708.00 | |
| | | | | **80,68,01,439.21** | | **77,73,07,331.11** | |
| | | | | **95,77,41,106.35** | | | **93,94,16,323.66** |
| | **ಶಾಖಾ ಹೊಂದಾಣಿಕೆಗಳು (ಕಾಂಟ್ರಾ)** | | | | **ಶಾಖೆಗಳ ಹೊಂದಾಣಿಕೆಗಳು (ಕಾಂಟ್ರಾ)** | | |
| 36,68,66,246.65 | ಚಾಮರಾಜಪೇಟೆ ಶಾಖೆ | 39,90,49,274.68 | | 36,68,64,948.65 | ಚಾಮರಾಜಪೇಟೆ ಶಾಖೆ | 39,90,49,274.68 | |
| 74,03,079.85 | ಯಶವಂತಪುರ ಶಾಖೆ | -4,32,13,994.86 | | 74,03,079.85 | ಯಶವಂತಪುರ ಶಾಖೆ | -4,32,13,994.86 | |
| 6,18,34,502.70 | ಹಳೇತರಗುಪೇಟೆ ಶಾಖೆ | 7,06,38,940.22 | | 6,18,34,502.70 | ಹಳೇತರಗುಪೇಟೆ ಶಾಖೆ | 7,06,38,940.22 | |
| **43,61,03,829.20** | | | **42,64,74,220.04** | **43,61,02,531.20** | | | **42,64,74,220.04** |
| **51,95,285.00** | **ಏಕಕಾಲಿಕ ಸಾಲ ತೀರುವಳಿ ಯೋಜನೆ ಬಾಬ್ತು - ವಸೂಲಾಗಬೇಕಾದ್ದು ಕಾಂಟ್ರಾ** | | **51,95,285.00** | **51,95,285.00** | **ಏಕಕಾಲಿಕ ಸಾಲ ತೀರುವಳಿ ಯೋಜನೆ ಬಾಬ್ತು - ವಸೂಲಾಗಬೇಕಾದ್ದು ಕಾಂಟ್ರಾ** | | **51,95,285.00** |
| | **ಅನುತ್ಪಾದಕ ಸಾಲಗಳ ಮೇಲಿನ ಬಡ್ಡಿ** | | | | **ಅನುತ್ಪಾದಕ ಸಾಲಗಳ ಮೇಲಿನ ಬಡ್ಡಿ** | | |
| 51,92,98,354.38 | ಕೊಡಬೇಕಾದ್ದು (ಕಾಂಟ್ರಾ) | 58,84,54,930.38 | | 51,92,98,354.38 | ಬರಬೇಕಾದ್ದು (ಕಾಂಟ್ರಾ) | 58,84,54,930.38 | |
| 56,371.00 | ಕೊಡಬೇಕಾದ್ದು (ಬಡವರ ಬಂಧು) | 64,475.00 | | 56,371.00 | ಬರಬೇಕಾದ್ದು (ಬಡವರ ಬಂಧು) | 64,475.00 | |
| **51,93,54,725.38** | | | **58,85,19,405.38** | **51,93,54,725.38** | | | **58,85,19,405.38** |

| | | | | | | | |
|---|---|---|---|---|---|---|---|
| | | | | **1,06,84,324.34** | ಸಾಲಗಳ ಮೇಲಿನ ಇತರೆ ವೆಚ್ಚಗಳು | | **1,27,98,244.14** |
| | | | | **54,73,892.00** | ಸಾಲಗಳ ಕಾನೂನು ವೆಚ್ಚ | | **56,65,263.00** |
| | | | | **12,180.00** | ಪ್ರಧಾನ ಕಛೇರಿ ನಿವೇಶನ | | **12,180.00** |
| | ಇತರೆ ಜವಾಬ್ದಾರಿಗಳು | | | | ಪ್ರಧಾನ ಕಛೇರಿಯ ಕಟ್ಟಡ | | |
| 2,03,341.54 | ಕೇಂದ್ರ ಸರಕು ಮತ್ತು ಸೇವಾ ತೆರಿಗೆ Output Tax | 3,55,349.03 | | | ಹಿಂದಿನ ಸಾಲಿನ ಸವಕಳಿ ಜಾತ | 96,95,302.00 | |
| 1,01,599.35 | ಸಿಬಿಲ್ ವೆಚ್ಚ ಕೊಡಬೇಕಾದ್ದು | 1,29,755.98 | | | ಪ್ರಸಕ್ತ ಸಾಲಿನ ಸವಕಳಿ (-) | 4,85,374.00 | |
| 32,851.00 | ಕ್ಲಿಯರಿಂಗ್ ಅಮಾನತ್ | 35,851.00 | | **96,95,302.00** | ಸವಕಳಿ ಜಾತ | | **92,09,928.00** |
| 92,72,738.00 | ಕೊಡತಕ್ಕ ಷೇರು ನಫೆ | 1,51,86,536.00 | | | | | |
| 295.76 | ಅಂತರರಾಜ್ಯ ಸರಕು ಮತ್ತು ಸೇವಾ ತೆರಿಗೆ Output Tax | 295.76 | | | **ಗೋಲ್ಡನ್ ಜ್ಯೂಬಿಲಿ ಕಟ್ಟಡ** | | |
| 7,43,677.00 | ಮೂಲದಲ್ಲಿ ಕಟಾಯಿಸಿದ ಆದಾಯ ತೆರಿಗೆ | 3,45,530.50 | | | ಹಿಂದಿನ ಸಾಲಿನ ಸವಕಳಿ ಜಾತ | 48,292.00 | |
| 61,173.00 | ಎಲ್.ಐ.ಸಿ | 49,574.00 | | | ಪ್ರಸಕ್ತ ಸಾಲಿನ ಸವಕಳಿ (-) | 2,415.00 | |
| 9,82,970.00 | ಕೊಡತಕ್ಕ ಪೇ-ಆರ್ಡರ್‌ಗಳು | 65,28,062.00 | | **48,292.00** | ಸವಕಳಿ ಜಾತ | | **45,877.00** |
| 7,000.00 | ಸಿಬ್ಬಂದಿ ವೃತ್ತಿ ತೆರಿಗೆ | 5,800.00 | | | | | |
| 1,92,000.00 | ಆಂತರಿಕ ಲೆಕ್ಕಪರಿಶೋಧನಾ ಶುಲ್ಕ ಕಾಯ್ದಿರಿಸಿದ್ದು | 95,000.00 | | | ಯಶವಂತಪುರ ಶಾಖಾ ಒಳಾಂಗಣಗಳು | | |
| 94,34,851.00 | ಸಿಬ್ಬಂದಿ ಗಳಿಕೆ ರಜೆ ಕಾಯ್ದಿರಿಸಿದ್ದು | 86,22,001.00 | | | ಹಿಂದಿನ ಸಾಲಿನ ಸವಕಳಿ ಜಾತ | 12,48,569.68 | |
| 39,855.00 | ವಿದ್ಯುಚ್ಛಕ್ತಿ ಬಿಲ್ ಕಾಯ್ದಿರಿಸಿದ್ದು | 47,000.00 | | | ಪ್ರಸಕ್ತ ಸಾಲಿನ ಸವಕಳಿ (-) | 62,429.00 | |
| 2,50,000.00 | ಸನ್ನದು ಲೆಕ್ಕಪರಿಶೋಧನಾ ಶುಲ್ಕ ಕಾಯ್ದಿರಿಸಿದ್ದು | 2,50,000.00 | | **12,48,569.68** | ಸವಕಳಿ ಜಾತ | | **11,86,140.68** |
| 85,000.00 | ಟ್ಯಾಕ್ಸ್ ಆಡಿಟ್ ಶುಲ್ಕ ಕಾಯ್ದಿರಿಸಿದ್ದು | 85,000.00 | | | | | |
| 6,700.50 | ದೂರವಾಣಿ ವೆಚ್ಚ ಕಾಯ್ದಿರಿಸಿದ್ದು | 7,000.00 | | | ಪೀಠೋಪಕರಣ ಮತ್ತು ಮರಮುಟ್ಟುಗಳು | | |
| 6,586.82 | ನೀರು ಸರಬರಾಜು ಬಿಲ್ ಕಾಯ್ದಿರಿಸಿದ್ದು | 500.00 | | | ಹಿಂದಿನ ಸಾಲಿನ ಸವಕಳಿ ಜಾತ | 22,42,897.00 | |
| 17,98,970.00 | ಕಲಂ 64ರನ್ವಯ ವಸೂಲಾತಿ | 18,10,970.00 | | | ಪ್ರಸಕ್ತ ಸಾಲಿನಲ್ಲಿ ಖರೀದಿಸಿದ್ದು (+) | 38,600.00 | |
| 2,03,341.54 | ರಾಜ್ಯ ಸರಕು ಮತ್ತು ಸೇವಾ ತೆರಿಗೆ Output Tax | 3,55,349.03 | | | | 22,81,497.00 | |
| 7,545.00 | ಷೇರು ಅಮಾನತ್ | 0.00 | | | ಪ್ರಸಕ್ತ ಸಾಲಿನ ಸವಕಳಿ (-) | 2,24,291.00 | |
| 72,47,197.00 | ಇತರೆ ಜಮಾಗಳು | 1,15,20,589.00 | | **22,42,897.00** | ಸವಕಳಿ ಜಾತ | | **20,57,206.00** |
| 37,164.00 | ನಗದು ಪಾವತಿ ಮೇಲಿನ ಆದಾಯ ತೆರಿಗೆ | 43,052.00 | | | | | |
| 6,42,645.00 | ಠೇವಣಾತಿಗಳ ಮೇಲಿನ ಆದಾಯ ತೆರಿಗೆ | 5,53,101.00 | | | ಕಛೇರಿ ಸಲಕರಣೆಗಳು | | |
| 64,275.00 | ಯಶಸ್ವಿನಿ ಹೆಲ್ತ್ ಕೇರ್ ಸ್ಕೀಂ | 1,70,025.00 | | | ಹಿಂದಿನ ಸಾಲಿನ ಸವಕಳಿ ಜಾತ | 19,67,915.20 | |
| **3,14,21,776.51** | | | **4,61,96,341.30** | | ಪ್ರಸಕ್ತ ಸಾಲಿನಲ್ಲಿ ಖರೀದಿಸಿದ್ದು (+) | 1,51,960.00 | |
| | | | | | | 21,19,875.20 | |
| **2,72,16,502.69** | ನಿವ್ವಳ ಲಾಭ | | **2,66,07,625.43** | | ಪ್ರಸಕ್ತ ಸಾಲಿನ ಸವಕಳಿ (-) | 2,51,455.00 | |
| | | | | **19,67,915.20** | ಸವಕಳಿ ಜಾತ | | **18,68,420.20** |
| | | | | | ಗ್ರಂಥಾಲಯ ಪುಸ್ತಕಗಳು | | |
| | | | | | ಹಿಂದಿನ ಸಾಲಿನ ಸವಕಳಿ ಜಾತ | 7,528.50 | |
| | | | | | ಪ್ರಸಕ್ತ ಸಾಲಿನ ಸವಕಳಿ (-) | 753.00 | |
| | | | | **7,528.50** | ಸವಕಳಿ ಜಾತ | | **6,775.50** |

| | | | | | | | |
|---|---|---|---|---|---|---|---|
| | | | | | **ಬ್ಯಾಂಕಿನ ವಾಹನ-Maruti ECO** | | |
| | | | | | ಹಿಂದಿನ ಸಾಲಿನ ಸವಕಳಿ ಜಾತ | 3,17,599.95 | |
| | | | | | ಪ್ರಸಕ್ತ ಸಾಲಿನ ಸವಕಳಿ (-) | 47,640.00 | |
| | | | | **3,17,599.95** | ಸವಕಳಿ ಜಾತ | | **2,69,959.95** |
| | | | | | **ಬ್ಯಾಂಕಿನ ವಾಹನ- ವಿದ್ಯುತ್ ಚಾಲಿತ** | | |
| | | | | | ಹಿಂದಿನ ಸಾಲಿನ ಸವಕಳಿ ಜಾತ | 2,46,829.80 | |
| | | | | | ಪ್ರಸಕ್ತ ಸಾಲಿನಲ್ಲಿ ಖರೀದಿಸಿದ್ದು (+) | 10,000.00 | |
| | | | | | | 2,56,829.80 | |
| | | | | | ಪ್ರಸಕ್ತ ಸಾಲಿನ ಸವಕಳಿ (-) | 37,024.00 | |
| | | | | **2,46,829.80** | ಸವಕಳಿ ಜಾತ | | **2,19,805.80** |
